ಕರುನಾಡು ಎಗ್ಸಾಂ

# ಪ್ರಚಲಿತ ವಿದ್ಯಮಾನಗಳು

ಆಗಸ್ಟ್

2013

ಸಂಪರ್ಕಿಸಿ: KARUNADUEXAMS.COM

# ರಾಜ್ಯ

**ಹೈ-ಕ ಪ್ರದೇಶಾಭಿವೃದ್ಧಿಗೆ ಮಾರ್ಗಸೂಚಿ ವರದಿಯನ್ನು ನೀಡಿದ ಉಪಸಮಿತಿ:ವರದಿ**

ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ರಚನೆ, ಅಭಿವೃದ್ಧಿ ವೆಚ್ಚಕ್ಕಾಗಿ ನ್ಯಾಯ ಸಮ್ಮತ ನಿಧಿ ಹಂಚಿಕೆ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ. 70ರಿಂದ ಶೇ. 85ರಷ್ಟು ಮೀಸಲು. ಇವು ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ ಸಂವಿಧಾನದ 371ನೇ (ಜೆ) ತಿದ್ದುಪಡಿಯನ್ವಯ ನೀಡಿರುವ ವಿಶೇಷ ಸ್ಥಾನಮಾನದನ್ವಯ ಸಿಗಲಿರುವ ಸೌಲಭ್ಯಗಳು. ಈ ಕುರಿತಂತೆ ಸಚಿವ ಎಚ್.ಕೆ. ಪಾಟೀಲ್ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಂಪುಟ ಉಪಸಮಿತಿ ನೀಡಿದ ವರದಿ ಮತ್ತು ಅದಕ್ಕೆ ಕೆಲವೊಂದು ಮಾರ್ಪಾಡುಗಳನ್ನು ಮಾಡಿ ಮಂತ್ರಿಪರಿಷತ್ ಸಭೆಯ ಅನುಮೋದನೆಯೊಂದಿಗೆ ರೂಪಿಸಿರುವ ಮಾರ್ಗಸೂಚಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಮಂಡಿಸಿದ್ದಾರೆ. ರಾಷ್ಟ್ರಪತಿಗಳು ಅನುಮೋದನೆ ನೀಡಿದ ಬಳಿಕ ವಿಶೇಷ ಹೊಣೆಗಾರಿಕೆಯಡಿ ರಾಜ್ಯಪಾಲರು ಅಧಿಸೂಚನೆ ಹೊರಡಿಸಲಿದ್ದಾರೆ ಎಂದು ಮುಖ್ಯಮಂತ್ರಿಗಳು ಹೇಳಿದರು.

**ವರದಿಯಲ್ಲಿ ಏನಿದೆ?**

- ಶಿಕ್ಷಣ ಹಾಗೂ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಹುಟ್ಟಿನಿಂದ ಅಥವಾ ವಲಸೆಯಿಂದ ಆ ಪ್ರದೇಶದಲ್ಲಿರುವ ವಿದ್ಯಾರ್ಥಿಗಳಿಗೆ ಮೀಸಲು ನಿಗದಿಪಡಿಸಲಾಗಿದೆ. ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಶೇ. 70 ಮತ್ತು ರಾಜ್ಯ ಮಟ್ಟದಲ್ಲಿ ಶೇ. 8ರಷ್ಟು ಸೀಟುಗಳನ್ನು ಕ್ರಮವಾಗಿ ಸ್ಥಳೀಯ ಮತ್ತು ರಾಜ್ಯ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ನೀಡಬೇಕು.
- ಅದೇ ರೀತಿ ರಾಜ್ಯ ಸರ್ಕಾರದ ಮತ್ತು ಸರ್ಕಾರದ ಅಧೀನದಲ್ಲಿರುವ ನಿಗಮ, ಮಂಡಳಿ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಹುದ್ದೆಗಳನ್ನು ಗುರುತಿಸಿ ನೇರ ನೇಮಕಾತಿ ಅಥವಾ ಬಡ್ತಿ ನೀಡಲು ಮೀಸಲು ನಿಗದಿಪಡಿಸಬೇಕು. ಎ ಮತ್ತು ಬಿ ವರ್ಗದ ಹುದ್ದೆಗಳಿಗೆ ಶೇ. 75, ಸಿ ವರ್ಗದ ಹುದ್ದೆಗಳಿಗೆ ಶೇ. 80 ಮತ್ತು ಡಿ ವರ್ಗದ ಹುದ್ದೆಗಳಿಗೆ ಶೇ. 85 ಮೀಸಲು ನೀಡಬೇಕು.
- ಈ ಆದೇಶ ರಾಜ್ಯ ಮಟ್ಟದ ಸರ್ಕಾರಿ ಕಚೇರಿ ಮತ್ತು ಸಂಸ್ಥೆಗಳಲ್ಲಿ ಶೇ. 8ರಷ್ಟು ಮೀಸಲು ಕಲ್ಪಿಸುತ್ತದೆ. ಜತೆಗೆ ಕಿರಿಯ ಸಮೂಹ ಎ ವರ್ಗದವರೆಗೂ ಬಡ್ತಿಯಲ್ಲಿ ಮೀಸಲು ಕಲ್ಪಿಸುತ್ತದೆ.

**ಇತರೆ ಕಾರ್ಯಕ್ರಮಗಳು:**

- ಇದಲ್ಲದೆ ಸಾಮಾಜಿಕ, ಆರ್ಥಿಕ, ಮೂಲಸೌಕರ್ಯಗಳು ಮತ್ತು ಇನ್ನಿತರ ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ 22 ಅಂಶಗಳ ಕುರಿತು ಶಿಫಾರಸು ಮಾಡಲಾಗಿದೆ.
- ಈ ಪ್ರದೇಶಗಳ ಶೈಕ್ಷಣಿಕ ಸಂಸ್ಥೆಗಳಿಗೆ ನೀಡಬಹುದಾದ ವಿಶೇಷ ಸಹಾಯಾನುದಾನವನ್ನು ಸರ್ಕಾರ ಶೀಘ್ರದಲ್ಲೇ ಪ್ರಕಟಿಸಬೇಕು.
- ಈ ಭಾಗದಲ್ಲಿ ಜಾರಿಗೊಳಿಸಬಹುದಾದ ವಿಶೇಷ ಕೈಗಾರಿಕಾ ಬಂಡವಾಳ ನೀತಿ ಮತ್ತು ಮೂಲ ಸೌಕರ್ಯ ನೀತಿಯನ್ನು ಸರ್ಕಾರ ಶೀಘ್ರವೇ ಪ್ರಕಟಿಸಬೇಕು.
- ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆಯ ಅನುಪಾತಕ್ಕೆ ಅನುಸಾರವಾಗಿ ಪ.ಜಾತಿ ಮತ್ತು ಪಂಗಡದ ವಿಶೇಷ ಘಟಕ ಉಪಯೋಜನೆಗಳನ್ನು ವಿಸ್ತರಿಸಬೇಕು ಎಂಬ ಶಿಫಾರಸುಗಳನ್ನು ಮಾಡಲಾಗಿದೆ.
- ಅದೇ ರೀತಿ ಮಹಿಳೆಯರ ಸ್ಥಾನಮಾನ ಕುರಿತಂತೆ ಅಭಿವೃದ್ಧಿ ಮೂಲದಲ್ಲಿ ಪುರುಷರಿಗೆ ಸಮನಾಗಿ ತರಲು ಮಹಿಳೆಯರಿಗೆ ಆರೋಗ್ಯ, ಪೌಷ್ಟಿಕತೆ, ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಬೇಕು.

- ಮಕ್ಕಳ ಅಪೌಷ್ಟಿಕತೆ ಮತ್ತು ಶೈಕ್ಷಣಿಕ ಅಗತ್ಯತೆಗೆ ಅನುಗುಣವಾಗಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು ಎಂದು ಸಂಪುಟ ಉಪಸಮಿತಿ ಶಿಫಾರಸು ಮಾಡಿದೆ.

**ಆದ್ಯತೆಯ ಅಂಶಗಳು:**

- ಅನುಚ್ಛೇದ 371(ಜೆ) ತಿದ್ದುಪಡಿ ಜಾರಿಗೊಳಿಸುವ ನಿಟ್ಟಿನಲ್ಲಿ ಕೆಲ ಅಂಶಗಳನ್ನು ಆದ್ಯತೆಗಳೆಂದು ಗುರುತಿಸಲಾಗಿದೆ. ಪರಿಣಾಮಕಾರಿಯಾದ ಅನುಷ್ಠಾನ ಕಾರ್ಯಕ್ರಮ ಜಾರಿಗೊಳಿಸಬೇಕು. ರಾಜ್ಯ, ಪ್ರಾದೇಶಿಕ, ಜಿಲ್ಲಾ ಮತ್ತು ಕ್ಷೇತ್ರ ಮಟ್ಟದಲ್ಲಿ ಯೋಜನೆ ಮತ್ತು ಕಾರ್ಯಕ್ರಮ ರೂಪಿಸಲು ಸಾಂಸ್ಥಿಕ ವ್ಯವಸ್ಥೆಗಳನ್ನು ಕಲ್ಪಿಸಬೇಕು.
- ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕೆ ಸಾಂಸ್ಥಿಕ ವ್ಯವಸ್ಥೆ ರೂಪಿಸಬೇಕು. ಅನುದಾನದ ಸದ್ಬಳಕೆಗೆ ಪರಿಣಾಮಕಾರಿ ತಾಂತ್ರಿಕತೆ ಅಳವಡಿಸಬೇಕು ಮತ್ತು ರಾಜ್ಯಮಟ್ಟದಲ್ಲಿ ಕಾರ್ಯಕ್ರಮ ಜಾರಿಗೊಳಿಸಲು ಮತ್ತು ಮೇಲ್ವಿಚಾರಣೆಗೆ ಪರಿಣಾಮಕಾರಿ ವ್ಯವಸ್ಥೆ ಜಾರಿಗೆ ತರಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.
- ಅಭಿವೃದ್ಧಿ ಮಂಡಳಿ ಕಾರ್ಯಗಳು ಸಲಹಾ ಪರಿಷತ್ತು ಶಿಫಾರಸು ಮಾಡುವ ಅಭಿವೃದ್ಧಿ ಯೋಜನೆ ಮತ್ತು ನೀತಿ ನಿಯಮಗಳನ್ನು ಪರಿಗಣಿಸುವುದು. ವಿವಿಧ ವಲಯಗಳ ಸಾಂದರ್ಭಿಕ ಮಟ್ಟ ತಿಳಿದುಕೊಳ್ಳುವುದು ಮತ್ತು ಅಭಿವೃದ್ಧಿ ವೆಚ್ಚದ ಮಟ್ಟದ ಬಗ್ಗೆ ಸಲಹೆ ನೀಡುವುದು.
- ರಾಜ್ಯಪಾಲರಿಗೆ ಆ ಪ್ರದೇಶಕ್ಕೆ ಅಗತ್ಯವಿರುವ ನೀತಿ ನಿಯಮಗಳ ಬಗ್ಗೆ ಸಲಹೆ ನೀಡುವುದು ಹಾಗೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಹಣ ಒದಗಿಸುವುದು. ಹುದ್ದೆಗಳ ಸೃಜನೆ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡುವ ಬಗ್ಗೆ ಸಲಹೆ ನೀಡುವುದು.
- ಮಂಡಳಿ ಸದಸ್ಯರಾಗಿ ಸಂಸದರು, ಶಾಸಕರು, ಜಿಲ್ಲಾ ಪಂಚಾಯ್ತಿ, ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಇರುತ್ತಾರೆ. ರಾಜ್ಯಪಾಲರು ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸಿ ಹಾಗೂ ರಾಜ್ಯದ ಅಗತ್ಯತೆಗಳನ್ನು ಪರಿಗಣನೆಗೆ ತೆಗೆದುಕೊಂಡು ಆ ಪ್ರದೇಶಕ್ಕೆ ಸಮನಾಗಿ ಹಣ ಒದಗಿಸುವ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.

## ರಾಜ್ಯದ 10 ಭಾಷೆಗಳು ಅಳಿವಿನ ಅಂಚಿನಲ್ಲಿ: ಸಮೀಕ್ಷೆ

ರಾಜ್ಯದಲ್ಲಿ ಮಾತನಾಡುವ 50 ಭಾಷೆಗಳಲ್ಲಿ 10 ಭಾಷೆಗಳು ಅಳಿವಿನ ಅಂಚಿನಲ್ಲಿರುವ ಆಘಾತಕಾರಿ ಅಂಶ ಸಮೀಕ್ಷೆಯಿಂದ ತಿಳಿದು ಬಂದಿದೆ. "ಪೀಪಲ್ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯಾ" ಕೈಗೊಂಡಿದ್ದ ಸಮೀಕ್ಷೆಯಲ್ಲಿ ಈ ಮಾಹಿತಿ ಬೆಳಕಿಗೆ ಬಂದಿದ್ದು, 8 ಭಾಷೆಗಳು ಅಳಿವಿನ ಅಂಚಿನಲ್ಲಿದ್ದರೆ, 2 ಭಾಷೆಗಳು ಅಪಾಯದ ಮಟ್ಟ ತಲುಪಿರುವುದಾಗಿ ಹೇಳಲಾಗಿದೆ.

- ಸಮೀಕ್ಷೆಯಲ್ಲಿ ಹೇಳಿರುವಂತೆ ರಾಜ್ಯದ ಪ್ರಮುಖ ಬುಡಕಟ್ಟು ಜನಾಂಗಗಳ ಭಾಷೆಗಳಾದ ಕೊರಗ, ಬಡಗ, ಎರವ, ಇರುಳ, ಸೋಲಿಗ, ಗೌಳಿ, ಜೇನು ಕುರುಬ ಮತ್ತು ಬೆಟ್ಟ ಕುರುಬ ಭಾಷೆಗಳು ಸಂಭಾವ್ಯ ವಿಪತ್ತಿನಲ್ಲಿವೆ ಎನ್ನಲಾಗಿದೆ.
- ಇನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಸಿದ್ದಿ ಬುಡಕಟ್ಟು ಜನಾಂಗದ ಸಿದ್ದಿ ಭಾಷೆ ಮತ್ತು ಹಕ್ಕಿ ಪಿಕ್ಕಿ ಅಲೆಮಾರಿ ಜನಾಂಗದ ಹಕ್ಕಿ ಪಿಕ್ಕಿ ಭಾಷೆ ಅಪಾಯದ ಮಟ್ಟ ತಲುಪಿರುವುದಾಗಿ ಸಮೀಕ್ಷೆ ಹೇಳಿದೆ.

- 10,000 ಕ್ಕಿಂತಲೂ ಕಡಿಮೆ ಜನ ಮಾತನಾಡುವ ಭಾಷೆಯನ್ನು ಸಂಭಾವ್ಯ ವಿಪತ್ತಿನಲ್ಲಿರುವ (Potentially Endangered) ಭಾಷೆ ಎಂತಲೂ ಮತ್ತು ಯುವ ಜನಾಂಗ ಬಳಸದೇ ಇರುವ ಭಾಷೆಯನ್ನು ಅಪಾಯದ ಅಂಚಿನಲ್ಲಿರುವ ಭಾಷೆ ಎಂದು ವಿಂಗಡಿಸಲಾಗಿದೆ.
- ಸಮೀಕ್ಷೆಯ ಸಂಪೂರ್ಣ ಚಿತ್ರಣವನ್ನು ಸೆಪ್ಟೆಂಬರ್ 5 ರಂದು ಡಾ.ರಾಧಕೃಷ್ಣನ್ ಅವರ ಹುಟ್ಟದಿನದಂದು ಬಿಡುಗಡೆಗೊಳಿಸಲಾಗುವುದು. ರಾಷ್ಟ್ರವ್ಯಾಪ್ತಿ ನಡೆಸಿರುವ ಈ ಸಮೀಕ್ಷೆಯ ಕನ್ನಡ ಅವತರಣಿಕೆಯನ್ನು ಅಕ್ಷರ ಪ್ರಕಾಶನ ಹೊರತರಲಿದೆ. ಕರ್ನಾಟಕದ 24 ಕ್ಕೂ ಹೆಚ್ಚು ತಜ್ಞರು ಈ ಸಮೀಕ್ಷೆಯಲ್ಲಿ ಭಾಗವಹಿಸಿದ್ದಾರೆ.

**ಕರ್ನಾಟಕ: ವಿಪತ್ತು ನಿರ್ವಹಣಾ ಪಡೆಗೆ ಶೀಘ್ರವೇ ಚಾಲನೆ**

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸೂಚನೆಯಂತೆ ರಾಜ್ಯದಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಪಡೆಯನ್ನು ಶೀಘ್ರವೇ ನಿರ್ಮಿಸಲಾಗುವುದೆಂದು ರಾಜ್ಯ ವಿಪತ್ತು ಪ್ರಾಧಿಕಾರದ ಮುಖ್ಯಸ್ಥರಾದ ತುಷಾರ್ ಗಿರಿನಾಥ್ ಹೇಳಿದ್ದಾರೆ.

- ರಾಜ್ಯದ ನಾಲ್ಕು ಕಡೆ ವಿಪತ್ತು ನಿರ್ವಹಣಾ ಪಡೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, 480 ಕ್ಕೂ ಹೆಚ್ಚು ಸಿಬ್ಬಂದಿಯನ್ನು ಒಳಗೊಂಡಿರಲಿದೆ.
- ಅಗ್ನಿಶಾಮಕ, ಪೊಲೀಸ್ ಮತ್ತು ಕೇಂದ್ರ ಕೈಗಾರಿಕ ಭದ್ರತಾ ಪಡೆಯಿಂದ ಸಿಬ್ಬಂದಿಯನ್ನು ಆಯ್ಕೆಮಾಡಲಾಗುವುದು.
- ರಾಜ್ಯದ ಬೆಂಗಳೂರು, ಬೆಳಗಾಂ, ಗುಲ್ಬರ್ಗ ಮತ್ತು ಮಂಗಳೂರಿನಲ್ಲಿ ಈ ಪಡೆಗಳನ್ನು ನಿಯೋಜಿಸಲಾಗುವುದು.
- ಈಗಾಗಲೇ ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಕೇಂದ್ರ ಸ್ಥಾನವನ್ನು ಸ್ಥಾಪಿಸುವ ಸಲುವಾಗಿ ಯಲಹಂಕದ ಬಳಿ ಎರಡು ಎಕರೆ ಜಮೀನನ್ನು ಮೀಸಲಿಡಲಾಗಿದೆ. ಮಹಾರಾಷ್ಟ್ರ, ಅಸ್ಸಾಂ, ಪಶ್ಚಿಮ ಬಂಗಾಳ, ಒಡಿಶಾ ರಾಜ್ಯಗಳ ಮಾದರಿಯಲ್ಲೇ ಈ ಪಡೆ ಜಾರಿಗೆ ಬರಲಿದೆ.

ವಿಪತ್ತು ಪಡೆಯ ಸ್ಥಾಪನೆಗೆ ತಗಲುವ ವೆಚ್ಚದಲ್ಲಿ ಶೇ 75 ರಷ್ಟನ್ನು ಕೇಂದ್ರ ಸರ್ಕಾರ ಭರಿಸಲಿದೆ. ಉಳಿದ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಲಿದೆ

**ದೇಶದಲ್ಲೇ ಪ್ರಥಮ ಬಾರಿಗೆ ರಸ್ತೆಗಳಲ್ಲಿ ವೈ-ಫೈ ಸಂಪರ್ಕ ಕಲ್ಪಿಸಲಿರುವ ರಾಜ್ಯ ಸರ್ಕಾರ**

ನಗರದ ಪ್ರತಿಷ್ಠಿತ ಮಹಾತ್ಮಗಾಂಧಿ (ಎಂ.ಜಿ) ರಸ್ತೆ ಹಾಗೂ ಬ್ರಿಗೇಡ್ ರಸ್ತೆಯಲ್ಲಿ ಅಡ್ಡಾಡುವ ಹೈ-ಫೈ ಜನರಿಗಾಗಿ 256 ಕೆಬಿಪಿಎಸ್ ವೇಗದ ಉಚಿತ ವೈ-ಫೈ ಸೇವೆ ಲಭ್ಯವಾಗಲಿದೆ. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಸಮಿತಿ ಅಧ್ಯಕ್ಷ ಮೋಹನ್ ದಾಸ್ ಪೈ ಅವರ ಕನಸಿನ ಕೂಸಾದ ಉಚಿತ ವೈ-ಫೈ ಸೇವೆ ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಉದ್ಯಾನ ನಗರಿಯಲ್ಲಿ ಲಭ್ಯವಾಗಲಿದೆ.

**ಯೋಜನೆಯ ವಿವರಗಳು:**

- ಇನ್ಫೋಸಿಸ್‌ನ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಮೋಹನ್‌ದಾಸ್ ಪೈ ಅಧ್ಯಕ್ಷತೆಯ ಸಮಿತಿ 2012ರ ಜನವರಿಯಲ್ಲಿ ವರದಿ ನೀಡಿದ್ದರು.
- ಬಜೆಟ್ ಅನುಷ್ಠಾನದ ಹಿನ್ನೆಲೆಯಲ್ಲಿ ಐಟಿ-ಬಿಟಿ ಇಲಾಖೆ ಸೂಚನೆಯಿಂದ ಕೂಡಲೇ ಕಾರ್ಯಪ್ರವೃತ್ತವಾದ ಡಿ-ವಿಒಐಎಸ್ ಬ್ರಾಡ್‌ಬ್ಯಾಂಡ್ ಕಂಪನಿ ಅಗತ್ಯ ಸಿದ್ಧತೆ ಪೂರ್ಣಗೊಳಿಸಿದೆ.
- ಎಂ.ಜಿ. ರಸ್ತೆ ಮತ್ತು ಬ್ರಿಗೇಡ್ ರಸ್ತೆಯ ಸುಮಾರು 2.5 ಕಿ.ಮೀ ವ್ಯಾಪ್ತಿಗೆ ವೈ-ಫೈ ಸೇವೆ ಕಲ್ಪಿಸಲು ಈಗಾಗಲೇ ವ್ಯವಸ್ಥೆ ಮಾಡಲಾಗಿದೆ.
- ಎಂ.ಜಿ. ರಸ್ತೆಯಲ್ಲಿ 20 ಆಯಕ್ಸೆಸ್ ಪಾಯಿಂಟ್ (ಹಾಟ್‌ಸ್ಪಾಟ್) ಹಾಗೂ ಬ್ರಿಗೇಡ್ ರಸ್ತೆಯಲ್ಲಿ 4 ಆಯಕ್ಸೆಸ್ ಪಾಯಿಂಟ್‌ಗಳನ್ನು ಅಳವಡಿಸಲಾಗಿದೆ.
- ಪ್ರತಿ ಆಯಕ್ಸೆಸ್ ಪಾಯಿಂಟ್ 20 ಮೀಟರ್ (65 ಅಡಿ) ವ್ಯಾಪ್ತಿಯವರೆಗೂ ನೆಟ್‌ವರ್ಕ್ ನೀಡಲಿದೆ. 256 ಕೆಬಿಪಿಎಸ್ ವೇಗ ಈಗ ಪ್ರಾರಂಭಿಸುತ್ತಿರುವ ವೈ-ಫೈ 256 ಕೆಬಿಪಿಎಸ್ ವೇಗದ ಸೇವೆ ಒದಗಿಸಲಿದೆ.

**ಯಾರಿಗೆ ಅನುಕೂಲ?**

- ಪ್ರತಿ ಕಿ.ಮೀ ಸೇವೆಗೆ ಸುಮಾರು 7 ಲಕ್ಷ ವೆಚ್ಚ ತಗಲುವ ಉಚಿತ ವೈ-ಫೈ ಸೇವೆಯನ್ನು ವೈ-ಫೈ ಆಪ್ಷನ್ ಹೊಂದಿರುವ ಪರ್ಸನಲ್ ಕಂಪ್ಯೂಟರ್, ವಿಡಿಯೋ ಗೇಮ್ಸ್ ಕನ್ಸೋಲ್ಸ್, ಸ್ಮಾರ್ಟ್‌ಫೋನ್, ಕೆಲವು ಡಿಜಿಟಲ್ ಕ್ಯಾಮೆರಾ, ಟ್ಯಾಬ್ಲೆಟ್, ಡಿಜಿಟಲ್ ಆಡಿಯೋ ಪ್ಲೇಯರ್ ಬಳಕೆದಾರರು ಉಚಿತವಾಗಿ ಪಡೆಯಬಹುದು.
- ಸಾರ್ವಜನಿಕರು ಸೇವೆಯನ್ನು ಮುಕ್ತವಾಗಿ ಬಳಕೆ ಮಾಡಲು ಅನುವಾಗುವಂತೆ ಡಬ್ಲೂಪಿಎಸ್ (ವೈ-ಫೈ ಪ್ರೊಟೆಕ್ಟೆಡ್ ಸೆಟ್‌ಅಪ್) ಹಾಗೂ ಡಬ್ಲೂಇಪಿ ನೆಟ್‌ವರ್ಕ್ ಅಳವಡಿಕೆಯಲ್ಲಿ ಕೆಲ ನಿಯಮಾವಳಿ ಸಡಿಲಗೊಳಿಸುತ್ತಿರುವುದಾಗಿ ಮೂಲಗಳು ತಿಳಿಸಿವೆ.

**ರಾಜ್ಯ ಸರ್ಕಾರದ ಸ್ವಬೀಜಾಭಿವೃದ್ಧಿ ಕಾರ್ಯಕ್ರಮದ ವಿಸ್ತೃತ ನೋಟ:ವರದಿ**

ಸ್ವಬೀಜಾಭಿವೃದ್ಧಿಗೆ ರಾಜ್ಯ ಸರ್ಕಾರ 2013-14ನೇ ಸಾಲಿನ ಆಯ-ವ್ಯಯದಲ್ಲಿ ಒತ್ತುಕೊಟ್ಟಿರುವುದು ಒಂದು ಮಹತ್ವದ ವಿಷಯ ಹಾಗೂ ಸ್ವಾಗತಾರ್ಹ. ಅದನ್ನು ಅನುಷ್ಠಾನಗೊಳಿಸುವ ಸಲುವಾಗಿ ಮಾರ್ಗಸೂಚಿಗಳನ್ನು ತಯಾರಿಸುವಲ್ಲಿ ಕೆಲವು ವಿಧಾನಗಳ ಅಳವಡಿಕೆ ಅನಿವಾರ್ಯ. ಇಲ್ಲವಾದರೆ ಯೋಜನೆ ಯಶಸ್ಸು ಕಾಣದಿರಬಹುದು.

**ಸ್ವಬೀಜವೆಂದರೆ ಏನು?**

ಆಯಾ ಪ್ರದೇಶಗಳಲ್ಲಿ ಅಲ್ಲಿನ ರೈತರು ಇಷ್ಟಪಟ್ಟ ತಳಿಗಳನ್ನು ಮುಂದೆಯೂ ಬೆಳೆಯಲು ಬೀಜವನ್ನು ಉಳಿಸಿ, ಬೆಳೆಸಿ ತಳಿಯ ಗುಣಮಟ್ಟವನ್ನು ಕಾಪಾಡಿಕೊಂಡು ಹೋಗುವುದು. ಹೀಗೆ ಮಾಡುವಾಗ ರೈತರು ಅನುಸರಿಸುವ ಮಾರ್ಗ ವೈಜ್ಞಾನಿಕವಾಗಿರಬೇಕು.

**ಅನುಸರಿಸಬೇಕಾದ ಕ್ರಮಗಳೇನು?**

- ಯಾವುದೇ ತಳಿಯಾಗಲಿ ಅದಕ್ಕೆ ಅದರದ್ದೇ ಆದ ಗುಣ ವಿಶೇಷಗಳಿರುತ್ತವೆ. ಸ್ವಬೀಜಾಭಿವೃದ್ಧಿಗೆ ಯೋಗ್ಯ ಪ್ರದೇಶಗಳನ್ನು ಗುರುತಿಸಿ ಅಲ್ಲಿ ಜನಪ್ರಿಯವಾಗಿರುವ ತಳಿಗಳನ್ನು ಈ ಯೋಜನೆಯಡಿ ಆಯ್ಕೆಮಾಡಬೇಕು.
- ಗುರುತಿಸಲ್ಪಟ್ಟ ತಳಿಗಳನ್ನು ವೈಜ್ಞಾನಿಕವಾಗಿ, ಅಂದರೆ ಸರಿಯಾದ ಸಮಯದಲ್ಲಿ ಕೊಯ್ಲು ಮಾಡಿ ಅವುಗಳು ತಮ್ಮ ನೈಜ ಗುಣ ಹೊಂದಿರುವುದನ್ನು ಮಾತ್ರ ಪರಿಗಣಿಸಿ ಅವುಗಳಿಗೆ ಹೊಂದಿಕೊಳ್ಳುವ ಬೀಜವರ್ಗಗಳ ಸರಪಳಿಗೆ ಸೇರ್ಪಡಿಸಬೇಕು.
- ಹೀಗೆ ಸೇರ್ಪಡೆ ಮಾಡಲ್ಪಟ್ಟ ತಳಿಗಳು ಸಂಕರಣ ತಳಿಗಳಿರಬಹುದು, ಅಧಿಕ ಇಳುವರಿ ತಳಿಗಳಿರಬಹುದು ಅಥವಾ ನಾಡ ತಳಿಗಳಿರಬಹುದು. ಈ ಎಲ್ಲಾ ತಳಿಗಳ ಬೀಜ ಸಂವರ್ಧನೆಗೆ ಸಹಾಯಧನ ದೊರೆಯುವಂತಾಗಬೇಕು.
- ಬೀಜದ ಗುಣಮಟ್ಟ ಸೂಕ್ಷ್ಮ ವಾತಾವರಣಗಳಿಗೆ ಪ್ರತಿಕ್ರಿಯಿಸುವುದರಿಂದ ಸಂಖ್ಯೆ ಅಭಿವೃದ್ಧಿಯ ಜೊತೆಗೆ ಗುಣಮಟ್ಟ ಕಾಪಾಡಿಕೊಳ್ಳಲು ಬೇಕಾದ ದಾಸ್ತಾನನ್ನೂ ನಿರ್ಮಿಸಬೇಕು ಮತ್ತು ದಾಸ್ತಾನಿನಲ್ಲಿರಬಹುದಾದ ಕಾಲ ಪ್ರಮಾಣವನ್ನೂ ಅರಿತಿರಬೇಕು.
- ಈಗ ಬಳಕೆಯಲ್ಲಿರುವ ರೈತರ ಮತ್ತು ಇತರ ಪರಿಷ್ಕರಣಾ ಕೇಂದ್ರಗಳನ್ನು ವೈಜ್ಞಾನಿಕವಾಗಿ ನವೀಕರಿಸಬೇಕು.

**ಧಾರವಾಡ ಹಾಗೂ ಗುಲ್ಬರ್ಗಾ ಸಂಚಾರಿ ಹೈಕೋರ್ಟ್ ಪೀಠಗಳನ್ನು ಕಾಯಂಗೊಳಿಸಿ ರಾಷ್ಟ್ರಪತಿ ಆದೇಶ**

ರಾಜ್ಯದ ಧಾರವಾಡ ಹಾಗೂ ಗುಲ್ಬರ್ಗ ಸಂಚಾರಿ ಹೈ ಕೋರ್ಟ್ ಪೀಠಗಳನ್ನು ಕಾಯಂಗೊಳಿಸಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಔಪಚಾರಿಕ ಆದೇಶ ಹೊರಡಿಸಿದ್ದಾರೆ. ಧಾರವಾಡ ಹೈಕೋರ್ಟ್ ಪೀಠ ಆಗಸ್ಟ್ ತಿಂಗಳ 24 ರಂದು ಕಾಯಂ ಪೀಠವಾಗಿ ಪರಿವರ್ತನೆಗೊಳ್ಳಲಿದೆ. ಗುಲ್ಬರ್ಗಾ ಸಂಚಾರಿ ಪೀಠ ಆಗಸ್ಟ್ 31 ರಂದು ಅಧಿಕೃತವಾಗಿ ಕಾಯಂ ಪೀಠ ಆಗಲಿದೆ ಎಂದು ಕೇಂದ್ರ ಕಾನೂನು ಸಚಿವಾಲಯ ತಿಳಿಸಿದೆ.

**ಉಪಯೋಗಗಳೇನು?**

- ರಾಜ್ಯದ ಮುಖ್ಯ ನ್ಯಾಯಮೂರ್ತಿಗಳು ತಕ್ಷಣ ಎರಡು ಹೈಕೋರ್ಟ್ ಪೀಠಗಳಿಗೆ ಕಾಯಂ ಆಧಾರದ ಮೇಲೆ ನ್ಯಾಯಮೂರ್ತಿಗಳನ್ನು ನೇಮಕ ಮಾಡಲಿದ್ದಾರೆ. ಇದುವರೆಗೆ ಪ್ರಕರಣಗಳ ವಿಚಾರಣೆಗೆ ಸರದಿ ಮೇಲೆ ಪ್ರಧಾನ ಪೀಠದಿಂದ ನ್ಯಾಯಮೂರ್ತಿಗಳು ಹೋಗಿ ಬರುತ್ತಿದ್ದರು.

- ಧಾರವಾಡ ಹೈಕೋರ್ಟ್ ಪೀಠವು ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ ಹಾಗೂ ಕೊಪ್ಪಳ ಜಿಲ್ಲೆಗಳ ವ್ಯಾಪ್ತಿಯ ಪ್ರಕರಣಗಳ ವಿಚಾರಣೆ ನಡೆಸಲಿದೆ.
- ಗುಲ್ಬರ್ಗ ಪೀಠವು ಬೀದರ್, ವಿಜಾಪುರ, ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳ ಪ್ರಕರಣಗಳ ವಿಚಾರಣೆ ನಡೆಸಲಿದೆ.
- ಮುಖ್ಯ ನ್ಯಾಯಮೂರ್ತಿ ಇವೆರಡು ಪೀಠಗಳ ಮುಂದೆ ವಿಚಾರಣೆಯಲ್ಲಿರುವ ಯಾವುದೇ ಪ್ರಕರಣಗಳನ್ನು ವಿಚಾರಣೆಗಾಗಿ ಪ್ರಧಾನ ಪೀಠಕ್ಕೆ ವರ್ಗಾಯಿಸುವ ಅಧಿಕಾರ ಹೊಂದಿದ್ದಾರೆ.
- ಧಾರವಾಡದಲ್ಲಿ ಸಂಚಾರಿ ಪೀಠ ಕಾರ್ಯಾರಂಭ ಮಾಡಿದಾಗಿನಿಂದ ಕಳೆದ ಜುಲೈ 22ರವರೆಗೆ 1,24 ಲಕ್ಷ ಪ್ರಕರಣಗಳು ದಾಖಲಾಗಿದ್ದು, ಐವತ್ತು ಸಾವಿರ ಪ್ರಕರಣಗಳು ಇತ್ಯರ್ಥ ಆಗಿವೆ

**ಹೈದರಾಬಾದ್- ಕರ್ನಾಟಕ ಪ್ರದೇಶಕ್ಕೆ ವಿಶೇಷ ಸೌಲಭ್ಯ ಜಾರಿ ಬಗ್ಗೆ ಉಪಸಮಿತಿ ವರದಿಯ ಸಂಪೂರ್ಣ ಮಾಹಿತಿ**

ಹೈದರಾಬಾದ್- ಕರ್ನಾಟಕ ಪ್ರದೇಶಕ್ಕೆ ವಿಶೇಷ ಸೌಲಭ್ಯ ಜಾರಿ ಅಧಿಕಾರವನ್ನು ರಾಜ್ಯಪಾಲರಿಗೆ ನೀಡಲು ಒಪ್ಪಿದ್ದರೂ ತನ್ನ ಮರ್ಜಿಗೆ ಅವಕಾಶ ನೀಡುವ ಬಾಗಿಲನ್ನು ಸರ್ಕಾರ ಜಾಣತನದಿಂದ ತೆರೆದಿರಿಸಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ.ಪಾಟೀಲ್ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ತಯಾರಿಸಿರುವ ಮಾರ್ಗಸೂಚಿ ವರದಿಯಲ್ಲಿ ಈ ಪ್ರಸ್ತಾವ ಮಾಡಲಾಗಿದೆ. ಈ ಮೂಲಕ ಸಂವಿಧಾನದ 371ನೇ ಜೆ ತಿದ್ದುಪಡಿ ಮೂಲಕ ಹೈದ್ರಾಬಾದ್- ಕರ್ನಾಟಕ ಪ್ರದೇಶಕ್ಕೆ ಕೇಂದ್ರ ನೀಡುವ ವಿಶೇಷ ಸವಲತ್ತು ಜಾರಿಗೆ ರಾಜ್ಯಪಾಲರಿಗೆ ವಿಶೇಷ ಅಧಿಕಾರವಿರುತ್ತದೆಯಾದರೂ ಮುಖ್ಯಮಂತ್ರಿ ಹಾಗೂ ಮಂತ್ರಿ ಪರಿಷತ್‌ನ ಇಚ್ಛೆಗೆ ಧಕ್ಕೆ ಬರುವುದಿಲ್ಲ. ಇಲ್ಲಿ ರಾಜ್ಯಪಾಲರನ್ನು ಕೇವಲ 'ಉತ್ಸವಮೂರ್ತಿ' ಪೀಠಕ್ಕೆ ಸೀಮಿತಗೊಳಿಸಲಾಗಿದೆ. ವಿಧೇಯಕದ ಜಾರಿಗೆ ಗುಲ್ಬರ್ಗದಲ್ಲಿ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸಲು ನಿರ್ಧರಿಸಲಾಗಿದೆ. ಇದರ ಕಾರ್ಯವಿಧಾನದಲ್ಲಿ ರಾಜ್ಯಪಾಲರ ಅಧಿಕಾರ ಚಲಾವಣೆಗೆ ಪರೋಕ್ಷವಾಗಿ ಕತ್ತರಿ ಹಾಕಲಾಗಿದೆ.

**ಹೇಗೆ ಅಂಕುಶ?:**

ವಿಧೇಯಕದಲ್ಲಿರುವ ರಾಜ್ಯಪಾಲರು ಮತ್ತು ಮಂತ್ರಿ ಪರಿಷತ್ತಿನ ಸಲಹೆ ಮೇರೆಗೆ ಆದೇಶ ಎಂಬ ಪದಪುಂಜದ ಕುರಿತು ಸಮಿತಿ ವಿಸ್ತೃತವಾಗಿ ಚರ್ಚೆ ಮಾಡಿದೆ. ಕೊನೆಯಲ್ಲಿ 'ರಾಜ್ಯಪಾಲರ ಮೂಲಕ' ಎಂಬುದನ್ನೇ ಒಪ್ಪಿಕೊಂಡಿದೆ. ಆದರೆ ಅಭಿವೃದ್ಧಿ ಸಂಪನ್ಮೂಲ ಹಂಚಿಕೆ, ಆಯವ್ಯಯ ತಯಾರಿಕೆ ಮತ್ತು ಮಂಡನೆ ಸಂದರ್ಭದಲ್ಲಿ ಸಚಿವ ಸಂಪುಟದ ಅಸ್ತಿತ್ವವನ್ನು ಅವರು ಹೊಂದಬೇಕಾಗುತ್ತದೆ. ಈ ಮಾರ್ಗಸೂಚಿ ಪ್ರಕಾರ ಸರ್ಕಾರ ಪ್ರತ್ಯೇಕ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರಚಿಸುತ್ತದೆ. ಇದರ ಕೇಂದ್ರಸ್ಥಾನ ಗುಲ್ಬರ್ಗದಲ್ಲಿ ಇರಲಿದ್ದು, ಆ ಭಾಗದ ಸಚಿವರು, ಶಾಸಕರು ಹಾಗೂ ಸ್ಥಳೀಯ ಪ್ರತಿನಿಧಿಗಳು, ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಮಂಡಳಿಗಾಗಿ ಅಭಿವೃದ್ಧಿ ವೆಚ್ಚನಿಧಿ ಸ್ಥಾಪಿಸಲಾಗಿದ್ದು, ಇದರಲ್ಲಿ ರಾಜ್ಯಪಾಲರ ಅಧಿಕಾರ ಗೌಣವಾಗುತ್ತದೆ. ಇದರ ಪ್ರಕಾರ ರಾಜ್ಯಪಾಲರು ಸಮಗ್ರ ರಾಜ್ಯದ ಅಗತ್ಯಕ್ಕೆ ಒಳಪಟ್ಟು ಮಂಡಳಿಯ ವ್ಯಾಪ್ತಿ ಪ್ರದೇಶದಲ್ಲಿ ನಿಧಿಯ ನ್ಯಾಯಸಮ್ಮತ ಹಂಚಿಕೆಯನ್ನು ಖಚಿತಪಡಿಸಿಕೊಳ್ಳಬೇಕು. ಆ ಸಂದರ್ಭದಲ್ಲಿ ಮಂಡಳಿ ಮಾಡಿದ ಶಿಫಾರಸುಗಳನ್ನು ಅಂದರೆ ಪರೋಕ್ಷವಾಗಿ ಸರ್ಕಾರದ ಶಿಫಾರಸನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

**ಮಂಡಳಿ ಸದಸ್ಯರು ಯಾರು...?**

ಎಲ್ಲದಕ್ಕಿಂತ ಮುಖ್ಯವಾಗಿ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸುವ ಅಧಿಕಾರ ರಾಜ್ಯಪಾಲರಿಗೆ ಇರುವುದಿಲ್ಲ. ಇದನ್ನು ರಾಜ್ಯ ಸರ್ಕಾರ ನಿಭಾಯಿಸುವ ಜತೆಗೆ ಸದಸ್ಯರು ಮತ್ತು ಅಧ್ಯಕ್ಷರ ನೇಮಕ ಅಧಿಕಾರವೂ ಸರ್ಕಾರದ ಕೈಲೇ ಇರುತ್ತದೆ. ಮಂಡಳಿಗೆ ಹೈದರಾಬಾದ್-ಕರ್ನಾಟಕ ಪ್ರದೇಶದ ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು ಸದಸ್ಯರಾಗಿದ್ದು, ಅವರ ಪೈಕಿ ಯಾರಾದರೊಬ್ಬರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತದೆ. ಜತೆಗೆ ಒಂದು ವರ್ಷದ ಅವಧಿಗೆ ಸರದಿ ಪ್ರಕಾರ ವಿಧಾನಸಭೆಯ ೮ ಸದಸ್ಯರು ಹಾಗೂ ಒಬ್ಬ ಸಂಸದರನ್ನು, ಆರು ಜಿಲ್ಲೆಗಳ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಮೇಯರ್ ಹಾಗೂ ಯೋಜನೆ, ಹಣಕಾಸು, ನೀರಾವರಿ, ಕೃಷಿ, ಕೈಗಾರಿಕೆ, ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದ ಐವರು ತಜ್ಞರನ್ನು ನೇಮಕ ಮಾಡಲಾಗುತ್ತದೆ. ಜತೆಗೆ ಅಧಿಕಾರಿಗಳನ್ನು ಒಳಗೊಂಡ ಸಲಹಾ ಪರಿಷತ್ ಇರುತ್ತದೆ.

**ಇದರ ಜತೆಗೆ ಸಂಪುಟ ಉಪಸಮಿತಿ ವಿಧಿಸಿದ ಇತರೆ ಕಡಿವಾಣಗಳು ಹೀಗಿವೆ...**

- ರಾಜ್ಯಪಾಲರು ಯುಕ್ತವೆಂದು ಪರಿಗಣಿಸಿದ್ದಲ್ಲಿ ನಿಧಿ ಹಂಚಿಕೆಗೆ ಯಾವೊಬ್ಬ ವ್ಯಕ್ತಿ ಅಥವಾ ಸಂಸ್ಥೆಯಿಂದ ಸಲಹೆಯನ್ನು ಕೋರಬಹುದು.
- ಪ್ರದೇಶಾಭಿವೃದ್ಧಿಗೆ ಯೋಜನೆ ಮತ್ತು ಯೋಜನೇತರ ಅಥವಾ ಇವೆರಡರಿಂದಲೂ ಬೇರೆಯಾದ ನಿಧಿ (ಕೇಂದ್ರದ ಅನುದಾನ) ಹಂಚಿಕೆ ಮಾಡುವಾಗ ಮುಖ್ಯಮಂತ್ರಿಗಳ ಜತೆ ಸಮಾಲೋಚನೆ ಮಾಡಲೇಬೇಕು. ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸಿದ ನಂತರದ ಸಲಹೆ ಸ್ವೀಕರಿಸಿದ ಮೇಲೆಯೇ ಅಭಿವೃದ್ಧಿ ನಿಧಿಯ ಹಂಚಿಕೆ ಮಾಡಬೇಕು.
- ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಖಾಸಗಿ ಕೈಗಾರಿಕೆಗಳ ಬಂಡವಾಳ ಹೂಡಿಕೆಗೆ ಪ್ರೋತ್ಸಾಹಿಸುವಾಗ ಮತ್ತು ಹೊಸ ಶೈಕ್ಷಣಿಕ ಸಂಸ್ಥೆಗಳನ್ನು ತೆರೆಯುವುದಕ್ಕೆ ವಿಶೇಷ ಕಾರ್ಯನೀತಿ ತರುವಾಗಲೂ ಮುಖ್ಯಮಂತ್ರಿಗಳ ಜತೆಗೆ ಸಮಾಲೋಚಿಸಬೇಕು.
- ಇಷ್ಟು ಮಾತ್ರವಲ್ಲ, ರಾಜ್ಯಪಾಲರು ಮಾಡಿದ ನಿಧಿ ಹಂಚಿಕೆ ಮತ್ತು ವೆಚ್ಚಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸಬೇಕಾದ ಹಣಕಾಸು ತಃಖ್ತೆಯಲ್ಲಿ ಬಿಂಬಿತವಾಗತಕ್ಕದ್ದು ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ರಾಜ್ಯ ಸರ್ಕಾರ ಕೈಗೊಳ್ಳತಕ್ಕದ್ದು ಎಂದು ಸಲಹೆ ಮಾಡಲಾಗಿದೆ.
- ಇದೆಲ್ಲದರ ಜತೆಗೆ ಮಂಡಳಿ ತೆಗೆದುಕೊಳ್ಳುವ ನಿರ್ಧಾರವನ್ನು ತೀರ್ಮಾನಿಸುವುದಕ್ಕಾಗಿ ಸರ್ಕಾರ ಯಾವುದೇ ಕಾರಣಕ್ಕೂ ಕಡತಗಳನ್ನು ಬೆಂಗಳೂರಿಗೆ ತರುವಂತಿಲ್ಲ. ಎಲ್ಲ ಆಡಳಿತಾತ್ಮಕ ನಿರ್ಧಾರಗಳು ಮಂಡಳಿಯ ಸಮುಚಿತ ಪ್ರಾಧಿಕಾರ ಮತ್ತು ವ್ಯಾಪ್ತಿ ಪ್ರದೇಶದಲ್ಲೇ ನಿರ್ಧಾರವಾಗಬೇಕು.
- ಈ ಕಾರಣಕ್ಕಾಗಿಯೇ ರಾಜ್ಯಪಾಲರು ಮುಖ್ಯಸ್ಥರಾಗಿದ್ದರೂ ಮಂಡಳಿಗೇ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಜವಾಬ್ದಾರಿ ನೀಡಲಾಗಿದೆ. ಜತೆಗೆ ನಿಧಿ ಹಂಚಿಕೆ ಸಂದರ್ಭದಲ್ಲಿ ರಾಜ್ಯಪಾಲರು ನೀಡುವ ಸಲಹೆಗಳು

ಕೇವಲ ಸಲಹಾರೂಪದಲ್ಲಿ ಇರುತ್ತವೆಯೇ ಹೊರತು ಯಾವುದೇ ಕಾರಣಕ್ಕೂ ಸಂವಿಧಾನಾತ್ಮಕ ನಿರ್ದೇಶನಗಳಾಗಿ ಮಾರ್ಪಡುವುದಿಲ್ಲ.

**ಅನುದಾನ ರದ್ದಾಗುವಂತಿಲ್ಲ :**

ಹೈ-ಕ ಪ್ರದೇಶಕ್ಕೆ ಲಭಿಸುವ ಯಾವುದೇ ಸಂಪನ್ಮೂಲ ಹಾಗೂ ಅನುದಾನ ರದ್ದಾಗದಂತೆಯೂ ಸಚಿವ ಸಂಪುಟ ಉಪಸಮಿತಿ ಶಿಫಾರಸು ಮಾಡಿದೆ. ಸಂಪನ್ಮೂಲವನ್ನು ಖರ್ಚು ಮಾಡುವಲ್ಲಿ ಮತ್ತು ಬಳಸಿಕೊಳ್ಳುವಲ್ಲಿ ಈ ಭಾಗದ ಸಾಮರ್ಥ್ಯ ಅಲ್ಪಮಟ್ಟದಾಗಿದೆ. ಜತೆಗೆ ಆರ್ಥಿಕ ವರ್ಷದ ಕೊನೆಯಲ್ಲಿ ಆಯಾ ಆಯವ್ಯಯದ ನಿಧಿಗಳು ಖರ್ಚಾಗದೇ ಉಳಿದಿರುವ ಸಂಭವ ಜಾಸ್ತಿ ಇರುತ್ತದೆ. ಹೀಗಾಗಿ ಸಂಪನ್ಮೂಲವನ್ನು ರದ್ದುಗೊ ಳಿಸುವಂತಿಲ್ಲ ಎಂದು ಅಭಿಪ್ರಾಯಪಡಲಾಗಿದೆ. ಜತೆಗೆ ಶಿಕ್ಷಣ ಮತ್ತು ಉದ್ಯೋಗ ಮೀಸಲು ಸಂದರ್ಭದಲ್ಲಿ ಮಿತವ್ಯಯ ನೀತಿ ಅನುಸರಿಸುವಂತಿಲ್ಲ ಎಂದು ಸಲಹೆ ನೀಡಲಾಗಿದೆ

**ಕೆ.ಪಿ.ಎಸ್.ಸಿ.ಗೆ ಕಾಯಕಲ್ಪ ನೀಡಲು ಪಿ.ಸಿ.ಹೋಟಾ ಸಮಿತಿ ಶಿಫಾರಸ್ಸುಗಳನ್ನು ಅಂಗೀಕರಿಸಿದ ರಾಜ್ಯ ಸರ್ಕಾರ**

ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ತಡೆಯಲು ಅಲ್ಲಿರುವ ಶೇ.50ರಷ್ಟು ಸಿಬ್ಬಂದಿಯನ್ನು ಸರಕಾರದ ಇತರ ಇಲಾಖೆಗೆ ನಿಯೋಜನೆ ಮೂಲಕ ಬದಲಾಯಿಸಲು ಹಾಗೂ ಮುಖ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು ವ್ಯಕ್ತಿತ್ವ ಪರೀಕ್ಷೆ ಮಂಡಳಿ ಸದಸ್ಯರಿಗೆ ತಿಳಿಯದಂತೆ ಗೌಪ್ಯತೆ ಕಾಪಾಡಬೇಕು ಎಂದು ಕೇಂದ್ರ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಪಿ.ಸಿ.ಹೋಟಾ ಸಮಿತಿ ಶಿಫಾರಸು ಮಾಡಿದೆ. ಕೆಪಿಎಸ್‌ಸಿಯಲ್ಲಿ 288 ನೌಕರರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಕನಿಷ್ಠ 50ರಷ್ಟು ಮಂದಿಯನ್ನು ನಿಯೋಜನೆ ಮೇರೆಗೆ ಇತರ ಇಲಾಖೆ/ಸಂಸ್ಥೆ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು. ಸೂಕ್ಷ್ಮ /ರಹಸ್ಯ ಮಾಹಿತಿಯನ್ನು ನಿರ್ವಹಿಸುತ್ತಿರುವ ಗಣಕ ಶಾಖೆಯಲ್ಲಿ ಈ ಪ್ರಕ್ರಿಯೆಯನ್ನು ತ್ವರಿತವಾಗಿ ಮಾಡಬೇಕೆಂದು ಸಮಿತಿಯು ಸರಕಾರಕ್ಕೆ ಮಾಡಿರುವ 67 ಶಿಫಾರಸುಗಳಲ್ಲಿ ತಿಳಿಸಿದೆ.

**ಪರೀಕ್ಷಾ ಕ್ರಮ:**

- ಪೂರ್ವಭಾವಿ ಪರೀಕ್ಷೆಗೆ ಸಾಮಾನ್ಯ ವಿಷಯಗಳ ಎರಡು ಪತ್ರಿಕೆಗಳು (600 ಅಂಕ)
- ಮುಖ್ಯ ಪರೀಕ್ಷೆಯಲ್ಲಿ ಒಂದು ಐಚ್ಛಿಕ ವಿಷಯ (ಎರಡು ಪತ್ರಿಕೆ- ತಲಾ 250 ಅಂಕ).
- ಸಾಮಾನ್ಯ ವಿಷಯಗಳ ನಾಲ್ಕು ಪತ್ರಿಕೆಗಳು (ಒಟ್ಟು 1000 ಅಂಕ),
- ಒಂದು ಪ್ರಬಂಧ ಪತ್ರಿಕೆ (250 ಅಂಕ). ಸಂದರ್ಶನಕ್ಕೆ 200 ಅಂಕ ನಿಗದಿ.

**ಸಂದರ್ಶನದ ಕ್ರಮ:**

- ಸಂದರ್ಶನದಲ್ಲಿ ಅಂಕಗಳನ್ನು ನೀಡುವುದರ ಬದಲು ಗ್ರೇಡಿಂಗ್ ನೀಡಬೇಕು. ಅಸಾಧಾರಣ (ಶೇ 70 ಅದಕ್ಕಿಂತ ಹೆಚ್ಚು), ಅತ್ಯುತ್ತಮ (ಶೇ 60ರಿಂದ 70), ಉತ್ತಮ (ಶೇ 50-60), ಸಾಧಾರಣ (ಶೇ 40-50), ಸಾಧಾರಣಕ್ಕಿಂತ ಕಡಿಮೆ (ಶೇ 40ಕ್ಕಿಂತ ಕಡಿಮೆ).
- ವ್ಯಕ್ತಿಯ ಸಂದರ್ಶನ ಮುಗಿದ ತಕ್ಷಣ ಸಂದರ್ಶನ ಮಂಡಳಿ ಆ ವ್ಯಕ್ತಿಯ ಸಾಮರ್ಥ್ಯದ ಬಗ್ಗೆ ಪರಾಮರ್ಶಿಸಬೇಕು. ಸಂದರ್ಶಕರು ನೀಡುವ ಸರಾಸರಿ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಯ ಅಂಕಗಳನ್ನು ನಿರ್ಧರಿಸಬೇಕು.
- 1:3ರ ಅನುಪಾತದಲ್ಲಿ ಸಂದರ್ಶನಕ್ಕೆ ಆಹ್ವಾನಿಸಬೇಕು ಒಬ್ಬ ಅಭ್ಯರ್ಥಿಯ ಸಂದರ್ಶನವನ್ನು ಕನಿಷ್ಠ 25 ರಿಂದ 30 ನಿಮಿಷ ಮಾಡಬೇಕು.
- ದಿನಕ್ಕೆ 25 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸುವುದರ ಬದಲು ಕೇವಲ 9 ಮಂದಿಯನ್ನು ಆಹ್ವಾನಿಸಬೇಕು.

**ಪ್ರವೇಶ ನಿರ್ಬಂಧ:**

ಕೇಂದ್ರ ಲೋಕಸೇವಾ ಆಯೋಗದ ಮಾದರಿಯಲ್ಲಿ ಹೊರಗಿನವರನ್ನು ಕೆಪಿಎಸ್‌ಸಿ ಆವರಣದೊಳಗೆ ಪ್ರವೇಶಿಸಿದಂತೆ ನಿರ್ಬಂಧ ಹೇರಬೇಕು. ಆಯೋಗದ ಮುಖ್ಯ ದ್ವಾರದಲ್ಲಿ ಸೌಲಭ್ಯ ಕೌಂಟರ್ ತೆರೆಯಬೇಕು. ಲಿಖಿತ ಅನುಮತಿ ಇಲ್ಲದೆ ಹೊರಗಿನವರನ್ನು ಆವರಣದೊಳಗೆ ಪ್ರವೇಶಿಸಲು ಅನುಮತಿ ನೀಡಬಾರದು. ಪರೀಕ್ಷೆಗಳು ನಡೆಯುವ ದಿನದಂದು ಅಭ್ಯರ್ಥಿಗಳು ಭಾವಚಿತ್ರ ಇರುವ ಪ್ರವೇಶ ಪತ್ರ ತಪಾಸಣೆ ನಡೆಸಿ ಒಳ ಬಿಡುವಂತೆ ಸಲಹೆ ನೀಡಿದೆ. ಕೆಪಿಎಸ್‌ಸಿಗೆ ಸಂಬಂಧಿಸಿದ ವಿಷಯಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಅಧೀನ ಕಾರ್ಯದರ್ಶಿ ಹುದ್ದೆ ಸೃಜಿಸಬೇಕು. ಇದರಿಂದ ಕೆಪಿಎಸ್ ಸಿ ಹಾಗೂ ಸರಕಾರದ ನಡುವೆ ಸಂಪರ್ಕ ಉತ್ತಮಗೊಂಡು, ಆಯೋಗಕ್ಕೆ ಸಂಬಂಧಿಸಿದ ಆದ್ಯತೆ ವಿಷಯಗಳನ್ನು ಗಮನಹರಿಸಲು ಅನುಕೂಲ ಆಗಲಿದೆ.

**ಸಂದರ್ಶನಕ್ಕೆ 200 ಅಂಕಗಳು:**

ಅಭ್ಯರ್ಥಿಯ ವ್ಯಕ್ತಿತ್ವ ಪರೀಕ್ಷೆಗಾಗಿ ನಡೆಸುವ ಸಂದರ್ಶನಕ್ಕೆ 200 ಅಂಕಗಳನ್ನು ನಿಗದಿಪಡಿಸುವುದು ಸೂಕ್ತ ಎಂದು ಸಮಿತಿ ಸಮರ್ಥಿಸಿಕೊಂಡಿದೆ. ಸರಕಾರಿ ನೌಕರರ ಹಾಗೂ ಅಧಿಕಾರಿ ಆಯ್ಕೆ ಮಾಡುವ ಮುನ್ನ ಆತ ವ್ಯಕ್ತಿತ್ವ ಕುರಿತು ತಿಳಿಯುವುದು ಬಹಳ ಮುಖ್ಯ. ಯುಪಿಎಸ್‌ಸಿಯಲ್ಲಿ 275 ಅಂಕಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಮೀಸಲಿಡಲಾಗಿದೆ. ಇದು ಶೇ.13.6ರಷ್ಟು ಮೌಲ್ಯವನ್ನು ಹೊಂದಿದೆ. ಕೆಪಿಎಸ್‌ಸಿಯಲ್ಲಿ 200 ಅಂಕಗಳನ್ನು ನಿಗದಿಪಡಿಸುವುದರಿಂದ ಶೇ.10.25 ರಷ್ಟು ಮೌಲ್ಯವಾಗುತ್ತದೆ ಎಂದು ಸಮಿತಿಯು ತಿಳಿಸಿದೆ. ಕೆಪಿಎಸ್‌ಸಿಯಲ್ಲಿ ಅಕ್ರಮಕ್ಕೆ ಕಾರಣವಾಗಿರುವ 200 ಅಂಕಗಳನ್ನು ಕಡಿತಗೊಳಿಸಬೇಕೆಂಬ ಒತ್ತಾಯಕ್ಕೆ ಸಮಿತಿ ಮನ್ನಣೆ ನೀಡಿಲ್ಲ

**ಲಾಟರಿ ಮೂಲಕ ಹಂಚಿಕೆ:**

ವ್ಯಕ್ತಿತ್ವ ಪರೀಕ್ಷೆಗೆ ಹಾಜರಾಗುವಂತೆ ಅಭ್ಯರ್ಥಿಗೆ ಲಿಖಿತವಾಗಿ ಸೂಚನೆ ಕಳುಹಿಸಬೇಕು. ಸಂದರ್ಶನ ನಡೆಸುವ ದಿನ ಬೆಳಗ್ಗೆ 9 ಗಂಟೆಗೆ ಲಾಟರಿ ಎತ್ತುವ ಮೂಲಕ ಅಭ್ಯರ್ಥಿಗಳನ್ನು ನಿರ್ದಿಷ್ಟ ವ್ಯಕ್ತಿತ್ವ ಪರೀಕ್ಷೆ ಮಂಡಳಿಗೆ ಹಂಚಿಕೆ ಮಾಡಿ. ಹಠಾತ್ತನೆ ಹಂಚಿಕೆ

ಮಾಡುವ ಈ ಪ್ರಕ್ರಿಯೆಯಿಂದ ನಿರ್ದಿಷ್ಟವಾದ ವ್ಯಕ್ತಿಯನ್ನು ನಿರ್ದಿಷ್ಟವಾದ ಪರೀಕ್ಷೆ ಮಂಡಳಿಗೆ ಹಂಚಿಕೆ ಮಾಡುವ ಕೈವಾಡವನ್ನು ತಪ್ಪಿಸಬಹುದು. ತಾಂತ್ರಿಕ ಹಾಗೂ ವೈಜ್ಞಾನಿಕ ಹುದ್ದೆಗಳನ್ನು ಪರಿಣಿತರಿಂದ ಆಯ್ಕೆ ಮಾಡಿ ತುಂಬುವಾಗ ಹೊರರಾಜ್ಯದವರನ್ನು ಸಲಹೆಗಾರರನ್ನಾಗಿ ನೇಮಿಸಿಕೊಳ್ಳುವಂತೆ ಸಮಿತಿಯು ಶಿಫಾರಸು ಮಾಡಿತ್ತು. ಇದನ್ನು ಸರಕಾರ ಕೈಬಿಟ್ಟು , ಕನ್ನಡ ಬಲ ರಾಜ್ಯದ ಪರಿಣಿತರನ್ನೇ ನೇಮಕ ಮಾಡಿಕೊಳ್ಳಲುರಾಜ್ಯ ಸರ್ಕಾರ ತೀರ್ಮಾನಿಸಿದೆ.

**ಅಂಕಗಳ ಗೌಪ್ಯತೆ:**

ಮುಖ್ಯ ಲಿಖಿತ ಪರೀಕ್ಷೆಯಲ್ಲಿ ಅಭ್ಯರ್ಥಿಯು ಗಳಿಸಿದ ಅಂಕಗಳನ್ನು ಸೂಚನಾ ಫಲಕ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು ಕಡ್ಡಾಯ ಎಂಬ ನಿಯಮವನ್ನು 1978ರಲ್ಲಿ ಜಾರಿಗೊಳಿಸಲಾಗಿದೆ. ಮುಖ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಯು ಗಳಿಸಿದ ಅಂಕಗಳನ್ನು ತಿಳಿದುಕೊಂಡರೆ ವ್ಯಕ್ತಿತ್ವ ಪರೀಕ್ಷೆಯಲ್ಲಿ ಎಷ್ಟು ಅಂಕಗಳನ್ನು ಪಡೆದುಕೊಂಡರೆ ಉತ್ತಮ ಶ್ರೇಣಿ ಪಡೆಯಬಹುದು ಎಂಬುದು ಗೊತ್ತಾಗುತ್ತದೆ. ಇದು ಅರ್ಹತೆ ಆಧರದ ಮೇಲೆ ನಡೆಸುವ ಆಯ್ಕೆ ಪ್ರಕ್ರಿಯೆಗೆ ಒತ್ತಡ ಮತ್ತು ಪ್ರಭಾವ ಬೀರುವ ಸಾಧ್ಯತೆಗಳು ಇರುತ್ತದೆ. ಹೆಚ್ಚು ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳು ಆಯೋಗದ ಸದಸ್ಯರನ್ನು ಭೇಟಿ ಮಾಡಿ ವ್ಯಕ್ತಿತ್ವ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆಯಲು ಪ್ರಯತ್ನಿಸಬಹುದು. ಇದು ಅಕ್ರಮಕ್ಕೂ ಕಾರಣ ಆಗಬಹುದು. ಇಂತಹ ಪದ್ಧತಿ ಇತರ ರಾಜ್ಯಗಳ ಲೋಕಸೇವಾ ಆಯೋಗದಲ್ಲಿ ಇಲ್ಲ. ಮುಖ್ಯ ಪರೀಕ್ಷೆಯಲ್ಲಿ ಅಭ್ಯರ್ಥಿ ಗಳಿಸಿದ ಅಂಕಗಳನ್ನು ವ್ಯಕ್ತಿತ್ವ ಪರೀಕ್ಷಾ ಮಂಡಳಿ ಹಾಗೂ ಅಭ್ಯರ್ಥಿಗೂ ತಿಳಿಯದಂತೆ ಗೌಪ್ಯವಾಗಿಡಬೇಕು. ಆಯ್ಕೆ ಪ್ರಕ್ರಿಯೆ ಬಳಿಕವೇ ಪ್ರಕಟಿಸಬೇಕು. ಈ ಸಂಬಂಧ ನಿಯಮ 1973ಕ್ಕೆ ತಕ್ಷಣವೇ ತಿದ್ದುಪಡಿ ತರಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

**ಪರೀಕ್ಷಾ ನಿಯಂತ್ರಕರ ನೇಮಕ:**

ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ವ್ಯಕ್ತಿತ್ವ ಪರೀಕ್ಷೆಗಳ ಎಲ್ಲ ಗೌಪ್ಯ ವಿಷಯಗಳ ದಾಖಲೆಗಳ ಸಂಬಂಧಿಸಿದಂತೆ ಕೆಪಿಎಸ್‌ಸಿ ಕಾಯದರ್ಶಿ ಮೇಲ್ವಿಚಾರಕರಾಗಿರುತ್ತಾರೆ. ಈ ಎಲ್ಲ ವಿಷಯಗಳ ಪ್ರಭಾರವನ್ನು ವಹಿಸಲು ಪರೀಕ್ಷಾ ನಿಯಂತ್ರಕರ ಹೊಸ ಹುದ್ದೆ ಸೃಜಿಸಬೇಕೆಂದು ಸಮಿತಿ ಶಿಫಾರಸು ಮಾಡಿದೆ. ಐಎಎಸ್ ಶ್ರೇಣಿಯ ಸೇವಾ ಹಿರಿತನ ಹೊಂದಿರುವ ನಿವೃತ್ತಿ ಅವಧಿಯು ಕನಿಷ್ಠ ಮೂರು ವರ್ಷ ಇರಬೇಕೆಂದು ಸಮಿತಿ ಅಭಿಪ್ರಾಯ ಪಟ್ಟಿದೆ.

**ಪ್ರತಿ ವರ್ಷ ಪರೀಕ್ಷೆ :**

ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಗಾಗಿ ಪ್ರತಿ ವರ್ಷ ಸ್ಪರ್ಧಾತ್ವಕ ಪರೀಕ್ಷೆ ನಡೆಸುವುದಿಲ್ಲ. ಅನಗತ್ಯ ವಿಳಂಬದಿಂದ ಅಭ್ಯರ್ಥಿಗಳು ವಯೋಮಿತಿ ಮೀರುವ ಸಮಸ್ಯೆ ಕುರಿತು ಸಾಕಷ್ಟು ಆಕ್ಷೇಪಣೆಗಳು ಬಂದಿವೆ. ನಿಗದಿತ ಸಾಲಿನಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೂ ಮುಂಬಡ್ತಿಯಿಂದ ವಂಚಿತರಾಗುವ ಸಾಧ್ಯತೆಯು ಇದೆ. ಹೀಗಾಗಿ ಪ್ರತಿ ವರ್ಷ ನೇಮಕಾತಿಗೆ ಅಗತ್ಯ ಇರುವ ಹುದ್ದೆಗಳ ಮಾಹಿತಿಯನ್ನು ಪಡೆದುಕೊಂಡು ಜನವರಿ ಇಲ್ಲವೆ ಫೆಬ್ರವರಿಯಲ್ಲಿ ಪರೀಕ್ಷೆ ನಡೆಸಬೇಕು. ಅದೇ ರೀತಿ ಗ್ರೂಪ್-ಸಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಧಿಸೂಚನೆ ಹೊರಡಿಸಬೇಕೆಂದು ಸಮಿಯು ಸಲಹೆ ನೀಡಿದೆ.

**ಅನುಮಾನಗಳಿಗೆ ಆಸ್ಪದ:**

ಕೆಪಿಎಸ್‌ಸಿ 2013ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನಡೆಸಿದ ವ್ಯಕ್ತಿತ್ವ ಪರೀಕ್ಷೆಗಳನ್ನು ನಡೆಸಲು ಎರಡು ಮಂಡಳಿಗಳನ್ನು ರಚಿಸಲಾಗಿತ್ತು. ಈ ಮಂಡಳಿಯಲ್ಲಿ ಬಾಹ್ಯ ತಜ್ಞರನ್ನು ಸಲಹೆಗಾರರನ್ನಾಗಿ ನೇಮಿಸಿಕೊಳ್ಳದಿರುವುದು ಮಂಡಳಿಗಳ ಸದ್ಭಾವನೆ ಬಗ್ಗೆ ಅನುಮಾನ ಮತ್ತು ಊಹಾಪೋಹಗಳಿಗೆ ಎಡೆಮಾಡಿಕೊಟ್ಟಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ. ಸಮಿತಿ ಶಿಫಾರಸು ಮಾಡಿರುವ ಅಂಶಗಳನ್ನು ರಾಜ್ಯಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ತಕ್ಷಣದಿಂದಲೇ ಜಾರಿಗೆ ತರಲು ನಿರ್ಧರಿಸಿದೆ.

**ಅಕ್ಟೋಬರ್ ನಲ್ಲಿ ಬೆಂಗಳೂರಿನಲ್ಲಿ ಐಟಿ ಬಿಜ್ (IT-BIZ) ಸಮಾವೇಶ: ಮುನ್ನೋಟ**

ಬೆಂಗಳೂರಿನಲ್ಲಿ ಅಕ್ಟೋಬರ್ 22, 23 ರಂದು ಆಯೋಜಿಸಲಾಗಿರುವ ಐಟಿ ಬಿಜ್ ಸಮಾವೇಶವನ್ನು ಕೇಂದ್ರ ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಕಪಿಲ್ ಸಿಬಲ್ ಉದ್ಘಾಟಿಸಲಿದ್ದಾರೆ . ಬೆಂಗಳೂರು ಐಟಿ ಬಿಜ್ ಸಮಾವೇಶಕ್ಕೆ ಪೂರಕವಾಗಿ ಮೈಸೂರು ಹಾಗೂ ಮಂಗಳೂರಿನಲ್ಲಿ ಉಪ ಸಮಾವೇಶಗಳನ್ನು ನಡೆಸಲಾಗಿದೆ. ಹುಬ್ಬಳ್ಳಿಯಲ್ಲಿ ಸೆ.26 ರಂದು ಐಟಿ ಬಿಜ್ ಸಮಾವೇಶ ನಡೆಯಲಿದೆ. ಐಟಿ ಬಿಜ್ ಸಮಾವೇಶದಲ್ಲಿ ವಿದೇಶದ ಎಲ್ಲ ಪ್ರಮುಖ ಕಂಪನಿಗಳ ಭಾಗವಹಿಸುವಿಕೆ ಮತ್ತು ಹೂಡಿಕೆ ಮಾಡಲು ಪ್ರಚಾರ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಮೆರಿಕ ಮತ್ತು ಯುರೋಪ್ ದೇಶಗಳಲ್ಲಿ ರೋಡ್ ಶೋ ಮಾಡಿ ಬಂಡವಾಳ ಹೂಡಿಕೆದಾರರ ಸಭೆಯನ್ನೂ ನಡೆಸಲಾಗುತ್ತದೆ.

**ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನ:**

- ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಟಿ.ವಿ. ಮೋಹನ್‌ದಾಸ್ ಪೈ ನೇತೃತ್ವದಲ್ಲಿ ರಚಿಸಲಾದ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ತಂಡ ನೀಡಿರುವ ಶಿಫಾರಸುಗಳನ್ನು ರಾಜ್ಯ ಸರ್ಕಾರ ತಾತ್ವಿಕವಾಗಿ ಒಪ್ಪಿಕೊಂಡಿದೆ.
- ಬೆಂಗಳೂರು ಮತ್ತು ಸುತ್ತಮುತ್ತ ಮಾಹಿತಿ ತಂತ್ರಜ್ಞಾನದ ಉಪನಗರ ಸ್ಥಾಪಿಸುವ ಜನತೆಗೆ ಉಳಿದ ನಗರಗಳಲ್ಲಿಯೂ ಐಟಿ ಕ್ಷೇತ್ರದ ಬೆಳವಣಿಗೆಗೆ ಪೂರಕ ಸೌಲಭ್ಯ ಅಭಿವೃದ್ಧಿಪಡಿಸಬೇಕು ಎಂಬ ಶಿಫಾರಸನ್ನೂ ಒಪ್ಪಲಾಗಿದೆ.
- ಮೊದಲ ಹಂತದಲ್ಲಿ ಮೈಸೂರು, ಮಂಗಳೂರು, ಹುಬ್ಬಳ್ಳಿ- ಧಾರವಾಡ, ಬೆಳಗಾವಿ, ಶಿವಮೊಗ್ಗ, ಗುಲ್ಬರ್ಗ ನಗರಗಳಲ್ಲಿ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ಒತ್ತು ನೀಡಲಾಗುತ್ತದೆ. ಈ ನಗರಗಳಲ್ಲಿ ಇನ್‌ಕ್ಯುಬೇಷನ್ ಕೇಂದ್ರಗಳನ್ನು ಸ್ಥಾಪಿಸಿ ಹೊಸ ಕಂಪನಿಗಳ ಸ್ಥಾಪನೆಗೆ ಉತ್ತೇಜನ ನೀಡಲಾಗುತ್ತದೆ.
- ಪ್ರತಿ ವರ್ಷವೂ 22 ರಿಂದ 25 ವಯಸ್ಸಿನ ಯುವ ಉದ್ದಿಮೆದಾರರನ್ನು ಸರ್ಕಾರಿ ವೆಚ್ಚದಲ್ಲಿ ವಿದೇಶಗಳಿಗೆ ಕಳುಹಿಸಿ ಕಂಪನಿ ಸ್ಥಾಪಿಸುವ ಬಗ್ಗೆ ತರಬೇತಿ ಪಡೆಯಲು ಅನುಕೂಲ ಮಾಡಿಕೊಡಲಾಗುತ್ತದೆ.

- ಧಾರವಾಡದಲ್ಲಿ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ) ಯನ್ನು 128 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುವುದು. ರಾಜ್ಯ ಸರ್ಕಾರ 45 ಕೋಟಿ ನೀಡುತ್ತಿದ್ದು, ಕೇಂದ್ರ ಸರ್ಕಾರ ಉಳಿದ ಹಣ ಭರಿಸಲಿದೆ. ಇದಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ 50 ಎಕರೆ ಜಾಗ ನೀಡಲಾಗಿದೆ.
- ಆಡಳಿತದಲ್ಲಿ ಸುಧಾರಣೆ, ಪಾರದರ್ಶಕ ಮತ್ತು ಜನರಿಗೆ ತ್ವರಿತ ಸೇವೆ ಒದಗಿಸಲು ತಾಂತ್ರಿಕ ನೆರವು ಒದಗಿಸಲಾಗುತ್ತದೆ. 9ಕ್ಕೂ ಹೆಚ್ಚು ಇಲಾಖೆಗಳಿಂದ 132 ನಾಗರಿಕ ಸೇವೆಗಳನ್ನು ವಿದ್ಯುನ್ಮಾನ ವ್ಯವಸ್ಥೆಗೆ ಅಳವಡಿಸಲಾಗುತ್ತದೆ.

**ಇತರೆ ಯೋಜನೆಗಳು:**

ನಂಜನಗೂಡು ತಾಲೂಕು ಸುತ್ತೂರಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಂಪನ್ಮೂಲ ಕೇಂದ್ರ, ಬಾಗಲಕೋಟೆಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬೆಂಗಳೂರಿನಲ್ಲಿ ಸೈನ್ಸ್ ಗ್ಯಾಲರಿ, ನಾಗರಿಕ ಸೇವೆಗಾಗಿ ಏಕಗವಾಕ್ಷಿ ವ್ಯವಸ್ಥೆ, ಎಲ್ಲ ತಾಲೂಕುಗಳಲ್ಲೂ ವೀಡಿಯೊ ಕಾನ್ಫರೆನ್ಸಿಂಗ್ ಸೌಲಭ್ಯ, ಗ್ರಾಮ ಪಂಚಾಯಿತಿಗಳಲ್ಲಿ ನಾಗರಿಕ ಸೇವೆಗೆ ಇಂಟರ್‌ನೆಟ್ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಅಭಿವೃದ್ಧಿಪಡಿಸಲು 160 ಕೋಟಿ ವೆಚ್ಚ ಮಾಡಲಾಗುತ್ತದೆ. ಮಾಹಿತಿ ತಂತ್ರಜ್ಞಾನದ ಸಣ್ಣ ಕಂಪನಿಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ಯೋಜನೆ ಮರುಚಾಲನೆಗೊಳಿಸಲು ಕೇಂದ್ರಕ್ಕೆ ಕೋರಿಕೆ ಸಲ್ಲಿಸಲಾಗುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗೆ ವಿಜ್ಞಾನಿ ಸಿ.ಎನ್.ಆರ್. ರಾವ್ ನೇತೃತ್ವದ ಸಮಿತಿ ಶಿಫಾರಸು ಅನುಷ್ಠಾನಕ್ಕೆ 20 ಕೋಟಿ ಅನುದಾನ ಮೀಸಲಿಡಲಾಗಿದೆ ಎಂದು ಹೇಳಲಾಗಿದೆ.

## ರಾಷ್ಟ್ರೀಯ

**ಸ್ವದೇಶಿ ನಿರ್ಮಿತ ಯುದ್ಧನೌಕೆ "ವಿಕ್ರಾಂತ್" ಚಾಲನೆಗೆ ಕ್ಷಣಗಣನೆ**

ಭಾರತದ ಬಹು ನಿರೀಕ್ಷಿತ ಹಾಗೂ ಸ್ವದೇಶಿ ತಂತ್ರಜ್ಞಾನ ಬಳಕೆಯಿಂದ ನಿರ್ಮಿಸಲಾದ ಯುದ್ಧ ವಿಮಾನಗಳನ್ನು ಕೊಂಡೊಯ್ಯಬಲ್ಲ ಯುದ್ಧ ನೌಕೆಗೆ ಇದೇ ಆಗಸ್ಟ್ 12 ರಂದು ಚಾಲನೆ ನೀಡುವುದಾಗಿ ನೌಕಾದಳದ ಉನ್ನತ ಅಧಿಕಾರಿಗಳು ತಿಳಿಸಿದ್ದಾರೆ. ಆಗಸ್ಟ್ 12 ರಂದು ನಡೆಯಲಿರುವ ಸರಳ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ರಕ್ಷಣ ಸಚಿವ ಎ.ಕೆ.ಆಂಟನಿ ಅವರ ಪತ್ನಿ ಎಲಿಜಬೆತ್ ಅಂಟನಿ ಭಾಗವಹಿಸಲ್ಲಿದ್ದು, ಈ ಯುದ್ಧ ನೌಕೆಗೆ ಚಾಲನೆ ನೀಡಲಿದ್ದಾರೆ.

- ಈ ಯುದ್ಧ ನೌಕೆಯನ್ನು "ಕೊಚ್ಚಿ ಶಿಪ್ ಯಾರ್ಡ್" ನಲ್ಲಿ ನಿರ್ಮಿಸಲಾಗಿದ್ದು, 40,000 ಟನ್ ತೂಕವಿರುವುದಾಗಿ ಹೇಳಲಾಗಿದೆ. ಸ್ವದೇಶಿ ತಂತ್ರಜ್ಞಾನದಿಂದ ತಯಾರಿಸಲಾದ ದೇಶದ ಪ್ರಥಮ ಯುದ್ಧನೌಕೆ ಇದಾಗಿದೆ.
- ಯು.ಎಸ್, ರಷ್ಯಾ, ಬ್ರಿಟನ್ ಮತ್ತು ಫ್ರಾನ್ಸ್ ನಂತರ ಇಂತಹ ನೌಕೆಯನ್ನು ಹೊಂದಲಿರುವ ವಿಶ್ವದ ಐದನೇ ರಾಷ್ಟ್ರ ಭಾರತ.
- ಈ ನೌಕೆಯಲ್ಲಿ ಎರಡು ಟೇಕ್ ಆಫ್ ರನ್ ವೇ ಮತ್ತು ಲ್ಯಾಂಡಿಂಗ್ ಸ್ಟ್ರಿಪ್ ಗಳನ್ನು ಒಳಗೊಂಡಿರಲಿದೆ. ಮಿಗ್-29, ಹಗುರ ಯುದ್ಧ ವಿಮಾನ ಮತ್ತು ವಿವಿಧ ಮಾದರಿಯ ಹೆಲಿಕಾಪ್ಟರ್ ಗಳನ್ನು ಇದು ಹೊಂದಿರಲಿದೆ.

**ಐಜಿಎಲ್ ಸುರಕ್ಷಾ (IGL Suraksha) ಯೋಜನೆಗೆ ದೆಹಲಿಯಲ್ಲಿ ಚಾಲನೆ**

ಸಂಕುಚಿತ ನೈಸರ್ಗಿಕ ಅನಿಲ (Compressed Natural Gas) ಆಧಾರಿತ ದೆಹಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಚಾಲಕರಿಗಾಗಿ ಗುಂಪು ವಿಮೆ ಕಲ್ಪಿಸುವ ಐಜಿಎಲ್ ಸುರಕ್ಷಾ ಯೋಜನೆಗೆ ದೆಹಲಿಯಲ್ಲಿ ಚಾಲನೆ ನೀಡಲಾಯಿತು. ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ವೀರಪ್ಪ ಮೊಯ್ಲಿ ಮತ್ತು ದೆಹಲಿ ಮುಖ್ಯಮಂತ್ರಿ ಶೀಲಾ ದಿಕ್ಷೀತ್ ಅವರು ಈ ಯೋಜನೆಗೆ ಚಾಲನೆ ನೀಡಿದರು. ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್ (ಐಜಿಎಲ್) ಮತ್ತು ದೆಹಲಿ ಸಾರಿಗೆ ಸಂಸ್ಥೆ ಈ ಕಾರ್ಯಕ್ರಮವನ್ನು ಆಯೋಜಿಸಿದ್ದವು.

**ಯೋಜನೆಯ ಬಗ್ಗೆ**:

- ದೆಹಲಿ ಸಾರಿಗೆ ಸಂಸ್ಥೆಯ ಚಾಲಕರ ಹಿತದೃಷ್ಟಿ ಕಾಯುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.
- ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್ ತನ್ನ ಸಿಎಸ್ಆರ್ ಕಾರ್ಯಕ್ರಮದಡಿ ಈ ಯೋಜನೆಯನ್ನು ಜಾರಿಗೊಳಿಸುತ್ತಿದೆ.
- ಅಪಘಾತ ದುರಂತದಲ್ಲಿ ಮಡಿದ ಚಾಲಕರ ಕುಟುಂಬಕ್ಕೆ ಈ ಯೋಜನೆಯಡಿ 1.5 ಲಕ್ಷ ರೂಗಳನ್ನು ನೀಡಲಾಗುತ್ತದೆ. ಜತೆಗೆ ಚಾಲಕನ ಮಕ್ಕಳ ವಿದ್ಯಾಭ್ಯಾಸಕ್ಕೆಂದು ರೂ 25, 000 ಗಳನ್ನು ನೀಡಲಾಗುತ್ತದೆ. ಗರಿಷ್ಠ ಎರಡು ಮಕ್ಕಳಿಗೆ ಈ ಯೋಜನೆಯಡಿ ಸಹಾಯ ದೊರೆಯಲಿದೆ. ಅಂದರೆ 50,000 ರೂಗಳು.
- ಒಂದು ವೇಳೆ ಅಪಘಾತದಲ್ಲಿ ಮೂಳೆ ಮುರಿತಕ್ಕೊಳಗಾದರೆ ಅಥವಾ ತೀವ್ರ ತರನಾದ ಗಾಯಗಳಾದರೆ ಕನಿಷ್ಠ 10, 000 ರೂಗಳಿಂದ 75,000 ರೂಗಳ ವರೆಗೆ ಚಿಕಿತ್ಸೆ ಭತ್ಯೆಯನ್ನು ನೀಡಲಾಗುವುದು. ಅಪಘಾತದ ವೇಳೆ ಶಾಶ್ವತ ಊನ ಸ್ಥಿತಿಗೆ ಒಳಗಾಗಿ ಉದ್ಯೋಗ ಕಳೆದುಕೊಂಡರೆ ಗರಿಷ್ಠ ಮೊತ್ತವನ್ನು ಪರಿಹಾರ ಧನವನ್ನಾಗಿ ನೀಡಲಾಗುವುದು.

- ವಿಮೆಯ ಪ್ರಿಮಿಯಂ ಖರ್ಚನ್ನು ಐಜಿಎಲ್ ಭರಿಸಲಿದೆ. ಯೋಜನೆಯ ಅನುಷ್ಠಾನವನ್ನು ಓರಿಯಂಟಲ್ ಇನ್ ಶ್ಯೂರೆನ್ಸ್ ಸಂಸ್ಥೆಗೆ ನೀಡಲಾಗಿದೆ. ಇದೊಂದು ಸಂಪೂರ್ಣ ಉಚಿತ ಮತ್ತು ಸರಳ ವಿಮಾ ವ್ಯವಸ್ಥೆ ಎನ್ನಲಾಗಿದೆ.

**ಶೇ.4 ರಷ್ಟು ಬಡ್ಡಿದರದಲ್ಲಿ ರೈತರಿಗೆ ಸಾಲ ಮುಂದುವರಿಸಲು ಕೇಂದ್ರ ಸರ್ಕಾರ ಒಪ್ಪಿಗೆ**

ಸಕಾಲಕ್ಕೆ ಸಾಲ ಮರುಪಾವತಿ ಮಾಡುವ ರೈತರಿಗೆ ಶೇ 4 ರಷ್ಟು ಬಡ್ಡಿ ದರದಲ್ಲಿ ಸಾಲ ಒದಗಿಸುವ ಯೋಜನೆಯನ್ನು ಮುಂದುವರೆಸಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈ ವಿಷಯವನ್ನು ಕೇಂದ್ರ ವಾರ್ತಾ ಸಚಿವ ಮನೀಶ್ ತಿವಾರಿ ಅವರು ತಿಳಿಸಿದ್ದಾರೆ.

- ಸರ್ಕಾರದ ಈ ನಿರ್ಣಯದಿಂದ ರೈತರಿಗೆ ಶೇ. 7 ರ ರಿಯಾಯತಿ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲವನ್ನು ನೀಡಲಾಗುವುದು.
- ನಿಗದಿತ ಅವಧಿಗೆ ಸರಿಯಾಗಿ ಸಾಲ ಮರು ಪಾವತಿ ಮಾಡುವ ರೈತರಿಗೆ ಬಡ್ಡಿ ದರದಲ್ಲಿ ಶೇ.3 ರಷ್ಟು ರಿಯಾಯಿತಿ ನೀಡಲಾಗುತ್ತದೆ.
- ಖಾಸಗಿ ಬ್ಯಾಂಕ್ ಗಳಿಂದ ಪಡೆಯಲಾಗುವ ಸಾಲಕ್ಕೂ ಈ ಯೋಜನೆಯನ್ನು ವಿಸ್ತರಿಸಲಾಗಿದೆ. ಇದರಿಂದ 2013-14 ನೇ ಸಾಲಿನಲ್ಲಿ ಕೇಂದ್ರದ ಬೊಕ್ಕಸಕ್ಕೆ 15,385 ಕೋಟಿ ವೆಚ್ಚವಾಗಲಿದೆ. ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿರುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೂ ಈ ಯೋಜನೆ ಅನ್ವಯವಾಗಲಿದೆ.

**"ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನಾ (RGGVY)" ಮುಂದುವರೆಕೆಗೆ ಕೇಂದ್ರ ಒಪ್ಪಿಗೆ**

ದೇಶದ ಗ್ರಾಮೀಣ ಭಾಗದ ಕುಟುಂಬಗಳಿಗೆ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಲು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ "ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯನ್ನು 12 ನೇ ಪಂಚವಾರ್ಷಿಕ ಯೋಜನೆಯಡಿ ಮುಂದುವರೆಸಲು ಕೇಂದ್ರ ಆರ್ಥಿಕ ವ್ಯವಹಾರಗಳ ಮೇಲಿನ ಸಚಿವಾಲಯ ಒಪ್ಪಿಗೆ ನೀಡಿದೆ.

- ದೇಶದ ಎಲ್ಲಾ ಗ್ರಾಮೀಣ ಭಾಗಗಳ ಬಿಪಿಎಲ್ ಕುಟುಂಬಗಳಿಗೆ ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶದೊಂದಿಗೆ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯನ್ನು ಏಪ್ರಿಲ್ 2005 ರಂದು ಜಾರಿಗೊಳಿಸಲಾಯಿತು.
- 10 ನೇ ಪಂಚವಾರ್ಷಿಕ ಯೋಜನೆಯ ಕೊನೆಯ ಎರಡು ವರ್ಷಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು 5000 ಕೋಟಿ ರೂಗಳನ್ನು ಮೀಸಲಿಡಲಾಗಿತ್ತು.
- ಬಳಿಕ 11 ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು ಮುಂದುವರೆಸಲು ಕೇಂದ್ರ ಸರ್ಕಾರ ನಿರ್ಧರಿಸಿತ್ತು. ಇದಕ್ಕಾಗಿ ಪ್ರಾರಂಭಿಕ ಹಂತದಲ್ಲಿ ರೂ 28,000 ಕೋಟಿಯನ್ನು ಮೀಸಲಿಡಲಾಗಿತ್ತು. 2011-12 ನೇ ಸಾಲಿನಲ್ಲಿ ಹೆಚ್ಚುವರಿ ರೂ 6,000 ಕೋಟಿಗೆ ಯೋಜನಾ ಆಯೋಗ ಒಪ್ಪಿಗೆ ಸೂಚಿಸಿತು.

- ಕಳೆದ ಎರಡು ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೊಳಿಸಿರುವ ಈ ಯೋಜನೆಯಡಿ ಇದುವರೆಗೂ 648 ಯೋಜನೆಗಳನ್ನು ಕೈಗೊಳ್ಳಲಾಗಿದೆ. ಸುಮಾರು 1,12,795 ಹಳ್ಳಿಗಳಿಗೆ 44,066,44 ಕೋಟಿ ರೂ ವೆಚ್ಚದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

**"ಟೀಕಾ ಎಕ್ಸ್ ಪ್ರೆಸ್ ಯೋಜನೆ (Teeka Express)" ಚಾಲನೆ**

ಎಳೆ ವಯಸ್ಸಿನಲ್ಲಿ ಮಕ್ಕಳಿಗೆ ಕಾಡುವ ಕಾಯಿಲೆಗಳಿಂದ ರಕ್ಷಿಸುವ ನಿಟ್ಟಿನಲ್ಲಿ ರೂಪಿಸಲಾಗಿರುವ "ಟೀಕಾ ಎಕ್ಸ್ ಪ್ರೆಸ್" ಯೋಜನೆಗೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಗುಲಾಂ ನಬೀ ಅಜಾದ್ ಹಾಗೂ ರಾಜಸ್ತಾನ ಯುವ ಜನಾಂಗ ಮತ್ತು ಕ್ರೀಡಾ ಸಚಿವ ಜಿತೇಂದ್ರ ಸಿಂಗ್ ಅವರು ರಾಜಸ್ತಾನದ ಅಲ್ವರ್ ಜಿಲ್ಲೆಯಲ್ಲಿ ಚಾಲನೆ ನೀಡಿದರು.

**ಏನಿದು ಟೀಕಾ ಎಕ್ಸ್ ಪ್ರೆಸ್ ಯೋಜನೆ**:

- ಅಗತ್ಯವಿರುವ ಔಷಧಿಗಳನ್ನು ಮನೆ ಬಾಗಿಲಿಗೆ ತಲುಪಿಸುವ ಮಹತ್ವಾಕಾಂಕ್ಷಿ ಯೋಜನೆಯೇ ಟೀಕಾ ಎಕ್ಸ್ ಪ್ರೆಸ್ ಯೋಜನೆ. ಈ ಯೋಜನೆಯಡಿ ಲಸಿಕೆ ಹಾಕಿಸುವ ಸ್ಥಳಕ್ಕೆ ಔಷಧಿ ಸಂರಕ್ಷಣಾ ಕೇಂದ್ರದಿಂದ ಇದಕ್ಕಾಗಿಯೇ ಮೀಸಲಿಡಲಾದ ಟೀಕಾ ಎಕ್ಸ್ ಪ್ರೆಸ್ ವಾಹನದಲ್ಲಿ ಸಾಗಿಸಲಾಗುವುದು.
- ಔಷಧಿ ವಿತರಣೆಯಲ್ಲಿ ಆಗುತ್ತಿರುವ ವಿಳಂಬ, ಸಮರ್ಪಕ ಬಳಕೆ ಮತ್ತು ಬಳಕೆಯಾಗದೇ ಇರುವ ಔಷಧಗಳನ್ನು ಪುನಃ ಹಿಂದಕ್ಕೆ ಕೊಂಡ್ಯೊಯ್ಯುವ ಮೂಲಕ ಔಷಧಿಗಳು ವಿನಾಃ ಕಾರಣ ವ್ಯರ್ಥವಾಗುವುದನ್ನು ತಪ್ಪಿಸಬಹುದಾಗಿದೆ.
- ಸೂಕ್ತ ಆರೋಗ್ಯ ಚಿಕಿತ್ಸೆ ಇಲ್ಲದ ಸ್ಥಳಗಳಲ್ಲಿ ಇದು ಮೊಬೈಲ್ ಕ್ಲಿನಿಕ್ ಆಗಿ ಸೇವೆ ನಿರ್ವಹಿಸಲಿದೆ. ಅಲ್ಲದೇ ಬಳಕೆಯಾದ ಔಷಧಗಳನ್ನು ಸೂಕ್ತವಾಗಿ ವಿಲೇವಾರಿ ಮಾಡಲು ಇದು ಅನುಕೂವಾಗಲಿದೆ.
- ಮೊದಲ ಹಂತದಲ್ಲಿ ಈ ಯೋಜನೆಯನ್ನು ಅತಿ ಅಗತ್ಯವಿರುವ 69 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುವುದು. ಇದಕ್ಕಾಗಿ 1,850 ವಾಹನಗಳನ್ನು ಖರೀದಿಸಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು.
- ಈ ಯೋಜನೆಯ ಅನುಷ್ಠಾನಕ್ಕೆ ತಗುಲುವ ವೆಚ್ಚವನ್ನು "ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್" ಅಡಿ ಭರಿಸಲಾಗುವುದು.

**ಜೈಪುರದಲ್ಲಿ ಭಾರತ-ಅಮೆರಿಕ-ಆಫ್ರಿಕಾ ತ್ರಿಕೋನ ಕೃಷಿ ತರಬೇತಿ ಕಾರ್ಯಕ್ರಮ**

ಭಾರತ-ಅಮೆರಿಕ-ಆಫ್ರಿಕಾ ತ್ರಿಕೋನ ಕೃಷಿ ತರಬೇತಿ ಕಾರ್ಯಕ್ರಮ ಜೈಪುರದಲ್ಲಿ ನಡೆಯಿತು. ಕೀನ್ಯಾ, ಲೈಬೀರಿಯಾ ಮತ್ತು ಮಲಾವಿಯಲ್ಲಿ ಕೃಷಿ ಉತ್ಪಾದನೆಯ ಸುಧಾರಣೆ ಹಾಗೂ ಮಾರುಕಟ್ಟೆಗೆ ಬೆಂಬಲ ನೀಡುವ ಉದ್ದೇಶದಿಂದ ಅಮೆರಿಕದ 'ಫೀಡ್ ದಿ ಫ್ಯೂಚರ್' ಸಂಸ್ಥೆ ಸಹಭಾಗಿತ್ವದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

**ಉದ್ದೇಶಗಳು:**

- ಅಮೆರಿಕ- ಭಾರತ ಜಾಗತಿಕ ಪಾಲುದಾರಿಕೆಯನ್ನು ವಿಸ್ತರಿಸುವ ಯೋಜನೆಯ ಭಾಗವಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
- ಆಫ್ರಿಕಾದ ರಾಷ್ಟ್ರಗಳಲ್ಲಿನ ಆಹಾರ ಅಭದ್ರತೆ, ಅಪೌಷ್ಟಿಕತೆ, ಬಡತನ ನಿರ್ಮೂಲನೆಗೆ ಸಂಬಂಧಿಸಿ ಭಾರತದ ಖಾಸಗಿ ಮತ್ತು ಸರ್ಕಾರಿ ವಲಯಗಳು ನಡೆಸಿದ ಸಂಶೋಧನೆಗಳನ್ನು ಇಲ್ಲಿ ಹಂಚಿಕೊಳ್ಳಲಾಗುವುದು
- ಈ ಕಾರ್ಯಕ್ರಮದಲ್ಲಿ ಮೂರು ಆಫ್ರಿಕನ್ ರಾಷ್ಟ್ರಗಳ 180 ಕೃಷಿ ವೃತ್ತಿಪರರಿಗೆ ತರಬೇತಿ ನೀಡಲಾಗುವುದು.
- ಜೈಪುರದ ಚೌಧುರಿ ಚರಣ್ ಸಿಂಗ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಗ್ರಿಕಲ್ಚರಲ್ ಮಾರ್ಕೆಟಿಂಗ್ ಹಾಗೂ ಹೈದರಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರಲ್ ಎಕ್ಸ್‌ಟೆನ್ಶನ್ ಮ್ಯಾನೇಜ್‌ಮೆಂಟ್‌ಗಳಲ್ಲಿ ಮಾರ್ಕೆಟಿಂಗ್ ಹಾಗೂ ವಿಸ್ತರಣೆ ನಿರ್ವಹಣೆ ತರಬೇತಿ ನೀಡಲಾಗುತ್ತದೆ.

## ರೈಲ್ವೆ ದರ ನಿರ್ಧರಿಸಲು ಸ್ವತಂತ್ರ ರೈಲ್ವೆ ದರ ಪ್ರಾಧಿಕಾರ ರಚನೆ: ಕೇಂದ್ರ ಸರ್ಕಾರ

ಅನಿರೀಕ್ಷಿತ ನಷ್ಟದ ಸುಳಿಗೆ ಸಿಕ್ಕಿರುವ ಭಾರತೀಯ ರೈಲ್ವೆಯನ್ನು, ನಷ್ಟದ ಸುಳಿಯಿಂದ ಹೊರಗೆ ಕರೆತರುವ ನಿಟ್ಟಿನಲ್ಲಿ ಸ್ವತಂತ್ರ ರೈಲ್ವೆ ದರ ಪ್ರಾಧಿಕಾರ ರಚಿಸಲು ಕೇಂದ್ರ ಸಚಿವ ಸಂಪುಟ ತಾತ್ವಿಕ ಒಪ್ಪಿಗೆ ನೀಡಿದೆ. ಇದರಿಂದಾಗಿ ಮುಂದಿನ ದಿನಗಳಲ್ಲಿ ಯಾವಾಗ ರೈಲ್ವೆ ದರ ಏರಿಸಬೇಕು ಎನ್ನುವುದನ್ನು ರೈಲ್ವೆ ಅಧಿಕಾರಿಗಳು ಮತ್ತು ಸಚಿವರ ಬದಲು ಪ್ರಾಧಿಕಾರವೇ ನಿರ್ಧರಿಸಲಿದೆ. ಜೊತೆಗೆ ರೈಲ್ವೆ ದರ ಏರಿಕೆ ವಿಷಯ ರಾಜಕೀಯ ಮುಕ್ತವಾಗಿರಲಿದೆ.

**ಪ್ರಾಧಿಕಾರದ ಅಧಿಕಾರಗಳೇನು ?**

- ಅದರಲ್ಲಿ ಯಾರು ಇರಬೇಕು ಎನ್ನುವುದರ ಬಗ್ಗೆ ಇನ್ನೂ ಪೂರ್ಣಪ್ರಮಾಣದಲ್ಲಿ ನಿರ್ಣಯ ಕೈಗೊಳ್ಳಲಾಗದ ಹಿನ್ನೆಲೆಯಲ್ಲಿ ಪ್ರಾಧಿಕಾರ ರಚನೆಗೆ ತಾತ್ವಿಕ ಒಪ್ಪಿಗೆ ನೀಡಲಾಗಿದೆ.
- ಇದೇ ವೇಳೆ 1989ರ ರೈಲ್ವೆ ಕಾಯ್ದೆಗೆ ತಿದ್ದುಪಡಿ ತಂದು ಪ್ರಾಧಿಕಾರ ರಚನೆಗೆ ಸಂಸತ್ತಿನ ಅನುಮೋದನೆ ಸಿಗುವುದಕ್ಕೆ ಇನ್ನೂ ಬಹಳ ಸಮಯ ಬೇಕಾಗುವುದರಿಂದ ಸುಗ್ರೀವಾಜ್ಞೆಯ ಮೂಲಕವೇ ಕಾನೂನು ಜಾರಿಗೆ ನಿರ್ಧರಿಸಲಾಗುತ್ತಿದೆ

## ನ್ಯಾಯಾಲಯದ ಅಧೀನದಲ್ಲಿ ನಡೆಯುವಂತಹ ಪ್ರಕರಣಗಳ ತನಿಖೆಗೆ ಸರ್ಕಾರದ ಅನುಮತಿ ಬೇಕಾಗಿಲ್ಲ: ಸುಪ್ರೀಂ ಕೋರ್ಟ್

ನ್ಯಾಯಾಲಯದ ಅಧೀನದಲ್ಲಿ ನಡೆಯುವಂತಹ ಪ್ರಕರಣಗಳ ತನಿಖೆಗೆ ಸರ್ಕಾರದ ಅನುಮತಿ ಬೇಕಾಗಿಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ. ಇದರಿಂದಾಗಿ ಕೇಂದ್ರ ಸರ್ಕಾರ ಹಾಗೂ ನ್ಯಾಯಾಂಗದ ನಡುವೆ ಮತ್ತೊಂದು ಸುತ್ತಿನ ತಿಕ್ಕಾಟ ನಡೆಯುವ ಸಾಧ್ಯತೆ ಇದೆ.

**2ಜಿ ಪ್ರಕರಣದ ತನಿಖೆಗೆ ಅನುಮತಿ ಏಕೆ ಬೇಕು?**

ಇದು ಕೋರ್ಟ್‌ನ ಉಸ್ತುವಾರಿಯಲ್ಲಿ ನಡೆಯುತ್ತಿರುವ ತನಿಖೆ. ಹೀಗಾಗಿ ಇನ್ನು ಮುಂದೆ ಯಾವುದೇ ಅನುಮತಿ ಬೇಕಾಗಿಲ್ಲ. ನ್ಯಾಯಾಲಯದ ಅಧೀನದಲ್ಲಿ ನಡೆಯುವ ತನಿಖೆಗಳಲ್ಲಿ ದೆಹಲಿ ಪೊಲೀಸ್ ವಿಶೇಷ ಕಾಯ್ದೆಯ ಸೆಕ್ಷನ್ 6ಎ ಅಡಿ ಅನುಮತಿಯನ್ನು ಪಡೆಯಬೇಕಾಗಿಲ್ಲ. ತನಿಖೆ ನಡೆಸಿರಿ ಎಂದು ಸಿಬಿಐಗೆ ನ್ಯಾಯಮೂರ್ತಿಗಳಾದ ಜಿ.ಎಸ್. ಸಿಂ l ಹಾಗೂ ಕೆ.ಎಸ್. ರಾಧಾಕೃಷ್ಣನ್ ಅವರಿದ್ದ ಪೀಠ ಸೂಚಿಸಿತು.

ನ್ಯಾಯಾಲಯದ ಈ ಅಭಿಪ್ರಾಯ ಕಲ್ಲಿದ್ದಲು ಪ್ರಕರಣದ ವಿಚಾರಣೆ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ಅಧಿಕಾರಿಗಳನ್ನು ವಿಚಾರಣೆ ನಡೆಸಲು ಸಿಬಿಐಗೆ ಕೇಂದ್ರ ಸರ್ಕಾರ ಅನುಮತಿ ನೀಡುತ್ತದೆಯೇ ಎಂಬುದು ಕುತೂಹಲ ಕೆರಳಿಸಿದೆ. ಜಂಟಿ ಕಾರ್ಯದರ್ಶಿ ಅಥವಾ ಅದಕ್ಕಿಂತ ಮೇಲ್ದರ್ಜೆಯ ಅದಿಕಾರಿಗಳನ್ನು ತನಿಖೆಗೊಳಪಡಿಸಲು ಸೆಕ್ಷನ್ 6ಎ ಪ್ರಕಾರ ಸಿಬಿಐ ಸರ್ಕಾರದ ಅನುಮತಿ ಪಡೆಯಬೇಕು ಎಂದು ಸರ್ಕಾರ ವಾದಿಸಿಕೊಂಡು ಬಂದಿದೆ.

**“ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ (National Urban Livelihoods Mission)”**

ನಗರದಲ್ಲಿ ವಾಸಿಸುವ ಬಡ ಜನರ ಜೀವನಮಟ್ಟವನ್ನು ಸುಧಾರಿಸುವ ಮಹತ್ವಾಕಾಂಕ್ಷೆಯೊಂದಿಗೆ ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನ ಸಚಿವಾಲಯ ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ ಅನ್ನು 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ತರಲು ಪ್ರಸ್ತಾಪಿಸಿದೆ.

**ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ ನ ಕೆಲವು ಪ್ರಮುಖ ಅಂಶಗಳು ಇಲ್ಲಿವೆ.**

- ಈ ಉದ್ದೇಶಿತ ಯೋಜನೆಯು ಪ್ರಸ್ತುತ ಜಾರಿಯಲ್ಲಿರುವ “ಸ್ವರ್ಣ ಜಯತಿ ರೋಜಗಾರ್ ಯೋಜನೆ” ಯ ಬದಲಿಗೆ ಜಾರಿಗೊಳ್ಳಲಿದೆ.
- ನಗರ ಬಡತನವನ್ನು ನಿರ್ಮೂಲನೆ ಮಾಡುವ ಗುರಿಯನ್ನು ಈ ಯೋಜನೆ ಹೊಂದಿದ್ದು, ಕೌಶಲ್ಯ ಅಭಿವೃದ್ಧಿ, ಮಾರುಕಟ್ಟೆ ಆಧಾರಿತ ಉದ್ಯೋಗಗಳು ಮತ್ತು ಸ್ವ ಉದ್ಯೋಗಗಳನ್ನು ಸೃಷ್ಟಿಸಲು ಸುಲಭ ಸಾಲ ವಿತರಣೆಯತ್ತ ಗಮನ ಹರಿಸಲು ಈ ಯೋಜನೆ ನೆರವಾಗಲಿದೆ.
- ಅಗತ್ಯ ಮೂಲ ಸೌಕರ್ಯಗಳೊಂದಿಗೆ ನಗರ ಬಡವರಿಗೆ ಹಂತ ಹಂತವಾಗಿ ವಸತಿ ಯೋಜನೆಯನ್ನು ಈ ಯೋಜನೆಯಡಿ ಕಲ್ಪಿಸಲಾಗುವುದು. ಇದಲ್ಲದೇ ನಗರದಲ್ಲಿ ಬೀದಿ ವ್ಯಾಪಾರಿಗಳ ಜೀವನೋಪಾಯ ಆಧಾರಗಳಿಗೆ ಸ್ಪಂದಿಸುವ ಗುರಿಯನ್ನು ಸಹ ಈ ಯೋಜನೆ ಹೊಂದಿದೆ.
- ಒಟ್ಟಾರೆಯಾಗಿ ನಗರದಲ್ಲಿ ವಾಸಿಸುತ್ತಿರುವ ಬಡವರು, ಕೊಳೆಗೇರಿ ವಾಸಿಗಳು ಮತ್ತು ಬೀದಿ ವ್ಯಾಪಾರಿಗಳ ಹಿತದೃಷ್ಟಿ ಕಾಯುವ ದೂರದೃಷ್ಟಿಯನ್ನು ಈ ಯೋಜನೆ ಹೊಂದಿದೆ.

**ಮಹಾರಾಷ್ಟ್ರದ ಸರ್ಕಾರಿ ನೌಕರರಿಗೆ "ಆಧಾರ್" ಬ್ಯಾಂಕ್ ಖಾತೆ ಮೂಲಕ ವೇತನ ಪಾವತಿ**

ದೇಶದಲ್ಲಿ ಇದೇ ಪ್ರಥಮ ಬಾರಿಗೆ ಮಹಾರಾಷ್ಟ್ರದ ಸರ್ಕಾರಿ ನೌಕರರಿಗೆ "ಆಧಾರ್" ಜೊತೆ ಹೊಂದಿಸಿದ ಬ್ಯಾಂಕ್ ಖಾತೆಗಳ ಮೂಲಕ ವೇತನವನ್ನು ಪಾವತಿಸಲಾಯಿತು. ಮಹಾರಾಷ್ಟ್ರದ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯ ನೌಕರರಿಗೆ ತಮ್ಮ ಜುಲೈ 2013 ತಿಂಗಳ ವೇತನವನ್ನು ಆಧಾರ್ ಜೊತೆ ಹೊಂದಿಸಿದ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಯಿತು. ಇದೇ ವೇಳೆ ಮಹಾರಾಷ್ಟ್ರ ಸರ್ಕಾರವು "ಆಧಾರ್ ಪೇಮೆಂಟ್ ಬ್ರಿಡ್ಜ್" (Adhar Payment Bridge) ನ್ನು ತನ್ನ ಎಲ್ಲಾ ಇಲಾಖೆಯ ನೌಕರರಿಗೂ ವಿಸ್ತರಿಸಲು ನಿರ್ಧರಿಸಿದೆ. ಇದರಿಂದ ವೇತನವನ್ನು ತ್ವರಿತಗತಿಯಲ್ಲಿ ಮತ್ತು ನಿಖರವಾಗಿ ಸಂಬಂಧಿತ ವ್ಯಕ್ತಿಗೆ ತಲುಪಿಸಲು ಸಹಾಯಕವಾಗಲಿದೆ.

**ತ್ವರಿತಗತಿ ವೇತನ ಪಾವತಿಗೆ ಆಧಾರ್:**

ಮಹಾರಾಷ್ಟ್ರ ರಾಜ್ಯ ಸರ್ಕಾರ "ಯುಐಡಿ ಫಾರ್ ಫಾಸ್ಟರ್ ಸ್ಯಾಲರಿ" ಯೋಜನೆಯನ್ನು ತನ್ನ ಎಲ್ಲಾ ನೌಕರರಿಗಾಗಿ ಪರಿಚಯಿಸಿದೆ. ತನ್ನ ಎಲ್ಲಾ ನೌಕರರು "ಆಧಾರ್" ನಡಿ ನೊಂದಾಯಿಸಲು ಪ್ರೋತ್ಸಾಹಿಸಲು ಮತ್ತು ವೇತನವನ್ನು ಅತೀ ವೇಗವಾಗಿ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಆಧಾರ್ (Unique Identification (UID) ಯೋಜನೆಯನ್ನು ದೇಶದಲ್ಲೇ ಪ್ರಥಮ ಬಾರಿಗೆ ಮಹಾರಾಷ್ಟ್ರದ ತೆಂಬ್ಲಿ ಎಂಬಲ್ಲಿ ಸೆಪ್ಟಂಬರ್ 29, 2010 ರಲ್ಲಿ ಉದ್ಘಾಟನೆಗೊಂಡಿತ್ತು. ತಂಬ್ಲಿ ಗ್ರಾಮದ ರಂಜನ್ ಸೊನಾವನೆ ಆಧಾರ್ ಕಾರ್ಡ್ ಪಡೆದ ಪ್ರಥಮ ಪ್ರಜೆಯಾಗಿದ್ದಾರೆ.

**ನಾಗಾಲ್ಯಾಂಡ್ ನ ಉಪಚುನಾವಣೆಯಲ್ಲಿ VVPAT ವ್ಯವಸ್ಥೆ ಆಳವಡಿಸಿಕೊಳ್ಳಲಿರುವ ಚುನಾವಣಾ ಆಯೋಗ**

ನಾಗಾಲ್ಯಾಂಡ್ ನಲ್ಲಿ ಸೆಪ್ಟೆಂಬರ್ 2013 ರಂದು ನಡೆಯಲಿರುವ ಉಪ ಚುನಾವಣೆಯಲ್ಲಿ ಭಾರತ ಚುನಾವಣಾ ಆಯೋಗದ ಬಹು ನಿರೀಕ್ಷಿತ "ವೋಟರ್ ವೆರಿಫಿಯಬಲ್ ಪೇಪರ್ ಆಡಿಟ್ ಟ್ರಯಲ್ (Voter Verifiable Paper Audit Trial)" ವಿಧಾನವನ್ನು ಇದೇ ಮೊದಲ ಬಾರಿಗೆ ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿದೆ. ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿ ವಿ.ಎಸ್.ಸಂಪತ್ ಅವರು ಖುದ್ದಾಗಿ ಇದರ ಮೇಲುಸ್ತುವಾರಿ ಮಾಡಲಿದ್ದಾರೆ.

- 21 ಮತದಾನ ಕೇಂದ್ರಗಳಲ್ಲಿ ಒಟ್ಟು 42 VVPAT ವ್ಯವಸ್ಥೆಯನ್ನು ಅಳವಡಿಸಲಾಗುವುದು. ಸುಮಾರು 12000 ಮತದಾರರು ಮತದಾನದಲ್ಲಿ ಭಾಗಿಯಾಗಲಿದ್ದು, ದೇಶದಲ್ಲಿ ಇದೇ ಮೊದಲ ಬಾರಿಗೆ VVPAT ವ್ಯವಸ್ಥೆಯ ಮೂಲಕ ಮತದಾನ ಮಾಡಲಿದ್ದಾರೆ.
- VVPAT ವ್ಯವಸ್ಥೆಯನ್ನು ಚುನಾವಣೆಯಲ್ಲಿ ಅಳವಡಿಸಿಕೊಳ್ಳವು ಸಲುವಾಗಿ ಸರ್ಕಾರ 14 ಆಗಸ್ಟ್, 2013 ರಂದು ಚುನಾವಣೆ ನಿಯಮ-1961 ಕ್ಕೆ ತಿದ್ದುಪಡಿ ತಂದಿದೆ.

**ಏನಿದು VVPAT**?

- VVPAT ಭಾರತ ಚುನಾವಣಾ ಆಯೋಗದ ಬಹು ಮಹತ್ವಾಕಾಂಕ್ಷಿ ಕಾರ್ಯಕ್ರಮವಾಗಿದ್ದು, ಮುಕ್ತ ಮತ್ತು ನ್ಯಾಯೋಚಿತ ಮತದಾನವನ್ನು ಪ್ರೋತ್ಸಾಹಿಸುವುದು ಇದರ ಪ್ರಮುಖ ಉದ್ದೇಶ.
- VVPAT ವ್ಯವಸ್ಥೆಯಲ್ಲಿ ಮತದಾರರು ತಾವು ತಮ್ಮ ಬೆಂಬಲಿತ ಅಭ್ಯರ್ಥಿಗೆ ಮತವನ್ನು ಚಲಾಯಿಸಿವುದನ್ನು ಮತದಾನದದ ಬಳಿಕ ಪ್ರಿಂಟ್ ಹಾಗುವ ಸ್ಲಿಪ್ ಮೂಲಕ ಖಾತರಿ ಮಾಡಿಕೊಳ್ಳಬಹುದು. ಈ ಸ್ಲಿಪ್ ನಲ್ಲಿ ಮತದಾರನು ಯಾರಿಗೆ ಮತಹಾಕಿದ್ದಾನೆ, ಅಭ್ಯರ್ಥಿ ಹೆಸರು ಮತ್ತು ಚಿನ್ಹೆ ಸಮೇತ ಕಾಣಬಹುದು. ಆದರೆ ಮತದಾರರನು ಈ ಸ್ಲಿಪ್ ಅನ್ನು ತನ್ನ ಬಳಿ ತೆಗೆದುಕೊಂಡು ಹೋಗುವ ಆಗಿಲ್ಲ.
- ಈ ನೂತನ ವ್ಯವಸ್ಥೆಯ ಮತದಾನದ ಯಂತ್ರವನ್ನು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮತ್ತು ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಜಂಟಿಯಾಗಿ ನಿರ್ಮಿಸಿದ್ದು, ಪ್ರತಿ ಯಂತ್ರದ ಬೆಲೆ ರೂ 12,000.
- ಈ ನೂತನ ವ್ಯವಸ್ಥೆಯ ಮೂಲಕ ಮತದಾರರಲ್ಲಿ ತಾವು ಹಾಕಿದ ಮತ ಬೆಂಬಲಿತ ಅಭ್ಯರ್ಥಿಗೆ ಬಿದ್ದಿದಿಯೋ ಇಲ್ಲವೋ ಎಂಬುದರ ಮೇಲಿನ ಗೊಂದಲವನ್ನು ನಿವಾರಿಸಲಿದೆ.

**ದೇಶದ ಮೊಟ್ಟಮೊದಲ ಅತ್ಯಾಧುನಿಕ ಎದೆಹಾಲು ಬ್ಯಾಂಕ್ ಕೋಲ್ಕತ್ತದಲ್ಲಿ ಕಾರ್ಯಾರಂಭ**

ಸರ್ಕಾರ ಸ್ಥಾಪಿಸಿರುವ ದೇಶದ ಮೊದಲ ಅತ್ಯಾಧುನಿಕ `ಎದೆಹಾಲು ಬ್ಯಾಂಕ್'ಗೆ ಕೋಲ್ಕತ್ತದಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಚಾಲನೆ ನೀಡಿದರು. ಎಸ್‌ಎಸ್‌ಕೆಎಂ ಆಸ್ಪತ್ರೆಯಲ್ಲಿ `ಎದೆಹಾಲು ಬ್ಯಾಂಕ್' ಉದ್ಘಾಟಿಸಿ ಮಾತನಾಡಿದ ಮಮತಾ, ಎದೆಹಾಲು ವಂಚಿತ ನವಜಾತ ಶಿಶುಗಳಿಗೆ ಈ ಬ್ಯಾಂಕ್ ಯೋಜನೆ ನಿಜಕ್ಕೂ ವರದಾನ; ತಾಯಿ ಇಲ್ಲದ ಮಕ್ಕಳಿಗೆ ಈ ಯೋಜನೆಯಿಂದ ಲಾಭ ದೊರೆಯಲಿದೆ ಎಂದು ಹೇಳಿದರು.

**ವಿಶೇಷತೆಗಳು ಮತ್ತು ಅನುಕೂಲಗಳು:**

- ಇದು ದೇಶದಲ್ಲೇ ಅತ್ಯಾಧುನಿಕ ಹಾಗೂ ಸಕಲ ಸೌಲಭ್ಯವುಳ್ಳ ಪ್ರಥಮ ಸರ್ಕಾರಿ ಸ್ವಾಮ್ಯದ `ಎದೆಹಾಲು ಬ್ಯಾಂಕ್' ಆಗಿದೆ.
- ತಾಯಿಯ ಎದೆಹಾಲು ವಂಚಿತ ಮಕ್ಕಳಿಗೆ ಇಲ್ಲಿ ಸ್ವಚ್ಛ ಹಾಗೂ ಸುರಕ್ಷತೆಯಿಂದ ಕೂಡಿದ ಹಾಲು ಹಾಗೂ ಆರೋಗ್ಯ ಸೌಲಭ್ಯ ದೊರೆಯಲಿದೆ.
- ದೇಶದಲ್ಲಿ ಈಗ ಕೆಲವೆಡೆ ಖಾಸಗಿ ಸಹಭಾಗಿತ್ವದಲ್ಲಿ `ಎದೆಹಾಲು ಬ್ಯಾಂಕ್'ಗಳು ಇವೆ. ಆದರೆ, ಸರ್ಕಾರದ ಅಧೀನದ ಹಾಗೂ ಅತ್ಯಾಧುನಿಕ ಸೌಲಭ್ಯವುಳ್ಳ ದೇಶದ ಮೊದಲ `ಎದೆಹಾಲು ಬ್ಯಾಂಕ್' ಇದಾಗಿದೆ.
- ಮಗುವಿಗೆ ಹಾಲೂಡಿಸುವ ಅವಧಿಯಲ್ಲಿರುವ ತಾಯಂದಿರಿಂದ ಎದೆಹಾಲು ಸಂಗ್ರಹಿಸಿ ಅದನ್ನು ಈ ಬ್ಯಾಂಕಿನಲ್ಲಿ ವೈಜ್ಞಾನಿಕವಾಗಿ ಸಂಗ್ರಹಿಸಿಡಲಾಗುವುದು.

- ಮಗುವಿಗೆ ಹಾಲೂಡಿಸಲು ಅಸಮರ್ಥವಾಗಿರುವ, ಕಾಯಿಲೆಯಿಂದ ಬಳಲುತ್ತಿರುವ, ಇಲ್ಲವೇ ತಾಯಿ ಇಲ್ಲದಿರುವ ಹಾಗೂ ಅಪೌಷ್ಟಿಕತೆಯಿಂದ ಬಳಲುತ್ತಿರುವ ಶಿಶುಗಳಿಗೆ ಈ ಹಾಲನ್ನು ಪೂರೈಸಲಾಗುವುದು
- ಬ್ಯಾಂಕಿನ ಮೂಲಕ ಮಗುವಿಗೆ ಈ ಹಾಲನ್ನು ಉಚಿತವಾಗಿ ಒದಗಿಸಲಾಗುವುದು. `ಎದೆಹಾಲು ಬ್ಯಾಂಕ್'ನ್ನು ರಾಷ್ಟ್ರೀಯ ಆರೋಗ್ಯ ಮಿಷನ್ ಸಹಾಯದಿಂದ ನಡೆಸಲಾಗುತ್ತಿದೆ.

## ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯನ್ನು ಮುಂದುವರೆಸಲು ಸಂಪುಟ ಸಮಿತಿ ಒಪ್ಪಿಗೆ

ಕೇಂದ್ರ ಸರ್ಕಾರದ "ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯನ್ನು" (RGGVY) 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಮುಂದುವರೆಸಲು ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ , ಕೇಂದ್ರ ಇಂಧನ ಇಲಾಖೆಗೆ ಅನುಮೋದನೆ ನೀಡಿದೆ.

**ಮುಂದುವರಿದ ಯೋಜನೆಯ ಗುರಿಗಳು:**

- 10 ಮತ್ತು 11 ನೇ ಪಂಚವಾರ್ಷಿಕ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳನ್ನು ಮುಂದುವರಿಸಿ ಮುಕ್ತಾಯಗೊಳಿಸಲು ಕ್ರಮಕೈಗೊಳ್ಳುವುದು
- 100 ಜನರಿಗೂ ಹೆಚ್ಚು ಜನಸಂಖ್ಯೆ ಇರುವ ಗ್ರಾಮಗಳಿಗೆ ಈ ಯೋಜನೆಯನ್ನು ಮುಂದುವರಿಸಲಾಗುವುದು
- 100 ಜನರಿಗೂ ಹೆಚ್ಚು ಜನಸಂಖ್ಯೆ ಇರುವ ಗ್ರಾಮಗಳ ಎಲ್ಲಾ ಬಿಪಿಎಲ್ ಕುಟುಂಬಗಳಿಗೆ ಪ್ರತಿ ವಿದ್ಯುತ್ ಸಂಪರ್ಕಕ್ಕೆ ರೂ.3000/- ರಂತೆ ವಿದ್ಯುತ್ ವ್ಯವಸ್ಥೆ ಕಲ್ಪಿಸುವುದು
- ಗ್ರಾಮೀಣ ಕುಟುಂಬಗಳಿಗೆ ನೇರವಾಗಿ ವಿದ್ಯುತ್ ಗ್ರಿಡ್ ಗಳ ಮೂಲಕವೇ ಸಂಪರ್ಕ ಸಲ್ಪಿಸುವುದರಿಂದ ದಿನಂಪ್ರತಿ 6 ಗಂಟೆಗಳಿಗೂ ಹೆಚ್ಚು ವಿದ್ಯುತ್ ಲಭಿಸುತ್ತದೆ.

**ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆ ಬಗ್ಗೆ:**

- ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯನ್ನು ಏಪ್ರಿಲ್ 2005 ರಲ್ಲಿ ಪ್ರಸ್ತುತವಿದ್ದ ಎಲ್ಲಾ ವಿದ್ಯುತ್ ಯೋಜನೆಗಳನ್ನು ಒಗ್ಗೂಡಿಸಿ ಆರಂಭಿಸಲಾಯಿತು
- ಈ ಯೋಜನೆಗೆ ಅಗತ್ಯವಾದ ಶೇ.90 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರವೂ, ಶೇ.10 ರಷ್ಟು ಅನುದಾನವನ್ನು ಈ ಕಾರ್ಯಕ್ರಮದ ನೋಡಲ್ ಸಂಸ್ಥೆಯಾದ ಆರ್.ಇ.ಸಿ. ಸಂಸ್ಥೆಯು ಆಯಾ ರಾಜ್ಯ ಸರ್ಕಾರಗಳಿಗೆ ನೀಡಲಿದೆ
- ಈ ಯೋಜನೆ ದೇಶದ ಎಲ್ಲಾ ಗ್ರಾಮಗಳಿಗೂ ವಿದ್ಯುತ್ ವ್ಯವಸ್ಥೆಯನ್ನು ಒದಗಿಸುವ ಮಹತ್ವಾಕಾಂಕ್ಷೆ ಹೊಂದಿದೆ
- ಗ್ರಾಮೀಣ ಭಾಗದ ಎಲ್ಲಾ ಬಿಪಿಎಲ್ ಕುಟುಂಬಗಳಿಗೆ ಉಚಿತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸುವುದು ಇದರ ಉದ್ದೇಶವಾಗಿದೆ.

**ಸ್ವದೇಶಿ ನಿರ್ಮಿತ ದೇಶದ ಪ್ರಥಮ ಅಣು ಚಾಲಿತ ಜಲಾಂತರ್ಗಾಮಿ "ಐಎನ್‌ಎಸ್ ಅರಿಹಂತ್ " ರಾಷ್ಟ್ರಕ್ಕೆ ಸಮರ್ಪಣೆ**

ಅಣು ಚಾಲಿತ ಸಬ್‌ಮೆರಿನ್‌ಗಳ ನಿರ್ಮಾಣ ಕ್ಷೇತ್ರದಲ್ಲಿ ಭಾರತ ಮಹತ್ವದ ಮೈಲಿಗಲ್ಲು ಸಾಧಿಸಿದೆ. ಐಎನ್‌ಎಸ್ ಅರಿಹಂತ್ ಸಬ್ ಮೆರಿನ್‌ಗೆ ಅಳವಡಿಸಲಾಗಿರುವ ಮೊದಲ ದೇಶಿ ನಿರ್ಮಿತ ಅಣುರಿಯಾಕ್ಟರ್ ಶುಕ್ರವಾರ ರಾತ್ರಿಯಿಂದ ಕಾರ್ಯಾಚರಣೆ ಆರಂಭಿಸಿದೆ. ಈ ಮೂಲಕ ದೇಶದ ಮೊದಲ ಅಣು ಚಾಲಿತ ಸಬ್‌ಮೆರಿನ್ ಶೀಘ್ರದಲ್ಲೇ ನೌಕಾ ಸೇನೆಗೆ ಸೇರ್ಪಡೆಗೊಳ್ಳಲಿದೆ. ಸದ್ಯ ವಿಶಾಖಪಟ್ಟಣದಲ್ಲಿರುವ ಅರಿಹಂತ್ ಶೀಘ್ರದಲ್ಲೇ ಸಾಗರ ಪರೀಕ್ಷೆಗೆ ಒಳಪಡಲಿದೆ. ಆ ಬಳಿಕ ನೌಕಾಸೇನೆಯನ್ನು ಸೇರ್ಪಡೆಗೊಳ್ಳಲಿದೆ.

**ಐಎನ್‌ಎಸ್ ಅರಿಹಂತ್ ಬಗ್ಗೆ:**

- ಈ ನೌಕೆಗಾಗಿಯೇ ಡಿಆರ್‌ಡಿಒ ಮಧ್ಯಮ ವ್ಯಾಪ್ತಿಯ ಬಿಒ-05 ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಿದೆ. ಅರಿಹಂತ್ ಸೇರ್ಪಡೆಯಿಂದ ದೇಶದ ನೌಕಾಬಲ ಇನ್ನಷ್ಟು ಹೆಚ್ಚಲಿದೆ.
- ಅರಿಹಂತ್ ಮೂಲಕ ನೆಲ, ಜಲ ಮತ್ತು ಆಕಾಶದಲ್ಲಿ ಅಣ್ವಸ್ತ್ರಗಳ ಉಡಾವಣೆ ಸಾಮರ್ಥ್ಯ ಹೊಂದಿರುವ ರಾಷ್ಟ್ರಗಳ ಸಾಲಿಗೆ ಭಾರತವೂ ಸೇರ್ಪಡೆಯಾಗಲಿದೆ. ಈವರೆಗೆ ಅಮೆರಿಕ, ಚೀನಾ, ರಷ್ಯಾ, ಫ್ರಾನ್ಸ್ ಮತ್ತು ಬ್ರಿಟನ್‌ಗಳಷ್ಟೇ ಸಬ್ ಮೆರಿನ್ ಮೂಲಕ ಪ್ರಕ್ಷೇಪಣ ಕ್ಷಿಪಣಿಗಳನ್ನು ಹಾರಿಸುವ ಸಾಮರ್ಥ್ಯ ಹೊಂದಿದ್ದವು.

**ವಿಶೇಷ ಏನು?**

- ಭಾರತವು ಒಟ್ಟು 14 ಸಬ್‌ಮೆರಿನ್‌ಗಳನ್ನು ಹೊಂದಿದೆ. ಇವುಗಳು ಡೀಸೆಲ್ ಮತ್ತು ಬ್ಯಾಟರಿ ಚಾಲಿತಎಂಜಿನ್‌ಗಳನ್ನು ಹೊಂದಿವೆ. ಈ ರೀತಿಯ ಸಬ್‌ಮೆರಿನ್‌ಗಳು ಸಬ್‌ಮೆರಿನ್‌ಗಳು ದೀರ್ಘಾವಧಿ ವರೆಗೆ ಸಾಗರದಡಿ ಉಳಿಯುವ ಸಾಮರ್ಥ್ಯ ಹೊಂದಿಲ್ಲ. ನಿಯಮಿತವಾಗಿ ದಡಕ್ಕೆ ಬಂದು ಚಾರ್ಜ್ ಮಾಡಿಸಿಕೊಂಡು ಹೋಗಬೇಕಿತ್ತು. ಆದರೆ, ಅಣು ಚಾಲಿತ ಸಬ್ ಮೆರಿನ್‌ಗಳಿಂದಾಗಿ ಈ ಸಮಸ್ಯೆ ನಿವಾರಣೆಯಾಗಲಿದೆ. ಈ ರೀತಿಯ ಸಬ್‌ಮೆರಿನ್‌ಗಳು ದೀರ್ಘಾವಧಿ ವರೆಗೆ ಆಳಸಾಗರದಲ್ಲಿ ಉಳಿಯುವ ಸಾಮರ್ಥ್ಯ ಹೊಂದಿವೆ.

**ವಿಶ್ವದ ಅತ್ಯಂತ ಶ್ರೀಮಂತ ಗಣೇಶೋತ್ಸವದ ಕೀರ್ತಿ ಈ ವರ್ಷ ಇನ್ನೂ ಸಿರಿವಂತ**

ವಿಶ್ವದ ಅತ್ಯಂತ ಶ್ರೀಮಂತ ಗಣೇಶೋತ್ಸವ ಎಂದೇ ಖ್ಯಾತಿವೆತ್ತ ಮುಂಬೈ ಕಿಂಗ್ಸ್ ಸರ್ಕಲ್‌ನ ಜಿಎಸ್‌ಬಿ ಪೆಂಡಾಲ್‌ನ ಗಣಪ ಈ ಬಾರಿ ಇನ್ನಷ್ಟು ಸಿರಿವಂತ. ಕಾರಣ ಈ ಬಾರಿ ಗಣಪನ ಮೇಲಿನ ಚಿನ್ನಾಭರಣ ಮತ್ತಷ್ಟು ಹೆಚ್ಚುತ್ತಿರುವುದು. ಕಳೆದ ಬಾರಿ ಸುಮಾರು 78 ಕೆ.ಜಿ.ಯಷ್ಟಿದ್ದ ಗಣೇಶ ವಿಗ್ರಹದ ಮೇಲಿನ ಚಿನ್ನಾಭರಣದ ತೂಕ ಈ ಬಾರಿ 80 ಕೆ.ಜಿ. ದಾಟಲಿದೆ. ಹಾಗಾಗಿ, ಈ ಗಣಪನ ಮೌಲ್ಯ ಬರೋಬ್ಬರಿ 21.6 ಕೋಟಿ ರೂಪಾಯಿಯಾಗಲಿದೆ

**ವಿಶೇಷತೆಗಳು:**

- ವಿಷಯವೆಂದರೆ ಕಳೆದ ಬಾರಿ 2 ಚಿನ್ನದ ಮುಂಗೈಗಳನ್ನು ಹೊಂದಿದ್ದ ಗಣಪತಿಗೆ ಈ ಬಾರಿ ಚಿನ್ನದಿಂದ ತಯಾರಿಸಿದ ಮೊಣಕೈ ಕವಚವೂ ಸಮರ್ಪಿತವಾಗಲಿದೆ.
- ಎರಡೂ ಮೊಣಕೈ ಕವಚಗಳು ಕರ್ನಾಟಕದ ಉಡುಪಿಯಲ್ಲಿ ಭರದಿಂದ ಸಿದ್ಧವಾಗುತ್ತಿವೆ. ಉಡುಪಿಯ ಸ್ವರ್ಣ ಜುವೆಲರ್ಸ್ 'ಸ್ವರ್ಣೋದ್ಯಮ' ಕಾರ್ಯಾಗಾರದಲ್ಲಿ ಸಂಸ್ಥೆಯ ನಿರ್ದೇಶಕ ಗುಜ್ಜಾಡಿ ರಾಮದಾಸ ನಾಯಕ್ ಅವರ ಮಾರ್ಗದರ್ಶನದಲ್ಲಿ ಈ ಪರಿಕರ ತಯಾರಿಯಾಗುತ್ತಿದೆ.
- 12 ಅಡಿ ಎತ್ತರ ಇರಲಿರುವ ಈ ಗಣಪನ ಮೂರ್ತಿಯನ್ನು ವೀಕ್ಷಿಸಲು ಪ್ರತಿ ವರ್ಷ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ನೆರೆದಿರುತ್ತಾರೆ.
- ಗಣೇಶೋತ್ಸವ ನಡೆಯುವ 10 ದಿನಗಳ ಅವಧಿಯಲ್ಲಿ ಯಾವುದೇ ಕ್ಷಣದಲ್ಲೂ ಪೆಂಡಾಲ್‌ನಲ್ಲಿ ಕನಿಷ್ಠ 2000 ಜನ ಇದ್ದೇ ಇರುತ್ತಾರೆ ಎಂಬುದೇ ಈ ಗಣಪನ ಜನಪ್ರಿಯತೆಗೆ ಸಾಕ್ಷಿ.
- ಕಳೆದ ವರ್ಷ ಆಯೋಜನಾ ಸಮಿತಿ 10 ದಿನಗಳ ಕಾರ್ಯಕ್ರಮಕ್ಕೆ 224 ಕೋಟಿ ರೂ. ವಿಮೆ ಮಾಡಿಸಿತ್ತು. ಇದರಲ್ಲಿ ಗಣಪತಿ ಮೂರ್ತಿ, ಪೆಂಡಾಲ್ ಜೊತೆಗೆ ಭಾಗವಹಿಸುವ ಭಕ್ತಾದಿಗಳಿಗಳೂ ವಿಮೆ ಸೇರಿರುತ್ತದೆ. ಒಂದು ವೇಳೆ ಗಣೇಶೋತ್ಸವದ ವೇಳೆ ಯಾವುದೇ ಅವಘಡ ನಡೆದರೂ ಭಕ್ತಾದಿಗಳಿಗೆ ವಿಮೆ ಸಿಗುವಂತೆ ಮಾಡಿರಲಾಗಿರುತ್ತದೆ.
- ಈ ವರ್ಷ ಚಿನ್ನದ ಪ್ರಮಾಣ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವಿಮೆ ಮೊತ್ತ ಅಂದಾಜು 230 ಕೋಟಿ ರೂ ಆಗಿರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.
- ಗಣಪತಿ ನಿರ್ಮಾಣಕ್ಕೆ ಬಳಸಲಾದ ಚಿನ್ನವನ್ನು ವಿಸರ್ಜನೆ ವೇಳೆ ಜಾಗರೂಕತೆಯಿಂದ ಕಳಚಿ ಮಣ್ಣಿನ ಮೂರ್ತಿಯನ್ನಷ್ಟೇ ವಿಸರ್ಜಿಸಲಾಗುತ್ತದೆ. ಚಿನ್ನವನ್ನು ತೆಗೆದಿಟ್ಟು ಮುಂದಿನ ವರ್ಷ ಮತ್ತೆ ಅದನ್ನು ಬಳಸಲಾಗುತ್ತದೆ.

**ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರ ಸಮಾಧಿಯ ಸ್ಥಳ 'ರಾಜಘಾಟ್' ಎಕೆ-47 ಭದ್ರತೆ**

ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರ ಸಮಾಧಿಯ ಸ್ಥಳ 'ರಾಜಘಾಟ್' ಭದ್ರತೆಗೆ ಕೇಂದ್ರ ಸರ್ಕಾರ ಇದೇ ಮೊದಲ ಬಾರಿಗೆ ಎಕೆ-47 ಬಂದೂಕು ಹಾಗೂ ಇನ್ಸಾಸ್ ರೈಫಲ್ ಹೊಂದಿದ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದೆ. ದೇಶ-ವಿದೇಶಗಳು ಗಣ್ಯರು, ಜನಸಾಮಾನ್ಯರು ವರ್ಷವಿಡೀ ಭೇಟಿ ನೀಡುವ, ಯಮುನಾ ನದಿ ದಂಡೆಯಲ್ಲಿರುವ 'ರಾಜಘಾಟ್'ಗೆ ಶಸ್ತ್ರಸಜ್ಜಿತ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸುವ ಪ್ರಸ್ತಾವನೆ ಆರು ವರ್ಷಗಳಿಂದ ಇತ್ತಾದರೂ, ಗಾಂಧಿ ಅವರ ಅಹಿಂಸಾ ತತ್ವಕ್ಕೆ ಮನ್ನಣೆ ನೀಡುವ ಉದ್ದೇಶದಿಂದ ಅದನ್ನು ಪರಿಗಣಿಸಿರಲಿಲ್ಲ. ಆದರೆ ಗುಪ್ತಚರ ವರದಿಗಳ ಎಚ್ಚರಿಕೆ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆ ಹಾಗೂ ಸರ್ಕಾರದ ಇತರೆ ಸಂಸ್ಥೆಗಳ ಜತೆ ಸಮಾಲೋಚನೆ ನಡೆಸಿದ ಕೇಂದ್ರ ಗೃಹ ಇಲಾಖೆ, ಆ.1ರಿಂದ ರಾಜಘಾಟ್‌ನಲ್ಲಿ ಸಿಆರ್‌ಪಿಎಫ್ ಸಿಬ್ಬಂದಿಯನ್ನು ನಿಯೋಜಿಸಿದೆ.

ರಾಜಘಾಟ್ ಸನಿಹದಲ್ಲೇ ಇರುವ ಶಕ್ತಿ ಸ್ಥಳ (ಇಂದಿರಾಗಾಂಧಿ), ವೀರಭೂಮಿ (ರಾಜೀವ್ ಗಾಂಧಿ), ವಿಜಯ ಸ್ಥಳ (ಲಾಲ್ ಬಹಾದ್ದೂರ್ ಶಾಸ್ತ್ರಿ) ಸೇರಿದಂತೆ ಇತರೆ ಗಣ್ಯರ ಸಮಾಧಿಗಳಿಗೆ 2004ರಿಂದಲೇ ಶಸ್ತ್ರಸಜ್ಜಿತ ಸಿಬ್ಬಂದಿಯಿಂದ ಭದ್ರತೆ ಒದಗಿಸಲಾಗಿದೆ. ಸಿಐಎಸ್‌ಎಫ್ನ 24 ಪುರುಷ ಹಾಗೂ ಮಹಿಳಾ ಸಿಬ್ಬಂದಿ ರಾಜಘಾಟ್‌ಗೆ ಭದ್ರತೆ ನೀಡಲಿದ್ದಾರೆ

**ಸ್ವದೇಶಿ ನಿರ್ಮಿತ ಭಾರತದ ಮೊದಲ ವಿಮಾನ ವಾಹಕ ಯುದ್ಧ ನೌಕೆ `ಐಎನ್‌ಎಸ್ ವಿಕ್ರಾಂತ್':ಲೋಕಾರ್ಪಣೆ**

ಸ್ವದೇಶಿ ನಿರ್ಮಿತ ಭಾರತದ ಮೊದಲ ವಿಮಾನ ವಾಹಕ ಯುದ್ಧ ನೌಕೆ `ಐಎನ್‌ಎಸ್ ವಿಕ್ರಾಂತ್' ಅನ್ನು ಕೊಚ್ಚಿ ಹಡಗು ನಿರ್ಮಾಣ ಕೇಂದ್ರದಲ್ಲಿ ರಕ್ಷಣಾ ಸಚಿವ ಎ.ಕೆ. ಆಂಟನಿ ಅವರ ಪತ್ನಿ ಎಲಿಜಬೆತ್ ಅವರು ದೇಶಕ್ಕೆ ಸಮರ್ಪಿಸಿದರು. ಇದರೊಂದಿಗೆ ಭಾರತವು ಬೃಹತ್ ಗಾತ್ರ ಮತ್ತು ಹೆಚ್ಚಿನ ಸಾಮರ್ಥ್ಯದ ನೌಕೆಯ ವಿನ್ಯಾಸ ಮತ್ತು ನಿರ್ಮಾಣ ಮಾಡುವ ರಾಷ್ಟ್ರಗಳ ಸಾಲಿಗೆ ಸೇರಿದಂತಾಗಿದೆ.

**ವಿಶೇಷತೆ:**

- ಐಎನ್‌ಎಸ್ ವಿಕ್ರಾಂತ್‌ನ ಮೊದಲ ಹಂತಹ ನಿರ್ಮಾಣ ಕಾರ್ಯ ಈಗ ಮುಗಿದಿದ್ದು, 2016ಕ್ಕೂ ಮುಂಚೆ ಇದು ಪರೀಕ್ಷೆಗೆ ಒಳಪಡಲಿದೆ. ಬಳಿಕ 2018ರ ಅಂತ್ಯದಲ್ಲಿ ನೌಕಾಪಡೆಗೆ ಸೇರಲಿದೆ.
- ಈ ನೌಕೆ ಮೂಲಕ ಮಿಗ್-29ಕೆ, ಹಗುರ ಯುದ್ಧ ವಿಮಾನ ಮತ್ತು ಕಮೊವ್-31 ವಿಮಾನಗಳು ಹಾರಾಟ ನಡೆಸಲಿವೆ
- ದೇಶೀಯವಾಗಿ ವಿನ್ಯಾಸ ಮತ್ತು ನಿರ್ಮಾಣ ಮಾಡಿದಲ್ಲದೇ, ಹಡಗು ನಿರ್ಮಾಣಕ್ಕೆ ಬಳಸಲಾಗುವ ಉನ್ನತ ಶ್ರೇಣಿಯ ಉಕ್ಕನ್ನು ಭಾರತೀಯ ಉಕ್ಕು ಪ್ರಾಧಿಕಾರ ಪೂರೈಸಿದೆ.
- 260 ಮೀಟರ್ ಉದ್ದ ಮತ್ತು 60 ಮೀಟರ್ ಅಗಲದ ಈ ನೌಕೆಯ ವಿನ್ಯಾಸವನ್ನು ನೌಕಾ ವಿನ್ಯಾಸ ನಿರ್ದೇಶನಾಲಯವು ಕೊಚ್ಚಿ ಹಡಗು ನಿರ್ಮಾಣ ಕೇಂದ್ರದಲ್ಲಿ ಮಾಡಿದೆ. 2006ರ ನವೆಂಬರ್‌ನಲ್ಲಿ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು.

**ಮಾಹಿತಿ ಹಕ್ಕು ಕಾಯ್ದೆ (ಆರ್.ಟಿ.ಐ) ವ್ಯಾಪ್ತಿಯಿಂದ ರಾಜಕೀಯ ಪಕ್ಷಗಳಿಗೆ ವಿನಾಯಿತಿ**

ಆರು ರಾಷ್ಟ್ರೀಯ ಪಕ್ಷಗಳು ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆ ವ್ಯಾಪ್ತಿಗೆ ಬರುತ್ತವೆ ಎಂದು ಜೂ.3ರಂದು ಕೇಂದ್ರೀಯ ಮಾಹಿತಿ ಆಯೋಗ (ಸಿಐಸಿ) ಹೊರಡಿಸಿದ್ದ ಮಹತ್ವದ ಆದೇಶ ರದ್ದುಪಡಿಸಿ, ಆರ್‌ಟಿಐ ಪರಿಧಿಯಿಂದ ರಾಜಕೀಯ ಪಕ್ಷಗಳನ್ನು ಹೊರಗಿಡುವ ಸಲುವಾಗಿ ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಿದೆ.

**ಮಸೂದೆ ಏನು ಹೇಳುತ್ತದೆ?**

- 1951ರ ಪ್ರಜಾಪ್ರತಿನಿಧಿ ಕಾಯ್ದೆಯಡಿ ರಾಜಕೀಯ ಪಕ್ಷವೆಂದು ಮಾನ್ಯತೆ ಪಡೆದಿರುವ ಅಥವಾ ನೋಂದಣಿಯಾಗಿರುವ ಯಾವುದೇ ಸಂಸ್ಥೆ ಅಥವಾ ಯಾವುದೇ ಸಮಿತಿಗಳನ್ನು ಸಾರ್ವಜನಿಕ ಪ್ರಾಧಿಕಾರ ಎಂದು ಪರಿಗಣಿಸುವಂತಿಲ್ಲ ಎಂಬ ವಿವರಣೆಯನ್ನು ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 2ರಡಿ ಸೇರಿಸುವ ಸಲುವಾಗಿ ಜೂ.3ರಿಂದಲೇ ಪೂರ್ವಾನ್ವಯವಾಗುವಂತೆ ಈ ವಿಧೇಯಕವನ್ನು ಮಂಡನೆ ಮಾಡಲಾಗಿದೆ.
- ಯಾವುದೇ ನ್ಯಾಯಾಲಯ ಅಥವಾ ಆಯೋಗ ಹೊರಡಿಸಿರುವ ಯಾವುದೇ ತೀರ್ಪು, ತೀರ್ಮಾನ ಅಥವಾ ಆದೇಶಗಳಿಂದ ಪ್ರಜಾಪ್ರತಿನಿಧಿ ಕಾಯ್ದೆಯಡಿ ಮಾನ್ಯತೆ ಪಡೆದಿರುವ ರಾಜಕೀಯ ಪಕ್ಷಗಳಿಗೆ ಯಾವುದೇ ಪರಿಣಾಮವಾಗುವುದಿಲ್ಲ ಎಂದು ಮಸೂದೆ ಹೇಳುತ್ತದೆ.

- ಜೂ.3ರಂದು ಸಿಐಸಿ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಅದರಿಂದ ಬಚಾವ್ ಆಗುವ ಸಲುವಾಗಿ ಜೂ.3ರಿಂದಲೇ ಪೂರ್ವಾನ್ವಯವಾಗುವಂತೆ ಆರ್‌ಟಿಐ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾಪ ವಿಧೇಯಕದಲ್ಲಿದೆ.
- ಪ್ರಜಾಪ್ರತಿನಿಧಿ ಕಾಯ್ದೆ ಹಾಗೂ ಆದಾಯ ತೆರಿಗೆ ಕಾಯ್ದೆಯಲ್ಲಿ ರಾಜಕೀಯ ಪಕ್ಷಗಳ ಹಣಕಾಸು ವ್ಯವಹಾರ ಮತ್ತು ಅಭ್ಯರ್ಥಿಗಳ ಪಾರದರ್ಶಕತೆ ಕಾಯ್ದುಕೊಳ್ಳುವ ಅಂಶಗಳಿವೆ. ಹೀಗಾಗಿ ರಾಜಕೀಯ ಪಕ್ಷಗಳನ್ನು ಆರ್‌ಟಿಐ ಕಾಯ್ದೆಯಡಿ ಸಾರ್ವಜನಿಕ ಸಂಸ್ಥೆಗಳೆಂದು ಘೋಷಿಸುವುದರಿಂದ ರಾಜಕೀಯ ಪಕ್ಷಗಳ ಸುಗಮ ಕಾರ್ಯನಿರ್ವಹಣೆಗೆ ಅಡ್ಡಿಯಾಗುತ್ತದೆ.
- ರಾಜಕೀಯ ಎದುರಾಳಿಗಳು ಆರ್‌ಟಿಐ ಕಾಯ್ದೆಯ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡು ರಾಜಕೀಯ ಪಕ್ಷಗಳ ಕಾರ್ಯನಿರ್ವಹಣೆಗೆ ತೊಂದರೆ ಉಂಟು ಮಾಡುವ ಸಾಧ್ಯತೆ ಇದೆ ಎಂದು ಮಸೂದೆ ಹೇಳುತ್ತದೆ. ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ, ಬಿಎಸ್‌ಪಿ, ಎನ್‌ಸಿಪಿ, ಸಿಪಿಐ ಹಾಗೂ ಸಿಪಿಎಂಗಳನ್ನು ರಾಜಕೀಯ ಪ್ರಾಧಿಕಾರಗಳೆಂದು ಸಿಐಸಿ ತನ್ನ ಜೂ.3ರ ಆದೇಶದಲ್ಲಿ ವ್ಯಾಖ್ಯಾನಿಸಿತ್ತು.

**ವಿಶಿಷ್ಟ ಸಾಧನೆಯ ಹೊಸ್ತಿಲಲ್ಲಿ 15 ನೇ ಲೋಕಸಭೆ**

ಹತ್ತು ಹಲವು ಹಗರಣ, ವಿವಾದ, ಬಿಕ್ಕಟ್ಟು ಮತ್ತು ಕೋಲಾಹಲಗಳ ಹೊರತಾಗಿಯೂ ಐದು ವರ್ಷಗಳ ಅವಧಿಯಲ್ಲಿ ಒಮ್ಮೆಯೂ ಅವಿಶ್ವಾಸ ಗೊತ್ತುವಳಿ ಅಥವಾ ವಿಶ್ವಾಸ ಮತ ಯಾಚಿಸುವ ಸಂದರ್ಭ ಕಾಣದ ಸದ್ಯದ ಲೋಕಸಭೆ ಆ ಮೂಲಕ ಹೊಸ ಇತಿಹಾಸವೊಂದನ್ನು ನಿರ್ಮಿಸುವ ಸನ್ನಾಹದಲ್ಲಿದೆ. ಪ್ರಸ್ತುತ ಲೋಕಸಭೆಯ ಕಾಲಾವಧಿ ಮುಂಬರುವ ಮೇ ತಿಂಗಳಲ್ಲಿ ಪೂರ್ಣಗೊಳ್ಳಲಿದ್ದು ಅದರ ಒಳಗಾಗಿಯೇ ಲೋಕಸಭಾ ಚುನಾವಣೆ ಎದುರಾಗುವ ಸಾಧ್ಯತೆಗಳಿವೆ.

**ಪೂರ್ವಪರ:**

- ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು 2003ರಲ್ಲಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಿದ್ದರು. ಗೊತ್ತುವಳಿ 314-189 ಮತಗಳ ಅಂತರದಿಂದ ಬಿದ್ದುಹೋಗಿತ್ತು.
- ಅದಾದ ನಂತರ 2008ರಲ್ಲಿ ಭಾರತ-ಅಮೆರಿಕ ನಾಗರಿಕ ಪರಮಾಣು ಒಪ್ಪಂದಕ್ಕೆ ಸಂಬಂಧಿಸಿದಂತೆ ಎಡಪಕ್ಷಗಳು ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆದ ನಂತರ ಪ್ರಧಾನಿ ಮನಮೋಹನ್ ಸಿಂಗ್ ಅವರು ವಿಶ್ವಾಸ ಮತ ಯಾಚನೆಗೆ ಮುಂದಾಗಿದ್ದರು.
- ಅದಾದ ನಂತರ ಯಾವುದೇ ವಿಶ್ವಾಸ ಮತ ಯಾಚನೆ ಅಥವಾ ಅವಿಶ್ವಾಸ ಗೊತ್ತುವಳಿ ಮಂಡನೆಯ ಸಂದರ್ಭ ಕೂಡಿ ಬಂದಿಲ್ಲ.

- ತೃಣಮೂಲ ಕಾಂಗ್ರೆಸ್ ಮತ್ತು ಡಿಎಂಕೆಯಂತಹ ಪ್ರಮುಖ ಅಂಗಪಕ್ಷಗಳು ಯುಪಿಎ ಮೈತ್ರಿಕೂಟದಿಂದ ಹೊರಬಂದರೂ ಕಾಂಗ್ರೆಸ್ ನೇತೃತ್ವದ ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲು ಬಿಜೆಪಿ ನೇತೃತ್ವದ ಪ್ರಮುಖ ವಿರೋಧ ಪಕ್ಷ ಎನ್‌ಡಿಎಗೆ ಸಾಧ್ಯವಾಗಲಿಲ್ಲ.
- ಕಾಂಗ್ರೆಸ್ ಬಳಿ ಸರ್ಕಾರಕ್ಕೆ ಬೇಕಾದಷ್ಟು ಅಗತ್ಯ ಸಂಖ್ಯಾಬಲ ಇರುವುದು ವಿರೋಧ ಪಕ್ಷಗಳಿಗೂ ಗೊತ್ತಿರುವ ವಿಷಯ. ರಾಜ್ಯಸಭಾ ಚುನಾವಣೆಯ ವೇಳೆ ಡಿಎಂಕೆ ಮುಖ್ಯಸ್ಥ ಕರುಣಾನಿಧಿ ಅವರ ಪುತ್ರಿ ಕನಿಮೋಳಿ ಅವರನ್ನು ಬೆಂಬಲಿಸುವ ಮೂಲಕ ಸೋನಿಯಾ ಗಾಂಧಿ ಅವರು ಆ ಪಕ್ಷದೊಂದಿಗೆ ಉತ್ತಮ ಬಾಂಧವ್ಯ ಕಾಪಾಡಿಕೊಂಡು ಬಂದಿದ್ದಾರೆ.
- ಇತ್ತೀಚೆಗೆ ಎನ್‌ಡಿಎ ಮೈತ್ರಿ ಕಡಿದುಕೊಂಡ ಸಂಯುಕ್ತ ಜನತಾದಳ (ಜೆಡಿಯು) ಕೂಡಾ ಯುಪಿಎ ತೆಕ್ಕೆಗೆ ಬರುವುದು ನಿಚ್ಚಳವಾಗಿದೆ. ಅದೇ ರಿತಿ ಸಿಬಿಯ ತಮ್ಮ ವಿರುದ್ಧದ ಅಕ್ರಮ ಆಸ್ತಿ ತನಿಖೆ ಕೈಬಿಟ್ಟಿರುವ ಕಾರಣದಿಂದ ಸಮಾಜವಾದಿ ಪಕ್ಷದ ಮುಖ್ಯಸ್ಥ ಮುಲಾಯಂ ಸಿಂಗ್ ಯಾದವ್ ಕಾಂಗ್ರೆಸ್‌ಗೆ ಹತ್ತಿರವಾಗಿದ್ದಾರೆ.

**ನಾಗಾಲ್ಯಾಂಡ್ ನ ಉಪಚುನಾವಣೆಯಲ್ಲಿ VVPAT ವ್ಯವಸ್ಥೆ ಆಳವಡಿಸಿಕೊಳ್ಳಲಿರುವ ಚುನಾವಣಾ ಆಯೋಗ**

ನಾಗಾಲ್ಯಾಂಡ್ ನಲ್ಲಿ ಸೆಪ್ಟೆಂಬರ್ 2013 ರಂದು ನಡೆಯಲಿರುವ ಉಪ ಚುನಾವಣೆಯಲ್ಲಿ ಭಾರತ ಚುನಾವಣಾ ಆಯೋಗದ ಬಹು ನಿರೀಕ್ಷಿತ "ವೋಟರ್ ವೆರಿಫಿಯಬಲ್ ಪೇಪರ್ ಆಡಿಟ್ ಟ್ರಯಲ್ (Voter Verifiable Paper Audit Trial)" ವಿಧಾನವನ್ನು ಇದೇ ಮೊದಲ ಬಾರಿಗೆ ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿದೆ. ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿ ವಿ.ಎಸ್.ಸಂಪತ್ ಅವರು ಖುದ್ದಾಗಿ ಇದರ ಮೇಲುಸ್ತುವಾರಿ ಮಾಡಲಿದ್ದಾರೆ.

- 21 ಮತದಾನ ಕೇಂದ್ರಗಳಲ್ಲಿ ಒಟ್ಟು 42 VVPAT ವ್ಯವಸ್ಥೆಯನ್ನು ಅಳವಡಿಸಲಾಗುವುದು. ಸುಮಾರು 12000 ಮತದಾರರು ಮತದಾನದಲ್ಲಿ ಭಾಗಿಯಾಗಲಿದ್ದು, ದೇಶದಲ್ಲಿ ಇದೇ ಮೊದಲ ಬಾರಿಗೆ VVPAT ವ್ಯವಸ್ಥೆಯ ಮೂಲಕ ಮತದಾನ ಮಾಡಲಿದ್ದಾರೆ.
- VVPAT ವ್ಯವಸ್ಥೆಯನ್ನು ಚುನಾವಣೆಯಲ್ಲಿ ಅಳವಡಿಸಿಕೊಳ್ಳವು ಸಲುವಾಗಿ ಸರ್ಕಾರ 14 ಆಗಸ್ಟ್, 2013 ರಂದು ಚುನಾವಣೆ ನಿಯಮ-1961 ಕ್ಕೆ ತಿದ್ದುಪಡಿ ತಂದಿದೆ.

**ಏನಿದು VVPAT**?

- VVPAT ಭಾರತ ಚುನಾವಣಾ ಆಯೋಗದ ಬಹು ಮಹತ್ವಾಕಾಂಕ್ಷಿ ಕಾರ್ಯಕ್ರಮವಾಗಿದ್ದು, ಮುಕ್ತ ಮತ್ತು ನ್ಯಾಯೋಚಿತ ಮತದಾನವನ್ನು ಪ್ರೋತ್ಸಾಹಿಸುವುದು ಇದರ ಪ್ರಮುಖ ಉದ್ದೇಶ.
- VVPAT ವ್ಯವಸ್ಥೆಯಲ್ಲಿ ಮತದಾರರು ತಾವು ತಮ್ಮ ಬೆಂಬಲಿತ ಅಭ್ಯರ್ಥಿಗೆ ಮತವನ್ನು ಚಲಾಯಿಸಿವುದನ್ನು ಮತದಾನದದ ಬಳಿಕ ಪ್ರಿಂಟ್ ಹಾಗುವ ಸ್ಲಿಪ್ ಮೂಲಕ ಖಾತರಿ ಮಾಡಿಕೊಳ್ಳಬಹುದು. ಈ ಸ್ಲಿಪ್ ನಲ್ಲಿ ಮತದಾರನು ಯಾರಿಗೆ ಮತಹಾಕಿದ್ದಾನೆ, ಅಭ್ಯರ್ಥಿ ಹೆಸರು ಮತ್ತು ಚಿನ್ಹೆ ಸಮೇತ ಕಾಣಬಹುದು. ಆದರೆ ಮತದಾರರನು ಈ ಸ್ಲಿಪ್ ಅನ್ನು ತನ್ನ ಬಳಿ ತೆಗೆದುಕೊಂಡು ಹೋಗುವ ಆಗಿಲ್ಲ.

- ಈ ನೂತನ ವ್ಯವಸ್ಥೆಯ ಮತದಾನದ ಯಂತ್ರವನ್ನು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮತ್ತು ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಜಂಟಿಯಾಗಿ ನಿರ್ಮಿಸಿದ್ದು, ಪ್ರತಿ ಯಂತ್ರದ ಬೆಲೆ ರೂ 12,000.
- ಈ ನೂತನ ವ್ಯವಸ್ಥೆಯ ಮೂಲಕ ಮತದಾರರಲ್ಲಿ ತಾವು ಹಾಕಿದ ಮತ ಬೆಂಬಲಿತ ಅಭ್ಯರ್ಥಿಗೆ ಬಿದ್ದಿದಿಯೋ ಇಲ್ಲವೋ ಎಂಬುದರ ಮೇಲಿನ ಗೊಂದಲವನ್ನು ನಿವಾರಿಸಲಿದೆ.

**ಪರಿಶಿಷ್ಟ ಪಂಗಡ ಜನರ ಸ್ಥಿತಿಗತಿ ಅರಿಯಲು ಸಮಿತಿ ರಚನೆ**

ದೇಶದಲ್ಲಿ ಮುಸ್ಲಿಂ ಬಾಂಧವರ ಜೀವನ ಮಟ್ಟವನ್ನು ತಿಳಿಯಲು ಸಚಾರ್ ಸಮಿತಿಯನ್ನು ರಚಿಸಿದ್ದ ಯುಪಿಎ ಸರ್ಕಾರ ಈಗ ಪರಿಶಿಷ್ಟ ಪಂಗಡ ಜನರ ಜೀವನಮಟ್ಟದ ಬಗ್ಗೆ ಸಂಪೂರ್ಣ ವರದಿಯನ್ನು ಸಲ್ಲಿಸುವ ಉದ್ದೇಶಕ್ಕಾಗಿ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಿದೆ. ಸಮಿತಿಯು ತನ್ನ ಶಿಫಾರಸ್ಸನ್ನು ಮುಂದಿನ ೯ ತಿಂಗಳೊಳಗೆ ಸಲ್ಲಿಸಲಿದೆ.

**ಸಮಿತಿಯ ಬಗ್ಗೆ**:

- ಸೋನಿಯಾ ಗಾಂಧಿ ಅಧ್ಯಕ್ಷತೆ ವಹಿಸಿರುವ "ರಾಷ್ಟ್ರೀಯ ಸಲಹಾ ಮಂಡಳಿ"ಯ ಸದಸ್ಯರಲ್ಲಿ ಒಬ್ಬರಾದ "ವರ್ಗೀಸ್ ಕ್ಸಕ್ಸ" ಅವರು ಈ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಸಮಿತಿಯು ಒಟ್ಟು ಒಂಬತ್ತು ಸದಸ್ಯರನ್ನು ಒಳಗೊಂಡಿದ್ದು, ಮುಂದಿನ ೯ ತಿಂಗಳಲ್ಲಿ ತನ್ನ ವರದಿಯನ್ನು ಸಲ್ಲಿಸಲಿದೆ.
- ದೇಶದಲ್ಲಿರುವ ಪರಿಶಿಷ್ಟ ಪಂಗಡ ಜನಾಂಗಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಶಿಕ್ಷಣ, ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಮತ್ತು ಆರೋಗ್ಯದ ಸ್ಥಿತಿಗತಿ, ಆದಾಯ ಮುಂತಾದ ವಿಷಯಗಳ ಬಗ್ಗೆ ಈ ಸಮಿತಿ ಅಧ್ಯಯನ ನಡೆಸಿ ವರದಿಯನ್ನು ಸಿದ್ದಪಡಿಸಲಿದೆ.
- ಸದ್ಯ ದೇಶದ ಪರಿಶಿಷ್ಟ ಜನಾಂಗದ ಶೇ 8.6 ರಷ್ಟು ಪ್ರಮಾಣ ಈಶಾನ್ಯ ರಾಜ್ಯಗಳಾದ ನಾಗಲ್ಯಾಂಡ್, ಮಿಜೋರಾಂ, ಮಣಿಪುರ, ಅರುಣಚಲ ಪ್ರದೇಶ ಹಾಗೂ ಜಾರ್ಖಂಡ್, ಮಧ್ಯಪ್ರದೇಶ ಮತ್ತು ಓಡಿಶಾಗಳಲ್ಲಿ ನೆಲೆಗೊಂಡಿದೆ.

**ವಿಶ್ವಬ್ಯಾಂಕ್ ನೆರವು ಆಧಾರಿತ "ರಾಷ್ಟ್ರೀಯ ಏಡ್ಸ್ ನಿಯಂತ್ರಣ ಯೋಜನೆ" ಜಾರಿ**

ವಿಶ್ವಬ್ಯಾಂಕ್ ಸಾಲ ನೆರವಿನ "ರಾಷ್ಟ್ರೀಯ ಏಡ್ಸ್ ನಿಯಂತ್ರಣ ಯೋಜನೆ"ಗೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಗುಲಾಂ ನಬೀ ಆಜಾದ್ ಅವರು ಚಾಲನೆ ನೀಡಿದರು. ದೇಶದಲ್ಲಿ ಏಡ್ಸ್ ಅನ್ನು ಸಂಪೂರ್ಣವಾಗಿ ನಿಯಂತ್ರಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವೆಂದು ಆಜಾದ್ ಇದೇ ವೇಳೆ ನುಡಿದರು.

ಯೋಜನೆ ಬಗ್ಗೆ:

- ರಾಷ್ಟ್ರದಲ್ಲಿ ಏಡ್ಸ್ ಅನ್ನು ಸಂಪೂರ್ಣವಾಗಿ ನಿಯಂತ್ರಿಸುವ ಉದ್ದೇಶದೊಂದಿಗೆ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯ ವೆಚ್ಚ ರೂ 2550 ಕೋಟಿ.

- ಮಹಿಳಾ ಲೈಂಗಿಕ ಕಾರ್ಯಕರ್ತೆಯರು, ಡ್ರಗ್ ಬಳಕೆದಾರರು ಮತ್ತು ಸಲಿಂಗ ಕಾಮಿಗಳಲ್ಲಿ ಹೆಚ್ಐವಿ/ಏಡ್ಸ್ ಸೋಂಕು ತಗಲುವುದು ಮತ್ತು ಹರಡದಂತೆ ನಿಯಂತ್ರಿಸುವುದು ಇದರ ಪ್ರಮುಖ ಗುರಿ.
- ಸಮುದಾಯದಲ್ಲಿ ಅರಿವು ಮೂಡಿಸುವ ಮೂಲಕ ನಡತೆಯಲ್ಲಿ ಬದಲಾವಣೆ ತಂದು ಗುರಿಯನ್ನು ತಲುಪುವ ಅಂಶವನ್ನು ಯೋಜನೆ ಹೊಂದಿದೆ.
- ಈ ಮಹತ್ವದ ಯೋಜನೆಯ ಅನುಷ್ಠಾನಕ್ಕೆ ವಿಶ್ವಬ್ಯಾಂಕ್ ರೂ 1275 ಕೋಟಿ ಬಡ್ಡಿ ರಹಿತ ಸಾಲವನ್ನು ನೀಡಲಿದೆ.

**"ಕಿಶ್ತ್ವಾರ್" ಕೋಮು ಗಲಭೆ ಸಮಿತಿ ರಚಿಸಿದ ಜಮ್ಮು ಮತ್ತು ಕಾಶ್ಮೀರ**

ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಕೋಮು ಗಲಭೆಯ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಜಮ್ಮು ಮತ್ತು ಕಾಶ್ಮೀರ ಸರ್ಕಾರ ಏಕ ಸದಸ್ಯ ಸಮಿತಿಯನ್ನು ರಚಿಸಿದೆ. ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್ ನ ನಿವೃತ್ತ ಮುಖ್ಯನ್ಯಾಯಮೂರ್ತಿ ಆರ್.ಸಿ.ಗಾಂಧಿ ಈ ಸಮಿತಿಯ ನೇತೃತ್ವವನ್ನು ವಹಿಸಿಕೊಂಡಿದ್ದಾರೆ.

- ಆಗಸ್ಟ್ 9, 2013 ರಂದು ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯಲ್ಲಿ ನಡೆದ ಕೋಮು ಗಲಭೆ ಇಡೀ ದೇಶದ ಗಮನ ಸೆಳೆದಿತ್ತು. ಗಲಭೆಯಲ್ಲಿ ಮೂರು ಜನರು ದುರ್ಮರಣ ಹೊಂದಿದರಲ್ಲದೇ ಅನೇಕ ಜನರು ಗಾಯಗೊಂಡಿದ್ದರು.
- ಜಮ್ಮು ಮತ್ತು ಕಾಶ್ಮೀರ ವಿಚಾರಣ ಕಾಯಿದೆ -1962 ರ ಸೆಕ್ಷನ್ 3 ರ ಅಡಿಯಲ್ಲಿ ಈ ಸಮಿತಿಯನ್ನು ರಚಿಸಲಾಗಿದೆ. ಕೋಮು ಗಲಭೆಗೆ ಪ್ರೇರಣೆಯ ಹಿನ್ನಲೆ ಮತ್ತು ಗಲಭೆಯಿಂದಾದ ನಷ್ಟ, ಹಾನಿಯ ಬಗ್ಗೆ ಸಮಿತಿ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸೂಚಿಸಲಾಗಿದೆ.
- ಸಮಿತಿಯು ಮುಂದಿನ ಒಂದು ತಿಂಗಳೊಳಗೆ ತನ್ನ ವರದಿಯನ್ನು ಸಲ್ಲಿಸಲಿದೆ.

**ರಾಜಸ್ತಾನದಲ್ಲಿ ವಿಶ್ವದ ಅತಿ ದೊಡ್ಡ ಸೋಲಾರ್ ಪಾರ್ಕ್ ಸ್ಥಾಪನೆಗೆ ಶಂಕು ಸ್ಥಾಪನೆ**

ಜಗತ್ತಿನಲ್ಲೇ ಅತಿ ದೊಡ್ಡದಾದ ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ರಾಜಸ್ತಾನದ ಜೋದ್ ಪುರ ಜಿಲ್ಲೆಯ ಭಾದ್ಲದಲ್ಲಿ ಇತ್ತೀಚೆಗೆ ಶಂಕು ಸ್ಥಾಪನೆ ನೆರವೇರಿಸಲಾಯಿತು. ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಫಾರೂಕ್ ಅಬ್ದುಲ್ಲಾ ಅವರು ಶಂಕು ಸ್ಥಾಪನೆಯನ್ನು ನೆರವೇರಿಸಿದರು.

- 3000 ಮೆಗಾ ವ್ಯಾಟ್ ಸಾಮರ್ಥ್ಯದ ಸೋಲಾರ್ ಪಾರ್ಕ್ ಅನ್ನು ಹಂತ ಹಂತವಾಗಿ ನಿರ್ಮಿಸಲಾಗುವುದು. ಮೊದಲ ಹಂತದಲ್ಲಿ 1000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಇದು ಹೊಂದಿದೆ.
- ಈ ಯೋಜನೆಯು 10000 ಹೆಕ್ಟೇರ್ ವಿಸ್ತೀರ್ಣದಲ್ಲಿ ನಿರ್ಮಿಸಲಾಗುವುದು. ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಇದಕ್ಕಾಗಿ 3000 ಕೋಟಿ ಸಾಲದ ನೆರವನ್ನು ನೀಡಲಿದೆ.

- ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ಬೇಕಾಗುವ ತಂತ್ರಜ್ಞಾನದ ನೆರವು ನೀಡಲು ರಾಜಸ್ತಾನ ಮತ್ತು ಕ್ಲಿಂಟನ್ ಫೌಂಡೇಶನ್ ಒಪ್ಪಂದ ಮಾಡಿಕೊಂಡಿವೆ. ಕ್ಲಿಂಟನ್ ಫೌಂಡೇಶನ್ ಸಹಾಯದೊಂದಿಗೆ ಜೈಸಲ್ಮೇರ್, ಬರ್ಮರ್ ಮತ್ತು ಬಿಕನೇರ್ ಜಿಲ್ಲೆಗಳಲ್ಲಿ ಮುಂದಿನ ದಿನಗಳಲ್ಲಿ ಸೋಲಾರ್ ಘಟಕಗಳನ್ನು ನಿರ್ಮಿಸಲಾಗುವುದು.

**ರಾಷ್ಟ್ರೀಯ ಕೌಶಲ್ಯ ಪ್ರಮಾಣೀಕರಣ ಮತ್ತು ವಿತ್ತೀಯ ಪ್ರತಿಫಲ ಯೋಜನೆಗೆ ಚಾಲನೆ**

ಕೇಂದ್ರ ವಿತ್ತ ಸಚಿವ ಪಿ.ಚಿದಂಬರಂ ಅವರು ರಾಷ್ಟ್ರೀಯ ಕೌಶಲ್ಯ ಪ್ರಮಾಣೀಕರಣ ಮತ್ತು ವಿತ್ತಿಯ ಪ್ರತಿಫಲ (National Skill Certification and Monetary Reward) ಯೋಜನೆಗೆ ನವದೆಹಲಿಯಲ್ಲಿ ಚಾಲನೆ ನೀಡಿದರು. ಕೌಶಲ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ದೇಶದ ಮೊದಲ ವಿನೂತನ ಯೋಜನೆ ಇದಾಗಿದ್ದು, 2013-14 ನೇ ಸಾಲಿನ ಬಜೆಟ್ ನಲ್ಲಿ ಈ ಯೋಜನೆಯ ಬಗ್ಗೆ ಪ್ರಸ್ತಾಪಿಸಲಾಗಿತ್ತು.

**ಯೋಜನೆ ಬಗ್ಗೆ:**

- ಸ್ಟಾರ್ (Standard Training Assessment and Reward) ಎಂಬ ಬ್ರ್ಯಾಂಡ್ ಹೆಸರು ಹೊಂದಿರುವ ಈ ಯೋಜನೆಯು ದೇಶದ ಮಿಲಿಯನ್ ಯುವಕರಿಗೆ ಉತ್ತಮ ರೀತಿಯಲ್ಲಿ ನೆರವಾಗಲಿದೆ. ಯುವ ಜನತೆಯ ಕೌಶಲ್ಯ ವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಗೆ ಚಾಲನೆ ನೀಡಲಾಗಿದ್ದು, ಕೌಶಲ್ಯ ವೃದ್ಧಿಯನ್ನು ಬಯಸುವವರಿಗೆ ಹಣಕಾಸಿನ ನೆರವನ್ನು ಈ ಯೋಜನೆಯಡಿ ನೀಡಲಾಗುವುದು.
- ರಾಷ್ಟ್ರೀಯ ಕೌಶಲ್ಯ ಅಭಿಯಾನಕ್ಕೆ ಪೂರಕವಾಗಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಯುವಜನತೆಗೆ ಅಗತ್ಯ ಕೌಶಲ್ಯ ತರಬೇತಿಯನ್ನು ನೀಡಿ ನಿರುದ್ಯೋಗವನ್ನು ಕಡಿಮೆಗೊಳಿಸುವುದಾಗಿದೆ.
- ರಾಷ್ಟ್ರೀಯ ಕೌಶಲ್ಯ ಅಭಿಯಾನದಡಿ 2022 ರ ವೇಳೆಗೆ ಸುಮಾರು 500 ಮಿಲಿಯನ್ ಉದ್ಯೋಗವನ್ನು ಸೃಷ್ಟಿಸುವ ಗುರಿಯನ್ನು ಭಾರತ ಹೊಂದಿದೆ.
- ಸ್ಟಾರ್ ಯೋಜನೆಯನ್ನು ರೂ 1000 ಕೋಟಿ ವೆಚ್ಚದಲ್ಲಿ ಹಣಕಾಸು ಸಚಿವಾಲಯ ಅನುಷ್ಠಾನಗೊಳಿಸಲಿದ್ದು, ಇದರಿಂದ 1 ಮಿಲಿಯನ್ ಜನರಿಗೆ ಅನುಕೂಲವಾಗಲಿದೆ.

**"ತೆರಿಗೆ ಆಡಳಿತ ಸುಧಾರಣೆ ಸಮಿತಿ (Tax Administration Reforms Committee)" ರಚನೆ**

ದೇಶದ ತೆರಿಗೆ ವ್ಯವಸ್ಥೆಯಲ್ಲಿ ಮತ್ತಷ್ಟು ಸುಧಾರಣೆ ತರುವ ಸಲುವಾಗಿ ಕೇಂದ್ರ ಸರ್ಕಾರ ತೆರಿಗೆ ಆಡಳಿತ ಸುಧಾರಣೆ ಸಮಿತಿಯನ್ನು ರಚಿಸಿದೆ. ವಿತ್ತ ಸಚಿವರ ಸಲಹೆಗಾರರಾಗಿರುವ ಪಾರ್ಥಸಾರಥಿ ಶೋಮ್ ಅವರು ಈ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲಿದ್ದಾರೆ.

- ತೆರಿಗೆ ನಿಯಮ, ತೆರಿಗೆ ನೀತಿ ಮತ್ತು ತೆರಿಗೆ ಸಂಬಂಧಿತ ಕಾನೂನು ಚೌಕಟ್ಟನ್ನು ಬಲಪಡಿಸುವ ಸಲುವಾಗಿ ಈ ಸಮಿತಿಯನ್ನು ರಚಿಸಲಾಗಿದೆ. ಸಮಿತಿಗೆ ತನ್ನ ಶಿಫಾರಸ್ಸು ಸಲ್ಲಿಸಲು 19 ತಿಂಗಳ ಕಾಲವಕಾಶ ನೀಡಲಾಗಿದೆ.
- 2013-14 ನೇ ಸಾಲಿನ ಕೇಂದ್ರ ಬಜೆಟ್ ನಲ್ಲಿ ಪಿ.ಚಿದಬರಂ ಈ ಸಮಿತಿ ರಚನೆಯ ಬಗ್ಗೆ ಮಂಡಿಸಿದ್ದರು.
- ವೈ.ಜಿ.ಪರಂಡೆ, ಸುನೀತಾ ಕೈಲಾ ಈ ಸಮಿತಿಯ ಪೂರ್ಣ ಸದಸ್ಯರಾದರೆ, ಎಂ.ಕೆ.ಜುಸ್ತಿ, ಎಸ್.ಎಸ್.ಎನ್ ಮೂರ್ತಿ, ಎಂ, ಆರ್ ದಿವಾಕರ್ ಮತ್ತು ಎಸ್, ಮಹಾಲಿಗಂ ಈ ಸಮಿತಿಯ ಅರೆಕಾಲಿಕ ಸದಸ್ಯರಾಗಿದ್ದಾರೆ.

**ಸಮಿತಿಯ ಕಾರ್ಯವೇನು?**

- ಸಮಿತಿಯು ಹಾಲಿ ಜಾರಿಯಲ್ಲಿರುವ ತೆರಿಗೆ ವ್ಯವಸ್ಥೆಯ ಬಗ್ಗೆ ವಿಮರ್ಶಿಸಲಿದ್ದು, ತೆರಿಗೆ ಸುಧಾರಣೆ ಬಗ್ಗೆ ಅಗತ್ಯವಿರುವ ಕ್ರಮಗಳನ್ನು ಶಿಫಾರಸ್ಸು ಮಾಡಲಿದೆ.
- ತೆರಿಗೆ ಇಲಾಖೆಯಲ್ಲಿ ಆಡಳಿತ ಸುಧಾರಣೆ, ತೆರಿಗೆ ಪಾವತಿದಾರರಿಗೆ ಕುಂದು ಕೊರತೆ ವಿಚಾರಣೆ ಬಗ್ಗೆಯೂ ಅಧ್ಯಯನ ನಡೆಸಲಿದೆ.
- ತೆರಿಗೆ ವ್ಯವಸ್ಥೆಯಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಬಳಕೆ, ಭಾರತಕ್ಕೆ ಅನುಗುಣವಾದ ತೆರಿಗ ವ್ಯವಸ್ಥೆ ಮುಂತಾದವುಗಳ ಬಗ್ಗೆ ಶಿಫಾರಸ್ಸು ಮಾಡಲಿದೆ.

**<u>ಏಕಕಾಲದಲ್ಲಿ ಎರಡು ಪದವಿ ಪಡೆಯಲು ವಿಶ್ವವಿದ್ಯಾಲಯ ಅನುದಾನ ಸಮಿತಿ (ಯುಜಿಸಿ) ಒಪ್ಪಿಗೆ</u>**

ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಯೊಂದಕ್ಕೆ ವಿಶ್ವವಿದ್ಯಾಲಯ ಅನುದಾನ ಸಮಿತಿ (ಯುಜಿಸಿ) ಒಪ್ಪಿಗೆ ನೀಡಿದೆ. ಇದೀಗ ವಿದ್ಯಾರ್ಥಿಯೊಬ್ಬ ಒಂದು ಡಿಗ್ರಿ ಪಡೆಯುವ ವೇಳೆಯಲ್ಲಿಯೇ ದೂರಶಿಕ್ಷಣದ ಮೂಲಕ ಮತ್ತೊಂದು ಪದವಿ ಪಡೆಯಲು ಸಾಧ್ಯವಿದೆ. ಇದನ್ನು ವಿದ್ಯಾರ್ಥಿ ತಾನು ಈಗ ಓದುತ್ತಿರುವ ಸಂಸ್ಥೆಯಿಂದಲೇ ಅಥವಾ ಬೇರೆ ಮುಕ್ತ ವಿವಿಯ ಮೂಲಕ ಪಡೆದುಕೊಳ್ಳಬಹುದು. ಯುಜಿಸಿ ಈ ಕ್ರಮ ತೆಗೆದುಕೊಳ್ಳಲು ನಿರ್ಧರಿಸಿದ್ದು ಜು.31ರಂದು ನಡೆದ ಸಭೆಯಲ್ಲಿ. ತನ್ನದೇ ಉನ್ನತ ಸಮಿತಿ ಈ ನಿಟ್ಟಿನಲ್ಲಿ ಮಾಡಿದ್ದ ಶಿಫಾರಸಿಗೆ ಅದು ಅಂದು ಒಪ್ಪಿಗೆ ನೀಡಿದೆ.

**ವಿದ್ಯಾರ್ಥಿಗಳಿಗೇನು ಲಾಭ:**

- ವಿದ್ಯಾರ್ಥಿ ಇದೀಗ ತನ್ನ ಆಸಕ್ತಿಯ ಯಾವುದೇ ಮತ್ತೊಂದು ಡಿಗ್ರಿಯನ್ನು ಒಂದು ಪೂರ್ಣ ಡಿಗ್ರಿಯ ವೇಳೆಯೇ ಪಡೆದುಕೊಳ್ಳಬಹುದು. ಪದವಿಯ ವೇಳೆ ಸ್ನಾತಕೋತ್ತರ ಪದವಿಯನ್ನೂ ಪಡೆಯಬಹುದು.

**ಯಾರ ಶಿಫಾರಸು?:**

ಯುಜಿಸಿ ತಜ್ಞರ ಸಮಿತಿ ಅಧ್ಯಕ್ಷ ಡಾ. ಫರಾvನ್ ಖಮರ್ ಈ ಶಿಫಾರಸನ್ನು ಮಾಡಿದ್ದಾರೆ. ಶೈಕ್ಷಣಿಕ ವ್ಯವಸ್ಥೆಯಲ್ಲಿ ಪರಿಸ್ಥಿತಿ ಬದಲಿಸಿ, ಮಾರ್ಗದರ್ಶಿ ಸೂತ್ರಗಳನ್ನು ಬದಲಾವಣೆಗೆ ತೆರೆದುಕೊಂಡಿರುವಂತೆ ರೂಪಿಸುವ ಉದ್ದೇಶ ಹೊಂದಲಾಗಿದೆ.

**ಹಿಂದೆ ಏನಿತ್ತು?:**

ಇದುವರೆಗೆ ಭಾರತದಲ್ಲಿ ಯಾವುದೇ ವಿದ್ಯಾರ್ಥಿ ಏಕಕಾಲಕ್ಕೆ ಯಾವುದೇ ಮತ್ತೊಂದು ಡಿಗ್ರಿ ಪಡೆದುಕೊಳ್ಳಲು ಸಾಧ್ಯವಿಲ್ಲ. ಕಾರಣ ವಿದ್ಯಾರ್ಥಿ ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ಸೇರಿಕೊಳ್ಳಬೇಕಾದರೆ ಮೂಲ ವಲಸೆ ಪ್ರಮಾಣಪತ್ರ ಅಗತ್ಯವಾಗಿದೆ.

**ರಾಷ್ಟ್ರಗೀತೆ 'ಜನ ಗಣ ಮನ' ದ ಸಂಕ್ಷಿಪ್ತ ಇತಿಹಾಸ**

ವಂದೇ ಮಾತರಂ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರಾಭಿಮಾನದ ಕಿಚ್ಚು ಹೊತ್ತಿಸಿ ಮಿಂಚಿನ ಸಂಚಲನ ಮೂಡಿಸಿದ ರಾಷ್ಟ್ರೀಯ ಮಹಾಮಂತ್ರ. ಈ ಗೀತೆಯನ್ನು ರಚಿಸಿದ್ದು ಖ್ಯಾತ ಕಾದಂಬರಿಕಾರ ಪಶ್ಚಿಮ ಬಂಗಾಳದ ಬಂಕಿಮಚಂದ್ರ ಚಟ್ಟೋಪಾಧ್ಯಾಯ. ಇದು ಸ್ವಾತಂತ್ರ್ಯ ಹೋರಾಟಗಾರರ ರಣಮಂತ್ರ, ರಾಷ್ಟ್ರದ ಒಗ್ಗಟ್ಟಿನ ಮಹಾಮಂತ್ರ.1923ರಲ್ಲಿ ಆಂಧ್ರಪ್ರದೇಶದ ಕಾಕಿನಾಡದಲ್ಲಿ ಜರುಗಿದ ರಾಷ್ಟ್ರೀಯ ಕಾಂಗ್ರೆಸ್ ಮಹಾ ಅಧಿವೇಶನದಲ್ಲಿ ವಂದೇ ಮಾತರಂ ಗೀತೆ ಹಾಡಲು ಮಹಾರಾಷ್ಟ್ರದಿಂದ ಪಂಡಿತ ವಿಷ್ಣು ದಿಗಂಬರ ಪುಲಸ್ಕರ್ ಅವರನ್ನು ಆಹ್ವಾನಿಸಲಾಗಿತ್ತು. ಆ ಗೀತೆಗೆ ರಾಗ ಸಂಯೋಜನೆ ಮಾಡಿದ್ದು ಜಾದುನಾಥ ಭಟ್ಟಾಚಾರ್ಯ.

**ಹಿನ್ನೆಲೆ:**

1870ರ ದಶಕದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ 'ಗಾಡ್ ಸೇವ್ ದಿ ಕಿಂಗ್' ಎಂಬ ಹಾಡನ್ನು ಹಾಡುವುದು ಕಡ್ಡಾಯವಾಗಿತ್ತು. ಈ ಹಾಡಿಗೆ ಸೆಡ್ಡು ಹೊಡೆದು ಬಂಕಿಮಚಂದ್ರರು ವಂದೇ ಮಾತರಂ ರಚಿಸಿದರು. 'ಆನಂದ ಮಠ' ಕಾದಂಬರಿಯಲ್ಲಿ ಈ ಗೀತೆ ಸೇರಿಸಲಾಗಿದೆ. ಅಲ್ಲದೇ 1907ರಲ್ಲಿ ಭಾರತದ ಪ್ರಪ್ರಥಮ ಧ್ವಜ ವಿನ್ಯಾಸವಾದಾಗ ಆ ಧ್ವಜದಲ್ಲಿ ವಂದೇ ಮಾತರಂ ಎಂದೇ ಬರೆಯಲಾಗಿತ್ತು. ವಂದೇ ಮಾತರಂ ಎಂದರೆ 'ತಾಯಿ ವಂದಿಸುವೆ' ಎಂದರ್ಥ. 1907ರಲ್ಲಿ ಮೇಡಂ ಕಾಮಾ ಅವರು ಫ್ರಾನ್ಸ್, ಜರ್ಮನಿಯಲ್ಲಿ ಈ ಧ್ವಜ ಹಾರಿಸಿದ್ದರು. 1919ರಲ್ಲಿ ಜಲಿಯನ್ ವಾಲಾಬಾಗ್ ಶಿಲಾನ್ಯಾಸದ ಮೇಲೂ ವಂದೇ ಮಾತರಂ ಎಂದು ಕೆತ್ತನೆ ಮಾಡಲಾಗಿದೆ. 2003ರಲ್ಲಿ ಪ್ರಪಂಚದ 10ಕ್ಕೂ ಹೆಚ್ಚಿನ ಶ್ರೇಷ್ಠ ಹಾಗೂ ಜನಪ್ರಿಯ ಗೀತೆಗಳ ಅಯ್ಕೆಗೆ ನಡೆದ ಸಮೀಕ್ಷೆಯಲ್ಲಿ ವಂದೇ ಮಾತರಂ ಎರಡನೆಯ ಅತ್ಯುತ್ತಮ ಹಾಗೂ ಜನಪ್ರಿಯ ಗೀತೆ ಎಂದು ಆಯ್ಕೆಯಾಗಿರುವುದು ಭಾರತೀಯರಿಗೆ ಹೆಮ್ಮೆಯ ಸಂಗತಿ.

**ರಾಷ್ಟ್ರಗೀತೆ ಉಗಮ**

ಪ್ರಸ್ತುತ ಇರುವ ರಾಷ್ಟ್ರಗೀತೆ ಜನ-ಗಣ-ಮನ ರಚಿಸಿದ್ದು ರವೀಂದ್ರನಾಥ ಟಾಗೋರರು. ಅವರೇ ರಚಿಸಿದ 'ಅಮೋರ ಸೋನಾರ ಬಾಂಗ್ಲಾ' ಎಂಬ ಗೀತೆ ಇಂದು ಬಾಂಗ್ಲಾದೇಶದ ರಾಷ್ಟ್ರಗೀತೆಯಾಗಿದೆ. ಎಲ್ಲ ಗಣ್ಯರೂ ಸಮ್ಮತಿ ಸೂಚಿಸಿದ ಮೇಲೆ ಜನ ಗಣ ಮನ ರಾಷ್ಟ್ರಗೀತೆಯಾಯಿತು. ಅತ್ಯಂತ ಶ್ರೇಷ್ಠ ಹಾಗೂ ಸುಂದರವಾಗಿ ಸಂಯೋಜನೆಗೊಂಡ ರಾಷ್ಟ್ರಗೀತೆ ಇದು. ಜಗತ್ತಿನ 5 ಶ್ರೇಷ್ಠ ರಾಷ್ಟ್ರಗೀತೆಗಳಲ್ಲಿ ಒಂದು ಎಂದು ಪ್ರಶಂಸಿಲ್ಪಟ್ಟಿದೆ. ಈ ರಾಷ್ಟ್ರಗೀತೆಯ ಸ್ವರ ಸಂಯೋಜಕ ರಾಮಸಿಂಗ ಠಾಕೂರ್, ಗೂರ್ಖಾ ರೈಫಲ್ಸ್ ನಲ್ಲಿ ಸೇವೆ ಸಲ್ಲಿಸಿ ನಂತರ ಸುಭಾಷಚಂದ್ರ ಭೋಸರ ಆಝಾದ್ ಹಿಂದ್ ಫೌಜ್ನ ಸಂಸ್ಥಾಪಕ ಸದಸ್ಯರಾಗಿದ್ದರು.

**ವಿಶೇಷತೆಗಳು:**

- ಜನ ಗಣ ಮನಕ್ಕೆ ಭಾರತ 'ಭಾಗ್ಯವಿದಾತಾ' ಎಂಬ ಹೆಸರಿತ್ತು.
- ಜನವರಿ 24, 1950 ರಂದು ಕೇಂದ್ರ ಸರ್ಕಾರ ಇದನ್ನು ರಾಷ್ಟ್ರಗೀತೆಯನ್ನಾಗಿ ಅಧಿಕೃತವಾಗಿ ಸ್ವೀಕರಿಸಿತು.
- ರಾಷ್ಟ್ರಗೀತೆ ಹಾಡಲು ಬೇಕಾದ ಅವಧಿ ಕೇವಲ 52 ಸೆಕೆಂಡುಗಳು. ಆದರೆ ಕೆಲವು ವಿಶಿಷ್ಟ ಹಾಗೂ ನಿಗದಿತ ಸಂದರ್ಭಗಳಲ್ಲಿ ಮಾತ್ರ ಈ ಗೀತೆಯನ್ನು ಸಂಕ್ಷಿಪ್ತಗೊಳಿಸಿ ಮೊದಲು ಹಾಗೂ ಕೊನೆಯ ಕೆಲವು ಸಾಲುಗಳನ್ನು 20 ಸೆಕೆಂಡುಗಳಲ್ಲಿ ಹಾಡಲು ಅವಕಾಶ ಕಲ್ಪಿಸಲಾಗಿದೆ.
- ರಾಷ್ಟ್ರಗೀತೆಯನ್ನು ಸಂಕ್ಷಿಪ್ತಗೊಳಿಸುವ ವಿಧಾನ ಯಾವುದೇ ರಾಷ್ಟ್ರದಲ್ಲಿಲ್ಲ. ಜನ ಗಣ ಮನವನ್ನು ಸಂಸ್ಕೃತ ಮತ್ತು ಬಂಗಾಲಿ ಮಿಶ್ರಿತ ಭಾಷೆಯಲ್ಲಿ ರಚಿಸಲಾಗಿದ್ದು,
- 1919ರಲ್ಲಿ ಈ ಗೀತೆಯನ್ನು ಟಾಗೋರ್ ಅವರು ಐರಿಷ್ ಕವಿ ಜೇಮ್ಸ್ ಎಸ್. ಕ್ಯೂಸಿನ್ಸ್ ನೆರವಿನೊಂದಿಗೆ ಇಂಗ್ಲಿಷ್ಗೆ ಅನುವಾದಿಸಿದರು. ಮಾರ್ಗರೇಟ್ ಕ್ಯೂಸಿನ್ಸ್ ಇಂಗ್ಲಿಷ್ ಗೀತೆಗೆ ರಾಗ ಸಂಯೋಜನೆ ಮಾಡಿದ್ದರು.
- ಜನ ಗಣ ಮನದ ಇಂಗ್ಲಿಷ್ ಅವತರಣಿಕೆ 'ಮಾರ್ನಿಂಗ್ ಸಾಂಗ್ ಆಫ್ ಇಂಡಿಯಾ' ಎಂದು ಪ್ರಸಿದ್ಧವಾಗಿತ್ತು.

**"ಸಾರೆ ಜಹಾಂ ಸೆ ಅಚ್ಛಾ"**

'ಸಾರೆ ಜಹಾಂ ಸೆ ಅಚ್ಛಾ' ಕವಿತೆಯನ್ನು ರಚಿಸಿದ್ದು ಸರ್ ಮಹ್ಮದ್ ಇಕ್ಬಾಲ್. ಅವರ ಮೂಲ ಹೆಸರು ರಾಮಚಂದ್ರ ಬಾರಾಯಾನ ಜೀ ದ್ವಿವೇದಿ. ಅವರು ಹುಟ್ಟಿದ್ದು ಸಿಯಾಲಕೋಟ್ನಲ್ಲಿ. ವಂದೇ ಮಾತರಂ ಗೀತೆಗಳು ಸ್ವಾತಂತ್ರ್ಯ ಪ್ರೇಮಿಗಳ ಸ್ಫೂರ್ತಿಯ ನೆಲೆಯಾಗಿದ್ದವು. ಈ ಕವಿ ಇಕ್ಬಾಲ್ ಭಾರತದ ಕಣ್ಮಣಿಯಾಗಿದ್ದ. ಆದರೆ, ಇಕ್ಬಾಲ್ ಅವರೇ ಮುಸ್ಲಿಮರಿಗಾಗಿ ಒಂದು ಪ್ರತ್ಯೇಕ ರಾಷ್ಟ್ರಬೇಕೆಂದು ಪಾಕಿಸ್ತಾನ ರಚನೆಗೆ ಬೀಜ ಬಿತ್ತಿದವರು. ಪಂಜಾಬ್, ಅಪಘಾನಿಸ್ತಾನ್, ಕಾಶ್ಮೀರ ಈ ಮೂರು ಪ್ರಾಂತ್ಯಗಳ ಮೊದಲಕ್ಷರಗಳನ್ನು ಎತ್ತಿಕೊಂಡು ಪಾಕ್ ಶಬ್ದ ನೀಡಿದವರು ಕವಿ ಇಕ್ಬಾಲ್. ಮುಂದೆ ಇದೇ ಮಹ್ಮದ್ ಇಕ್ಬಾಲರೇ 'ತರಾನಾ-ಎ-ಮಿಲಿ ಪಾಕಿಸ್ತಾನ' ರಾಷ್ಟ್ರಗೀತೆಯನ್ನು ಬರೆದರು.

**ವಿವಾಹ ನೋಂದಣಿಯನ್ನು ಕಡ್ಡಾಯಗೊಳಿಸುವ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಿದ ರಾಜ್ಯಸಭೆ**

ವಿವಾಹ ನೋಂದಣಿಯನ್ನು ಕಡ್ಡಾಯಗೊಳಿಸುವ `ಜನನ, ಮರಣ ನೋಂದಣಿ ಕಾಯ್ದೆ, 1969 ತಿದ್ದುಪಡಿ ಮಸೂದೆ'ಗೆ ರಾಜ್ಯಸಭೆ ಅಂಗೀಕಾರ ನೀಡಿದೆ. ಎಲ್ಲ ಧರ್ಮ, ಜಾತಿಗಳಲ್ಲಿ ನಡೆಯುವ ವಿವಾಹಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸುವ ಉದ್ದೇಶದಿಂದ ಈ ಮಸೂದೆಯನ್ನು ರೂಪಿಸಲಾಗಿದೆ. ಹಾಗಂತ ಇದುವರೆಗೆ ನೋಂದಣಿಯಾಗದ ವಿವಾಹಗಳೆಲ್ಲ ಕಾನೂನುಬಾಹಿರವಲ್ಲ ಎಂದು ಕಾನೂನು ಸಚಿವ ಕಪಿಲ್ ಸಿಬಲ್ ಸ್ಪಷ್ಟಪಡಿಸಿದರು. `ಮದುವೆಯ ನಂತರ ದಂಪತಿ ವಿವಾಹ ನೋಂದಣಿ ಮಾಡಿಸಿಕೊಂಡರೆ ಒಳ್ಳೆಯದು. ಅದರಿಂದ ಸಾಕಷ್ಟು ಲಾಭ ಇವೆ. ಹಾಗಂತ ಕಡ್ಡಾಯ ನೋಂದಣಿ ಮಾಡಿಸಿಕೊಳ್ಳಲೇಬೇಕು ಎಂದು ಒತ್ತಡ ಹೇರಲಾಗದು. ನೋಂದಣಿಯಾಗದಿದ್ದರೆ ಮುಂದಿನ ಪರಿಣಾಮಗಳನ್ನು ಅವರೇ ಎದುರಿಸಬೇಕಾಗುತ್ತದೆ' ಎಂದು ಹೇಳಿದ್ದಾರೆ.

**ಹೊಸ ದಾಖಲೆ ಬರೆದ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್**

ನೆಹರೂ ಮತ್ತು ಗಾಂಧಿ ಕುಟುಂಬವನ್ನು ಹೊರತು ಪಡಿಸಿದಂತೆ ಕೆಂಪುಕೋಟೆಯ ಮೇಲೆ ಗುರುವಾರ ಹತ್ತನೇ ಬಾರಿಗೆ ತ್ರಿವರ್ಣ ಧ್ವಜ ಹಾರಿಸಿದ ಮೊದಲ ಪ್ರಧಾನಿ ಎಂಬ ಹೆಗ್ಗಳಿಕೆಗೆ ಮನಮೋಹನ್ ಸಿಂಗ್ ಪಾತ್ರರಾಗಿದ್ದಾರೆ.

**ಪ್ರಮುಖಾಂಶಗಳು:**

- ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಮತ್ತು ಅವರ ಪುತ್ರಿ ಇಂದಿರಾ ಗಾಂಧಿ ಮಾತ್ರ ಆಗಸ್ಟ್ 15ರಂದು ಕೆಂಪುಕೋಟೆಯ ಮೇಲೆ ಹತ್ತಕ್ಕೂ ಹೆಚ್ಚು ಬಾರಿ ಧ್ವಜಾರೋಹಣ ಮಾಡಿದ್ದರು.
- ಅವರನ್ನು ಹೊರತು ಪಡಿಸಿದಂತೆ ಈವರೆಗೂ ಯಾವ ಪ್ರಧಾನಿಯೂ ಇಷ್ಟೊಂದು ಬಾರಿ ತ್ರಿವರ್ಣ ಧ್ವಜ ಅರಳಿಸಿದ ಹೆಗ್ಗಳಿಕೆ ಹೊಂದಿಲ್ಲ.
- ನೆಹರೂ ಅವರು ನಿರಂತರವಾಗಿ 17 ಮತ್ತು ಇಂದಿರಾ ಗಾಂಧಿ 16 ಬಾರಿ ಧ್ವಜಾರೋಹಣ ನೆರವೇರಿಸಿದ್ದರು.
- ಆ ಪೈಕಿ ಇಂದಿರಾ 1966ರಿಂದ 77ರ ಅವಧಿಯಲ್ಲಿ ನಿರಂತರವಾಗಿ 11 ಬಾರಿ ಈ ಅವಕಾಶ ಪಡೆದಿದ್ದರು.
- ಇದೀಗ ಮನಮೋಹನ್ ಸಿಂಗ್ ಅವರು ಈ ಪ್ರತಿಷ್ಠಿತರ ಸಾಲಿಗೆ ಸೇರಿದ್ದಾರೆ.
- 2009ರಲ್ಲಿ ಎರಡನೇ ಅವಧಿಗೆ ಪ್ರಧಾನಿಯಾಗಿ ಆಯ್ಕೆಯಾದ ಸಿಂಗ್ ಅತ್ಯಂತ ದೀರ್ಘ ಅವಧಿಗೆ ಪ್ರಧಾನಿ ಹುದ್ದೆಯನ್ನು ಅಲಂಕರಿಸಿದ ಮೂರನೇ ವ್ಯಕ್ತಿ ಎಂಬ ಪ್ರಶಂಸೆಗೂ ಪಾತ್ರರಾಗಿದ್ದಾರೆ.

**ದಾಖಲೆ ಅವಧಿ:**

- ಸ್ವತಂತ್ರ ಭಾರತದ ಪ್ರಧಾನಿಯಾಗಿ ಅತ್ಯಂತ ದೀರ್ಘ ಕಾಲ ಆಡಳಿತ ನಡೆಸಿದ ದಾಖಲೆ ಕ್ರಮವಾಗಿ ನೆಹರೂ ಮತ್ತು ಇಂದಿರಾ ಹೆಸರಿನಲ್ಲಿದೆ.
- 1998ರಿಂದ 2003ರ ಅವಧಿಯಲ್ಲಿ ಪ್ರಧಾನಿಯಾಗಿದ್‌ದ ಅಟಲ್ ಬಿಹಾರಿ ವಾಜಪೇಯಿ ಆರು ಬಾರಿ ನಿರಂತರವಾಗಿ ಧ್ವಜಾರೋಹಣ ಮಾಡಿದ್ದರು.
- 2004ರ ಮೇ ತಿಂಗಳಲ್ಲಿ ಮೊದಲ ಬಾರಿಗೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದ ಸಿಂಗ್ ನಾಲ್ಕು ತಿಂಗಳ ನಂತರ ಪ್ರಥಮ ಬಾರಿಗೆ ಕೆಂಪುಕೊಟೆಯ ಮೇಲೆ `ತಿರಂಗಾ' ಬಾವುಟವನ್ನು ಅರಳಿಸಿದ್ದರು.

17ನೇ ಶತಮಾನದ ಮೊಘಲ್ ಸಾಮ್ರಾಜ್ಯದ ಪ್ರತಿಷ್ಠಿತ ಸ್ಮಾರಕವಾಗಿರುವ ದೆಹಲಿಯ ಈ ಕೆಂಪುಕೊಟೆಯ ಮೇಲೆ 1947ನೇ ಆಗಸ್ಟ್ 15ರಂದು ನೆಹರೂ ಮೊತ್ತಮೊದಲ ಬಾರಿ ರಾಷ್ಟ್ರಧ್ವಜ ಹಾರಿಸಿ ಇತಿಹಾಸ ನಿರ್ಮಿಸಿದ್ದರು.

## ದೇಶದ ಶೇ. 67 ಗ್ರಾಮೀಣ ಪ್ರದೇಶದ ಕುಟುಂಬಗಳಿಗೆ ಶೌಚಾಲಯ ವ್ಯವಸ್ಥೆ ಇಲ್ಲ

ಶೌಚಾಲಯಗಳನ್ನು ನಿರ್ಮಿಸಲು ಸರ್ಕಾರ ಅನೇಕ ಜಾಗೃತಿ ಅಭಿಯಾನ ಕಾರ್ಯಕ್ರಮಗಳನ್ನು ಕೈಗೊಂಡಿರುವ ಹೊರತಾಗಿಯೂ ದೇಶದ ಶೇ.67ರಷ್ಟು ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಈಗಲೂ ಶೌಚಾಲಯ ವ್ಯವಸ್ಥೆ ಇಲ್ಲ ಎಂದು ಸರ್ಕಾರ ತಿಳಿಸಿದೆ.

**ಅಂಕಿ-ಅಂಶ:**

- ಗ್ರಾಮೀಣ ಭಾಗದಲ್ಲಿ ಶೌಚಾಲಯ ಹೊಂದಿರದೇ ಇರುವ ಮನೆಗಳ ಸಂಖ್ಯೆ 2001ರ ಜನಗಣತಿಯಲ್ಲಿ ಶೇ.78.1ರಷ್ಟಿತ್ತು. ಆದರೆ, 2011ರ ಜನಗಣತಿಯಲ್ಲಿ ಈ ಸಂಖ್ಯೆ ಶೇ.67.3ಕ್ಕೆ ಇಳಿದಿದೆ.
- ಜನಗಣತಿಯ ಅಂಕೆ ಸಂಖ್ಯೆಗಳ ಪ್ರಕಾರ, ಕೇರಳದಲ್ಲಿ ಶೌಚಾಲಯ ಹೊಂದಿರದೇ ಇರುವ ಮನೆಗಳ ಸಂಖ್ಯೆ ಅತ್ಯಂತ ಕಡಿಮೆ ಇದೆ. ಅಂದರೆ, ಶೇ.5. 59ರಷ್ಟು ಮನೆಗಳಿಗೆ ಮಾತ್ರ ಶೌಚಾಲಯ ಇಲ್ಲ.
- ಕೇಂದ್ರಾಡಳಿತ ಪ್ರದೇಶಗಳಲ್ಲಿ ಲಕ್ಷದ್ವೀಪದಲ್ಲಿ ಶೌಚಾಲಯ ಹೊಂದಿರದೇ ಇರುವ ಮನೆಗಳ ಸಂಖ್ಯೆ ಶೇ. 1.66ರಷ್ಟಿದೆ.
- ಶೌಚಾಲಯಗಳನ್ನು ಹೊಂದದೇ ಇರುವ ರಾಜ್ಯಗಳಲ್ಲಿ ಜಾರ್ಖಂಡ್ ಮೊದಲ ಸ್ಥಾನದಲ್ಲಿದ್ದು, ಇಲ್ಲಿ ಶೇ. 91.67 ರಷ್ಟು ಮನೆಗಳಲ್ಲಿ ಶೌಚಾಲಯವಿಲ್ಲ.
- ಈ ಪಟ್ಟಿಯಲ್ಲಿ ಮಧ್ಯಪ್ರದೇಶ 2ನೇ ಸ್ಥಾನದಲ್ಲಿದ್ದು, ಇಲ್ಲಿ ಶೌಚಾಲಯ ಹೊಂದಿರದ ಮನೆಗಳ ಸಂಖ್ಯೆ ಶೇ. 86.42ರಷ್ಟಿದೆ.
- ಈ ಸಂಖ್ಯೆ ಚತ್ತೀಸ್‌ಗಢದಲ್ಲಿ ಶೇ.85.15, ಒಡಿಶಾ ಶೇ.84.68, ಮತ್ತು ಬಿಹಾರದದಲ್ಲಿ ಶೇ.81.39ರಷ್ಟಿದೆ.

## ಆನ್ ಲೈನ್ ಮೂಲಕ ಮಾಹಿತಿ ಹಕ್ಕು ಅರ್ಜಿ ಸಲ್ಲಿಸಲು ಅವಕಾಶ: ಕೇಂದ್ರ ಸರ್ಕಾರ

ಕೇಂದ್ರ ಸರ್ಕಾರ ತನ್ನ ಇಲಾಖೆಗಳಿಗೆ ಸಂಬಂಧಿಸಿದ ಮಾಹಿತಿ ಹಕ್ಕು ಅರ್ಜಿಗಳನ್ನು ಜನತೆ ಆನ್‌ಲೈನ್ ಮೂಲಕವೂ ಸಲ್ಲಿಸುವಂತೆ ಅವಕಾಶ ಕಲ್ಪಿಸಿದೆ. ಈ ಸಂಬಂಧ ಕೇಂದ್ರ ಸಿಬ್ಬಂದಿ ಮತ್ತು ಕುಂದುಕೊರತೆ, ಪಿಂಚಣಿ ಇಲಾಖೆ ರಾಜ್ಯ ಸಚಿವ ವಿ.ನಾರಾಯಣ ಸ್ವಾಮಿ, ಆನ್‌ಲೈನ್ ಅರ್ಜಿಸಲ್ಲಿಸುವ www.rtionline.gov.in ವೆಬ್‌ಸೈಟ್ ಗೆ ಚಾಲನೆ ನೀಡಿದರು. ಕೇಂದ್ರದ ಒಟ್ಟು 37 ಇಲಾಖೆಗಳಿಗೆ ಈ ವೆಬ್‌ಸೈಟ್ ಮೂಲಕ ಮಾಹಿತಿ ಹಕ್ಕು ಅರ್ಜಿ ಸಲ್ಲಿಸಬಹುದಾಗಿದೆ.

**ಅರ್ಜಿ ಸಲ್ಲಿಕೆ ಹೇಗೆ?**

- ಅರ್ಜಿ ಸಲ್ಲಿಸುವವರು ವೆಬ್‌ಸೈಟ್ ತೆರೆದು, ಅದರಲ್ಲಿನ ಅರ್ಜಿ ನಮೂನೆಯನ್ನು ತುಂಬಬೇಕು.
- ನಂತರ, ಎಸ್‌ಬಿಐ ಇಂಟರ್ನೆಟ್ ಬ್ಯಾಂಕಿಂಗ್ ಮುಖಾಂತರ 10 ರೂ. ಪಾವತಿಸಬೇಕು. ಅಥವಾ ಕ್ರೆಡಿಟ್, ಡೆಬಿಟ್ ಕಾರ್ಡ್ ಬಳಕೆಗೂ ಅವಕಾಶವಿದೆ.
- ಸದ್ಯ ವೆಬ್‌ಸೈಟ್‌ನ ಅರ್ಜಿ ಮಾದರಿಯಲ್ಲಿ 500 ಪದಗಳ ವರೆಗೆ ಬರೆಯಲು ಮಾತ್ರ ಅವಕಾಶವಿದೆ. ಒಂದು ವೇಳೆ 500 ಪದಕ್ಕಿಂತ ಹೆಚ್ಚಿದ್ದಲ್ಲಿ, ಅದು ಅಟ್ಯಾಚ್‌ಮೆಂಟ್ ಆಗಿ ಅಪ್ಲೋಡ್ ಆಗಲಿದೆ.

- ಅಲ್ಲದೇ ಅರ್ಜಿ ಸಲ್ಲಿಸಿದ ಬಳಿಕ ಮೊಬೈಲ್ ಸಂದೇಶವೂ ಲಭ್ಯವಾಗಲಿದೆ. ಅರ್ಜಿ ಕುರಿತ ಹೆಚ್ಚಿನ ಮಾಹಿತಿಗೆ 011-24622461 ಕರೆ ಮಾಡಬಹುದಾಗಿದೆ.

**"ಆತ್ಮಹತ್ಯೆ" ಇನ್ನು ಮುಂದೆ ಅಪರಾಧ ವ್ಯಾಪ್ತಿಯಿಂದ ಹೊರಕ್ಕೆ: ಮಾನಸಿಕ ಆರೋಗ್ಯ ಮಸೂದೆ, 2013**

ಆತ್ಮಹತ್ಯೆಯನ್ನು 'ಅಪರಾಧ' ವ್ಯಾಪ್ತಿಯಿಂದ ಹೊರಕ್ಕೆ ಇಡುವ ಹೊಸ ಮಾನಸಿಕ ಆರೋಗ್ಯ ಮಸೂದೆ, 2013 ಅನ್ನು ರಾಜ್ಯಸಭೆಯಲ್ಲಿ ಮಂಡಿಸಲಾಗಿದೆ. ಅಪರಾಧ ಕಾನೂನಿನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರ ಇಂಥ ಸುಧಾರಣಾ ಕ್ರಮಕ್ಕೆ ಮುಂದಾಗಿದೆ. ಆತ್ಮಹತ್ಯೆ ಯತ್ನವನ್ನು 'ಅಪರಾಧ' ಎಂದು ಪರಿಗಣಿಸುವುದರ ಬದಲಾಗಿ, ಅವರನ್ನು ಮಾನಸಿಕ ರೋಗಿಗಳು ಎಂದು ಪರಿಗಣಿಸಲಾಗುತ್ತದೆ. ಅವರು ಉತ್ತಮ ಮಾನಸಿಕ ಚಿಕಿತ್ಸಾ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುವ 'ಹಕ್ಕ'ನ್ನು ಹೊಂದಿರುತ್ತಾರೆ ಎಂದಿದೆ.

**ಹಿನ್ನೆಲೆ:**

- ಸದ್ಯ ಭಾರತೀಯ ದಂಡ ಸಂಹಿತೆಯ ಸೆಕ್ಷನ್ ೩೦೯ರ ಪ್ರಕಾರ ಆತ್ಮಹತ್ಯೆ ಯತ್ನ ಕೂಡ ಅಕ್ಷಮ್ಯ ಅಪರಾಧ ಎಂದು ಪರಿಗಣಿಸಲಾಗುತ್ತದೆ.
- ಆದರೆ ಇದರಿಂದ ಆತ್ಮಹತ್ಯೆಗೆ ಯತ್ನಿಸುವ ವ್ಯಕ್ತಿಗಳನ್ನು ಸಂತೈಸುವ ಬದಲು ಅವರ ಮನಸ್ಸಿಗೆ ಮತ್ತಷ್ಟು ಘಾಸಿಗೊಳಿಸಲಾಗುತ್ತದೆ. ಹೀಗಾಗಿ ಆತ್ಮಹತ್ಯೆ ಯತ್ನವನ್ನು ಅಪರಾಧದ ವ್ಯಾಪ್ತಿಯಿಂದ ಹೊರಗಿಡಲಾಗಿದೆ.
- ಮಸೂದೆಯ ಸೆಕ್ಷನ್ 124ರ ಪ್ರಕಾರ 'ಆತ್ಮಹತ್ಯೆಗೆ ಯತ್ನಿಸಿದವರನ್ನು ಮಾನಸಿಕ ರೋಗಿಗಳು ಎಂದು ಪರಿಗಣಿಸಲಾಗುತ್ತದೆ'.
- ಕೇಂದ್ರ ಆರೋಗ್ಯ ಸಚಿವಾಲಯ ಈ ಮಸೂದೆಯನ್ನು ಮಂಡಿಸಿದ್ದು, ಇಂಥ ವ್ಯಕ್ತಿಗಳಿಗೆ ಸೂಕ್ತ ಚಿಕಿತ್ಸೆ ಕೊಡಿಸುವ ಬಗ್ಗೆಯೂ ಪ್ರಸ್ತಾಪಿಸಿದೆ.
- ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರ ಮಾನಸಿಕ ಆರೋಗ್ಯ ಕಾನೂನನ್ನು ಹಕ್ಕಿನ ವ್ಯಾಪ್ತಿಗೆ ತಂದಿರುವುದು ಕೂಡ ವಿಶೇಷವಾಗಿದೆ.
- ಈ ಮಸೂದೆಗೆ ಸಂಬಂಧಿಸಿದಂತೆ ಕಾನೂನು ಸಚಿವಾಲಯ ಪ್ರತ್ಯೇಕವಾಗಿ ತಿದ್ದುಪಡಿ ಮಸೂದೆ ಮಂಡಿಸಲಿದೆ. ಅಂತಿಮವಾಗಿ ಗೃಹ ಸಚಿವಾಲಯ ಕಾನೂನಾಗಿ ಪರಿವರ್ತಿಸುತ್ತದೆ. ಗೃಹ ಸಚಿವಾಲಯದ ಮೂಲಗಳ ಪ್ರಕಾರ, ಕಾನೂನು ಸಚಿವಾಲಯ ಕೂಡ ಇದಕ್ಕೆ ಸಮ್ಮತಿ ಸೂಚಿಸಿದೆ.

**ಮುಖ್ಯಾಂಶಗಳು :**

- ಅನಸ್ತೇಶಿಯಾ ಕೊಡದೇ ರೋಗಿಗಳಿಗೆ ಎಲೆಕ್ಟ್ರೋ ಥೆರಪಿ ಕೊಡುವಂತಿಲ್ಲ
- ಚಿಕಿತ್ಸೆ ನೆಪದಲ್ಲಿ ಸಂತಾನಹರಣ ಮಾಡುವುದು ನಿಷಿದ್ಧ

- ಚೈನ್ ಹಾಕಿ ಕಟ್ಟಿಹಾಕುವಂತಿಲ್ಲ - ತಲೆ ಬೋಳಿಸುವಂತಿಲ್ಲ
- ಅಕ್ರಮವಾಗಿ ಮಾನಸಿಕ ಆರೋಗ್ಯ ಚಿಕಿತ್ಸಾ ಕೇಂದ್ರ ನಡೆಸುವವರಿಗೆ 50 ಸಾವಿರದಿಂದ 5 ಲಕ್ಷದವರೆಗೆ ದಂಡ
- ಆತ್ಮಹತ್ಯೆಗೆ ಯತ್ನಿಸಿದವರನ್ನು ಮಾನಸಿಕ ರೋಗಿಗಳು ಎಂದು ಪರಿಗಣನೆ

**ಭಾರತದ ಯೋಜನಾ ಆಯೋಗದ "ಬಡತನ ರೇಖೆಯ" ವ್ಯಾಖ್ಯಾನ : ವರದಿ**

ಯೋಜನಾ ಆಯೋಗದ 'ಬಡತನ ರೇಖೆ ವ್ಯಾಖ್ಯಾನ' ವಿವಾದಕ್ಕೆ ಕಾರಣವಾದದ್ದು ಹಳೆಯ ಸಂಗತಿ. ಸದ್ಯ ಇಲ್ಲಿ ಗಮನಿಸಬೇಕಾದ ವಿಚಾರವೇನೆಂದರೆ 'ಬಡತನ ರೇಖೆ' ಎಂದರೇನು, ಯಾವ ರೀತಿ ಅದನ್ನು ನಿರ್ಧರಿಸಲಾಗುತ್ತದೆ? ಎಂಬುದರ ಕುರಿತಾಗಿದೆ.

**ಬಡತನ ರೇಖೆ ಎಂದರೇನು?**

ಬಡತನ ರೇಖೆ ಎಂದರೆ 'ಆದಾಯದ ಮೂಲ' (threshold income). ಈ ಮಿತಿಯಿಂದ ಕೆಳಗೆ ಜೀವಿಸುವವರನ್ನು 'ಬಡವರು' ಎಂದು ಪರಿಗಣಿಸಲಾಗುತ್ತದೆ. ಬೇರೆ ಬೇರೆ ದೇಶಗಳಲ್ಲಿ ಬಡತನ ರೇಖೆಯನ್ನು ನಿಗದಿಗೊಳಿಸಲು ಬೇರೆ ಬೇರೆ ಮಾನದಂಡಗಳನ್ನು ಬಳಸುತ್ತಾರೆ. ಅದಕ್ಕೆ ಆಯಾ ದೇಶಗಳ ಸಾಮಾಜಿಕ, ಆರ್ಥಿಕ ಮಾನದಂಡಗಳನ್ನು ಬಳಸಿಕೊಳ್ಳುತ್ತಾರೆ. ನಮ್ಮಲ್ಲಿ ವ್ಯವಸ್ಥೆ ಕೇಂದ್ರ ಯೋಜನಾ ಆಯೋಗ ದೇಶದಲ್ಲಿನ ಬಡತನ ಮಿತಿ ನಿಗದಿಗೊಳಿಸುತ್ತದೆ.

ಸಮೀಕ್ಷೆ ಹೇಗೆ?

ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ ನಿಗದಿಪಡಿಸಿದ ಬಳಕೆದಾರರ ವೆಚ್ಚದ ಮಾಪಕವನ್ನು ಆಧರಿಸಿ ನಮ್ಮ ದೇಶದಲ್ಲಿ ಬಡತನ ರೇಖೆಯನ್ನು ಅಳತೆ ಮಾಡುತ್ತಾರೆ. ದೇಶದಲ್ಲಿ ಬಡತನ ರೇಖೆ 1979ರಲ್ಲಿ ಅಧ್ಯಯನ ತಂಡವೊಂದು ಸಿದ್ಧಪಡಿಸಿದ ಮಾದರಿ ಸಮೀಕ್ಷೆಯಡಿ ಇದುವರೆಗೆ ಅಧ್ಯಯನ ನಡೆಸಲಾಗುತ್ತಿತ್ತು. 2011ರಲ್ಲಿ ಸುರೇಶ್ ತೆಂಡೂಲ್ಕರ್ ನೇತೃತ್ವದ ಸಮಿತಿ ಬಡತನ ರೇಖೆಯ ವ್ಯಾಖ್ಯೆಯನ್ನು ಬದಲಾಯಿಸಿತು. ಆಹಾರ, ವಿದ್ಯಾಭ್ಯಾಸ, ಆರೋಗ್ಯ, ವಿದ್ಯುತ್ ಮತ್ತು ಸಾರಿಗೆ ಕ್ಷೇತ್ರದಲ್ಲಿ ಪ್ರತಿ ತಿಂಗಳು ಆಗುವ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ನಿಗದಿ ಮಾಡಿತು.

- ಅದರ ಪ್ರಕಾರ ಪ್ರತಿ ದಿನ ರೂ.27.2/- ಅನ್ನು ವೆಚ್ಚ ಮಾಡಲು ಸಾಧ್ಯವಿಲ್ಲದ ಗ್ರಾಮೀಣ ಪ್ರದೇಶದ ವ್ಯಕ್ತಿ ಮತ್ತು ರೂ.33.3/- ವೆಚ್ಚ ಮಾಡಲು ಸಾಮರ್ಥ್ಯವಿಲ್ಲದ ನಗರ ಪ್ರದೇಶದ ವ್ಯಕ್ತಿ ಬಡತನ ರೇಖೆಗಿಂತ ಕೆಳಗಿರುವವರು ಎಂದು ನಿಗದಿ ಮಾಡಿತು.
- ಅಂದರೆ ಗ್ರಾಮೀಣ ಪ್ರದೇಶದಲ್ಲಿರುವ ಪ್ರತಿ ಕುಟುಂಬ ಪ್ರತಿ ತಿಂಗಳಿಗೆ ರೂ.4,080/- ಮತ್ತು ನಗರ ಪ್ರದೇಶದಲ್ಲಿರುವ ಪ್ರತಿ ಕುಟುಂಬ ರೂ.5,000/- ಕ್ಕಿಂತ ಕಡಿಮೆ ವೆಚ್ಚ ಮಾಡುತ್ತಿದ್ದರೆ ಅದು ಬಡತನ ರೇಖೆಗಿಂತ ಕೆಳಗಿದೆ ಎಂದು ವ್ಯಾಖ್ಯಾನಿಸಲಾಯಿತು.
- ಈ ಲೆಕ್ಕಾಚಾರಕ್ಕೆ ಎಲ್ಲೆಡೆಯಿಂದ ಟೀಕೆ ವ್ಯಕ್ತವಾದ ಕಾರಣ ಮುಂದಿನ ವರ್ಷ ಹೊಸ ವರದಿ ಸಿದ್ಧಪಡಿಸಲು ಆರ್‌ಬಿಐ ಮಾಜಿ ಅಧ್ಯಕ್ಷ ಸಿ.ರಂಗರಾಜನ್ ನೇತೃತ್ವದಲ್ಲಿ ಹೊಸ ಸಮಿತಿ ರಚನೆ ಆಗಿದೆ.

- ಬದಲಾದ ಕಾಲಘಟ್ಟದಲ್ಲಿ ಯಾವ ರೀತಿ ಬಡತನ ರೇಖೆಯನ್ನು ವ್ಯಾಖ್ಯಾನಿಸಬಹುದು ಎಂಬ ಬಗ್ಗೆ ಅಧ್ಯಯನ ನಡೆಸಿ ಮುಂದಿನ ವರ್ಷ ವರದಿ ಸಲ್ಲಿಸಲಿದೆ.

**ಹಿಂದೂ ಧರ್ಮದ ಬೃಹತ್ ವಿಶ್ವಕೋಶ ಅಮೆರಿಕಾದ ಕೊಲಂಬಿಯಾದಲ್ಲಿ ಲೋಕಾರ್ಪಣೆ**

ಜಗತ್ತಿನ ಮೂರನೇ ಅತಿದೊಡ್ಡ ಧರ್ಮ ಎಂಬ ಹೆಗ್ಗಳಿಕೆ ಹೊಂದಿರುವ ಹಿಂದು ಧರ್ಮದ ಬಗ್ಗೆ 25 ವರ್ಷಗಳ ಕಾಲ ನಿರಂತರ ಸಂಶೋಧನೆ ನಡೆಸಿ ಒಂದು ಸಾವಿರ ಪಂಡಿತರು ಸಿದ್ಧಪಡಿಸಿರುವ ಸಮಗ್ರ ವಿಶ್ವಕೋಶ ಅಮೆರಿಕದಲ್ಲಿ ಬಿಡುಗಡೆಗೊಳಿಸಲಾಯಿತು. ಹಿಂದೂ ಧರ್ಮದ ಕುರಿತ ಸಮಗ್ರ ಚಿತ್ರಣವನ್ನು ಈ ವಿಶ್ವಕೋಶ ನೀಡಲಿದ್ದು, ಸನಾತನ ಧರ್ಮ, ಭಾರತದ ಇತಿಹಾಸ, ನಾಗರಿಕತೆ, ಭಾಷೆಗಳು, ತತ್ವ, ಸಿದ್ಧಾಂತ, ಕಲೆ, ಶಿಲ್ಪಕಲೆ, ಸಂಗೀತ , ನೃತ್ಯ, ಔಷಧ, ವಿಜ್ಞಾನ, ಸಾಮಾಜಿಕ ವ್ಯವಸ್ಥೆ ಇತ್ಯಾದಿ ವಿಷಯಗಳ ಮಹತ್ವವನ್ನು ಜಗತ್ತಿಗೆ ಸಾರಿ ಹೇಳಲಿದೆ. ನೊಬೆಲ್ ಪ್ರಶಸ್ತಿ ವಿಜೇತ ಭಾರತೀಯ ಆರ್.ಕೆ. ಪಚೌರಿ, ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಅವರ ಉಪಸ್ಥಿತಿಯಲ್ಲಿ ದಕ್ಷಿಣ ಕರೋಲಿನಾ ವಿಶ್ವವಿದ್ಯಾಲಯದಲ್ಲಿ ನಡೆದ ಸಮಾರಂಭದಲ್ಲಿ ಈ ವಿಶ್ವಕೋಶ ಲೋಕಾರ್ಪಣೆಗೊಳಿಸಲಾಯಿತು.

**ವಿಶ್ವಕೋಶದಲ್ಲಿ ಏನಿದೆ?**

- 11 ಸಂಪುಟಗಳನ್ನು ಹೊಂದಿರುವ ಈ ವಿಶ್ವಕೋಶ ಹಿಂದು ಅಧ್ಯಾತ್ಮಿಕ ನಂಬಿಕೆಗಳು, ಆಚಾರ ಹಾಗೂ ವಿಚಾರಗಳನ್ನು ಹೊಂದಿರಲಿದೆ.
- ಇಂಗ್ಲಿಷ್‌ನಲ್ಲಿ ರಚಿಸಲಾಗಿರುವ ಈ ವಿಶ್ವಕೋಶದಲ್ಲಿ ಹಿಂದು ಧರ್ಮ ಹಾಗೂ ಸಂಪ್ರದಾಯದ ಕುರಿತು 7 ಸಾವಿರ ಲೇಖನಗಳು ಇವೆ.
- ಭಾರತದ ಇತಿಹಾಸ, ಭಾಷೆ, ಕಲೆ, ಸಂಗೀತ, ನೃತ್ಯ, ವಾಸ್ತುಶಿಲ್ಪ, ವೈದ್ಯಪದ್ಧತಿ ಹಾಗೂ ಮಹಿಳಾ ವಿಚಾರಗಳು, ಒಂದು ಸಾವಿರ ರೇಖಾ ಚಿತ್ರ ಹಾಗೂ ಫೋಟೋಗಳನ್ನು ಒಳಗೊಂಡಿರುವ ವಿಶ್ವಕೋಶದಲ್ಲಿ ಭಾರತೀಯ ದೇವತೆಗಳ ಬಣ್ಣದ ಚಿತ್ರಗಳು ಪ್ರಕಟವಾಗಿವೆ.
- ಚಿತ್ರದ ಕೆಳಭಾಗದಲ್ಲಿ ದೇವತೆಗಳ ಶಕ್ತಿಯ ವಿವರಣೆ ನೀಡಲಾಗಿದೆ. 600ರಿಂದ 700 ಪುಟಗಳಷ್ಟಿರುವ ವಿಶ್ವಕೋಶ ರಚನೆ ನೇತೃತ್ವವನ್ನು ಋಷಿಕೇಶದ ಪರಮಾರ್ಥ ನಿತೇಕತನ ಆಶ್ರಮದ ಅಧ್ಯಕ್ಷ ಸ್ವಾಮಿ ಚಿದಾನಂದ ಅವರು ಸಂಸ್ಥಾಪಿಸಿರುವ ಭಾರತೀಯ ಪಾರಂಪರಿಕ ಸಂಶೋಧನಾ ಪ್ರತಿಷ್ಠಾನ ಹೊತ್ತುಕೊಂಡಿದೆ.
- ಮೊದಲ ಆವೃತ್ತಿಯಲ್ಲಿ 3 ಸಾವಿರ ಪ್ರತಿಗಳನ್ನು ಮುದ್ರಿಸಿ ಹಂಚಲಾಗುತ್ತಿದೆ.
- ವಿಶ್ವದಲ್ಲಿ 220 ಕೋಟಿ ಕ್ರೈಸ್ತರು, 160 ಕೋಟಿ ಮುಸ್ಲಿಮರು ಹಾಗೂ 100 ಕೋಟಿ ಹಿಂದುಗಳಿದ್ದಾರೆ. ಹಿಂದು ಧರ್ಮದ ಬಗ್ಗೆ ಆಸಕ್ತಿಯುಳ್ಳವರಿಗೆ ಈ ವಿಶ್ವಕೋಶದಿಂದ ಅನುಕೂಲವಾಗಲಿದೆ.

**ಅಂತರರಾಷ್ಟ್ರೀಯ ದರ್ಜೆಯ ರಾಷ್ಟ್ರೀಯ ಮಾಧ್ಯಮ ಕೇಂದ್ರ ದೆಹಲಿಯಲ್ಲಿ ಲೋಕಾರ್ಪಣೆ:**

ಕೇಂದ್ರ ಸರ್ಕಾರದ ಕಾರ್ಯಕ್ರಮಗಳ ಕುರಿತ ವಿವರಗಳು, ಮಾಧ್ಯಮಗೋಷ್ಠಿ, ಮಾಧ್ಯಮಗಳಿಗೆ ಮಾಹಿತಿಯನ್ನು ಒದಗಿಸುವ ಅಂತಾರಾಷ್ಟ್ರೀಯ ದರ್ಜೆಯ ಅತ್ಯಾಧುನಿಕ ರಾಷ್ಟ್ರೀಯ ಮಾಧ್ಯಮ ಕೇಂದ್ರವನ್ನು ಲೋಕಾರ್ಪಣೆಗೊಳಿಸಲಾಯಿತು. ದೆಹಲಿಯ ರೈಸಿನಾ ರಸ್ತೆಯಲ್ಲಿ ಈ ಮಾಧ್ಯಮ ಕೇಂದ್ರವಿದ್ದು, ಪತ್ರಿಕಾ ಮಾಹಿತಿ ಸಂಸ್ಥೆ (ಪಿಐಬಿ)ಯ ಕಚೇರಿಯನ್ನೂ ಒಳಗೊಂಡಿದೆ. ಒಟ್ಟು 1.95 ಎಕರೆ ವಿಶಾಲ ಪ್ರದೇಶದಲ್ಲಿ ಒಟ್ಟು 60 ಕೋಟಿ ರೂ.ವೆಚ್ಚದ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲಾಗಿದ್ದು, 300 ಮಂದಿ ಮಾಧ್ಯಮ ಪ್ರತಿನಿಧಿಗಳು ಕೂರಲು ಅವಕಾಶವಾಗುವಂತೆ, ಸಭಾಂಗಣವನ್ನೂ ಹೊಂದಿದೆ. ಇದು ನವದೆಹಲಿಯಲ್ಲಿ ಇರುವ ದೇಶದ ಎಲ್ಲಾ ಮಾಧ್ಯಮ ಪ್ರತಿನಿಧಿಗಳಿಗೆ ಒಂದೇ ಕಡೆ ಕೆಲಸ ಮಾಡಲು ಅವಕಾಶ ಮಾಡಿಕೊಡುತ್ತದೆ. ಅಮೆರಿಕದ ವಾಷಿಂಗ್ಟನ್‌ಜಪಾನ್‌ನ ಟೋಕಿಯೋ ಸೇರಿದಂತೆ ಪ್ರಮುಖ ರಾಷ್ಟ್ರಗಳ ರಾಜಧಾನಿಯಲ್ಲಿ ಇಂತಹ ಮಾಧ್ಯಮ ಕೇಂದ್ರಗಳಿವೆ.

**ಮಹತ್ವದ ಭೂಸ್ವಾಧೀನ ವಿಧೇಯಕವನ್ನು ಅಂಗೀಕರಿಸಿದ ಕೇಂದ್ರ ಸರ್ಕಾರ**

ಹನ್ನೊಂದು ಕೋಟಿ ಕುಟುಂಬಗಳಿಗೆ ಪ್ರಯೋಜನವಾಗುವಂಥ ಮಹತ್ವದ ಭೂಸ್ವಾಧೀನ ವಿಧೇಯಕವನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿದೆ. ಇದರಿಂದಾಗಿ ನೂರಾರು ವರ್ಷಗಳಷ್ಟು ಹಳೆಯದಾದ 1894ರ ಕಾನೂನನ್ನು ಮಾರ್ಪಾಡಾಗಲಿದೆ.

**ಮುಖ್ಯಾಂಶಗಳು :**

- ಭೂಸ್ವಾಧೀನ ವಿಧೇಯಕವು ಗ್ರಾಮೀಣ ಪ್ರದೇಶದ 32.6 ಕೋಟಿ ಎಕರೆ ಜಮೀನಿನ ಮೇಲೆ ನೇರ ಪರಿಣಾಮ ಬೀರಲಿದೆ.
- 1894ರ ಭೂ ಸ್ವಾಧೀನ ಕಾನೂನನ್ನು ನೂತನ ವಿಧೇಯಕ ಬದಲಿಸಲಿದೆ. ಇದರಿಂದ ಯೋಜನೆಗಳ ವೆಚ್ಚದಲ್ಲಿ ತೀವ್ರ ಏರಿಕೆ ಕಂಡುಬಂದರೂ,ಪ್ರತಿಭಟನೆಗಳ ಕಾವು ಕಡಿಮೆಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.
- ರಸ್ತೆ, ಕಾರ್ಖಾನೆ, ಗೃಹನಿರ್ಮಾಣ ಯೋಜನೆಗಳಿಗಾಗಿ ಭೂಸ್ವಾಧೀನ ಕೈಗೊಳ್ಳಲು ಮುಂದಾದಾಗ ಹರಿಯಾಣ ಮತ್ತು ಉತ್ತರ ಪ್ರದೇಶಗಳಲ್ಲಿ ತೀವ್ರ ಪ್ರತಿಭಟನೆಗಳು ಎದುರಾಗಿದ್ದವು.
- ಉದ್ಯಮ ವಲಯ ಭೂಸ್ವಾಧೀಯ ವಿಧೇಯಕವನ್ನು ಸ್ವಾಗತಿಸಿದರೂ, ಇದರಿಂದ ಭೂಮಿಯ ಬೆಲೆ ಶೇ. 40 ರಿಂದ 60ಕ್ಕೆ ಏರಿಕೆಯಾಗಲಿದೆ. ಸಹಜವಾಗಿ ಇದು ಯೋಜನಾ ವೆಚ್ಚ ಗಗನಮುಖಿಯಾಗಲು ಕಾರಣವಾಗುತ್ತದೆ. ರಿಯಲ್ ಎಸ್ಟೇಟ್ ತುಟ್ಟಿಯಾಗಲಿದೆ.
- ಸಾಮಾನ್ಯ ಭೂಮಿಯ ರಕ್ಷಣೆಗೆ ಅಗತ್ಯವಾದ ಕ್ರಮಗಳು ವಿಧೇಯಕದಲ್ಲಿಲ್ಲ ಎಂಬುದು ಸಾಮಾಜಿಕ ಕಾರ್ಯಕರ್ತರ ವಾದ.
- ಭೂಸ್ವಾಧೀನ ವಿಧೇಯಕದ ಹಣಕಾಸು ಪರಿಹಾರಕ್ಕೆ ಮನಸೋತು ರೈತರೇ ಭೂಮಿ ನೀಡಲು ಮುಂದೆ ಬಂದರೆ ಆಶ್ಚರ್ಯವಿಲ್ಲ.ಇದು ಒಟ್ಟಾರೆ ಆಶಯಕ್ಕೆ ವಿರುದ್ಧವಾಗುವ ಸಾಧ್ಯತೆಯೂ ಇದೆ.

**1894 ರ ಕರಾಳ ಕಾಯ್ದೆಗೆ ತೆರೆ:**

- ಬ್ರಿಟಿಷರ ಕಾಲದಲ್ಲಿ 1894ರಲ್ಲಿ ಜಾರಿಗೆ ಬಂದಿದ್ದ ಭೂಸ್ವಾಧೀನ ಕಾಯ್ದೆಯು ಈ ವರೆಗೆ ಜಾರಿಯಲ್ಲಿತ್ತು.
- ರಸ್ತೆಗಳು, ಕಾಲುವೆಗಳು, ರೈಲ್ವೆ ಮಾರ್ಗ ನಿರ್ಮಾಣದ ಸಾರ್ವಜನಿಕ ಉದ್ದೇಶಕ್ಕೆ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಈ ಕಾಯಿದೆ ಜಾರಿಗೆ ಬಂದಿತ್ತು.
- ಸ್ವಾತಂತ್ರ್ಯ ಬಂದ ನಂತರವೂ ಇದೇ ಕಾಯಿದೆಯನ್ನು ಉಳಿಸಿಕೊಳ್ಳಲಾಗಿತ್ತು.
- ರೈತರ ಪಾಲಿಗೆ ಕರಾಳವೆಂದು ಬಣ್ಣಿಸಲಾಗಿರುವ ಈ ಕಾಯಿದೆಗೆ ಕಾಲ ಕಾಲಕ್ಕೆ ಮಾಡಲಾಗಿರುವ ತಿದ್ದುಪಡಿಗಳು ಅದರ ಮೂಲ ಸ್ವರೂಪವನ್ನೇನೂ ಬದಲಾಯಿಸಿರಲಿಲ್ಲ.
- ಈ ಕರಾಳ ಕಾಯಿದೆಯ ನೆರವು ಪಡೆದು ಸಾರ್ವಜನಿಕ ಉದ್ದೇಶದ ಗಂಧ ಗಾಳಿ ಇಲ್ಲದ ಅನೇಕ ಯೋಜನೆಗಳಿಗೆ ಭೂಸ್ವಾಧೀನದ ಹೆಸರಿನಲ್ಲಿ ಅಗ್ಗದ ಬೆಲೆಗೆ ರೈತರಿಂದ ಜಮೀನು ಕಸಿಯುವ ಕೆಲಸವನ್ನು ಸರಕಾರವೇ ಮುಂದೆ ನಿಂತು ಮಾಡುತ್ತಿದೆ ಎಂಬ ವ್ಯಾಪಕ ಟೀಕೆಗಳು ಇತ್ತೀಚಿನ ದಶಕಗಳಲ್ಲಿ ಹೆಚ್ಚು ಗಟ್ಟಿಯಾಗಿ ಕೇಳಿಬಂದಿದ್ದವು.

**2011ರ ವಿಧೇಯಕ ಒಳಗೊಂಡಿದ್ದ ಅಂಶಗಳು:**

ಭೂ ಸ್ವಾಧೀನ ಕಾಯ್ದೆಗೆ ತಿದ್ದುಪಡಿ ತರುವ ನಿಟ್ಟಿನಲ್ಲಿ 2011ರಲ್ಲಿ ವಿಧೇಯಕವನ್ನು ಸಂಸತ್‌ನಲ್ಲಿ ಮಂಡಿಸಲಾಗಿತ್ತು. ಪ್ರತಿಪಕ್ಷಗಳ ಆಕ್ಷೇಪದನ್ವಯ ಕೆಲವು ಬದಲಾವಣೆಗಳು ನಡೆದಿದ್ದು, 2012ರಲ್ಲಿ ಹೊಸ ವಿಧೇಯಕ ರೂಪುಗೊಂಡಿದೆ.

**2011ರ ವಿಧೇಯಕದಲ್ಲಿದ್ದ ಮುಖ್ಯಾಂಶಗಳು ಹೀಗಿವೆ:**

- ಖಾಸಗಿ ಮೂಲಸೌಲಭ್ಯ ಮತ್ತು ಕೈಗಾರಿಕೆ ಯೋಜನೆಗಳಿಗೆ ಭೂಸ್ವಾಧೀನ ಮಾಡಿಕೊಳ್ಳಲು ಭೂಮಿ ಹೊಂದಿರುವ ಶೇ. 80 ಮಂದಿಯ ಒಪ್ಪಿಗೆ ಬೇಕು. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವಕ್ಕೆ ಶೇ. 70ರಷ್ಟು ಭೂಮಾಲೀಕರ ಸಮ್ಮತಿ ಪಡೆಯುವುದು ಕಡ್ಡಾಯ.
- ಗ್ರಾಮೀಣ ಪ್ರದೇಶದಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲು ಮಾರುಕಟ್ಟೆ ದರಕ್ಕಿಂತ ನಾಲ್ಕು ಪಟ್ಟು ಮತ್ತು ನಗರ ಪ್ರದೇಶಗಳಲ್ಲಿ ಮಾರುಕಟ್ಟೆ ಬೆಲೆಯ ದುಪ್ಪಟ್ಟು ಪರಿಹಾರ ನೀಡಬೇಕೆಂದು ಸೂಚಿಸುತ್ತದೆ.
- ಪ್ರತಿಪಕ್ಷಗಳ ಒತ್ತಡಕ್ಕೆ ಮಣಿದ ಸರಕಾರ ಭೂಮಿಯ ಗುತ್ತಿಗೆ ನೀಡಿ, ಅದರಿಂದ ಮಾಲೀಕರಿಗೆ ನಿಯಮಿತವಾಗಿ ಆದಾಯ ಬರುವಂತೆ ಮಾಡಬಹುದು ಎಂಬ ಸಲಹೆಯನ್ನು ಅಳವಡಿಸಿಕೊಳ್ಳಲಾಗಿದೆ.
- ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಭೂಮಿ ಕಳೆದು ಕೊಂಡವರಿಗೆ ಪುನರ್ವಸತಿ ಕಲ್ಪಿಸುವ ಮತ್ತು ಹೊಸ ಕೌಶಲಗಳ ತರಬೇತಿ ನೀಡುವ ಅವಕಾಶವನ್ನೂ ಅಳವಡಿಸಿಕೊಳ್ಳಲಾಗಿದೆ.
- ನಗರ ಪ್ರದೇಶಗಳಲ್ಲಿ ಭೂಸ್ವಾಧೀನ ಮಾಡಿಕೊಳ್ಳಬೇಕಾದರೆ ಮಾರುಕಟ್ಟೆ ದರದ ಕನಿಷ್ಠ ಎರಡು ಪಟ್ಟು, ಗ್ರಾಮೀಣ ಭಾಗದಲ್ಲಿ ಮಾರುಕಟ್ಟೆ ದರದ ಕನಿಷ್ಠ ನಾಲ್ಕು ಪಟ್ಟು ಮೌಲ್ಯ ಪಾವತಿಸಬೇಕೆಂದು ಪ್ರತಿಪಾದಿಸಲಾಗಿದೆ.

- ಸಾರ್ವಜನಿಕ ಉದ್ದೇಶಗಳಿಗಾಗಿ ಖಾಸಗಿ ಕಂಪನಿ ಪರವಾಗಿ ಭೂಸ್ವಾಧೀನ ಮಾಡಿಕೊಂಡರೆ ಅದನ್ನು ಅನ್ಯ ಕಾರಣಗಳಿಗೆ ಬಳಸುವಂತಿಲ್ಲ. ಹತ್ತು ವರ್ಷಗಳೊಳಗೆ ಯೋಜನೆ ಪೂರ್ಣಗೊಳ್ಳದಿದ್ದರೆ ಸರಕಾರ ಈ ಭೂಮಿಯನ್ನು ವಾಪಸ್ ಪಡೆಯಬಹುದು.ಆದರೆ ಸರಕಾರಿ ಭೂಸ್ವಾಧೀನಕ್ಕೆ ಈ ನಿರ್ಬಂಧಗಳಿಲ್ಲ.
- ಭೂ ಸಂತ್ರಸ್ತರಿಗೆ ಒಂದು ವರ್ಷದ ತನಕ ಪ್ರತಿ ತಿಂಗಳೂ ಮೂರು ಸಾವಿರ ರೂಪಾಯಿ ಪರಿಹಾರ ಭತ್ಯೆ ಮತ್ತು ನಂತರ 20 ವರ್ಷಗಳವರೆಗೆ ತಲಾ ಎರಡು ಸಾವಿರ ಹಣದುಬ್ಬರಕ್ಕನುಗುಣವಾಗಿ ಪರಿಹಾರ ಭತ್ಯೆ, ಸಂತ್ರಸ್ತ ಕುಟುಂಬದ ಕನಿಷ್ಠ ಒಬ್ಬ ಸದಸ್ಯನಿಗೆ ಉದ್ಯೋಗ ಇಲ್ಲವೇ ಎರಡು ಲಕ್ಷ ರೂಪಾಯಿ ಪರಿಹಾರ ನೀಡುವ ಪ್ರಸ್ತಾಪವೂ ಇದರಲ್ಲಿದೆ.
- ಪರಿಹಾರ ಕ್ರಮಗಳನ್ನು ಮೂರು ತಿಂಗಳೊಳಗೆ ಪ್ರಕಟಿಸಬೇಕು. ಆರು ತಿಂಗಳೊಳಗೆ ಮರುವಸತಿ ಕಲ್ಪಿಸಬೇಕು. ಒಂದೂವರೆ ವರ್ಷದೊಳಗೆ ಪರ್ಯಾಯ ವಸತಿ ಸ್ಥಳದಲ್ಲಿ ಮೂಲ ಸೌಲಭ್ಯ ಕಲ್ಪಿಸಿಕೊಡಬೇಕೆನ್ನುವ ನಿಬಂಧನೆಗಳೂ ವಿಧೇಯಕದಲ್ಲಿವೆ.

## ಅಂತರರಾಷ್ಟ್ರೀಯ

### ಚೀನಾದಲ್ಲಿ ವಿಶ್ವದ ಅತ್ಯಂತ ಎತ್ತರದ ವಿಮಾನ ನಿಲ್ದಾಣ

ವಿಶ್ವದಲ್ಲೇ ಅತ್ಯಂತ ಎತ್ತರ ಸ್ಥಳದಲ್ಲಿ ಕಾರ್ಯನಿರ್ವಹಿಸುವ ವಿಮಾನ ನಿಲ್ದಾಣ ಚೀನಾದಲ್ಲಿ ನಿರ್ಮಾಣವಾಗುತ್ತಿದೆ. ಈ ವರ್ಷದ ಅಂತ್ಯಕ್ಕೆ ಕಾರ್ಯರಂಭ ಮಾಡಲು ಸಜ್ಜಾಗುತ್ತಿರುವ ಈ ನಿಲ್ದಾಣ ವಿಶ್ವದ ಅತಿ ಎತ್ತರದ ವಿಮಾನ ನಿಲ್ದಾಣ ಎನಿಸಲಿದೆ.

- ಚೀನಾದ ಸಿಯಾಚುನ್ ಪ್ರಾಂತ್ಯದ ಗರ್ಝೆ (Garze) ಎಂಬಲ್ಲಿ "ದೊಚೆಂಗ್ ಯಾಡಿಂಗ್ ವಿಮಾನ ನಿಲ್ದಾಣ (Daocheng Yading Airport)" ಸುಮಾರು 4,411 ಮೀಟರ್ ಎತ್ತರದಲ್ಲಿ ನಿರ್ಮಾಣಗೊಳ್ಳುತ್ತಿದೆ.
- ಗರ್ಝೆ ಒಂದು ಪ್ರಸಿದ್ದ ಬೌದ್ಧಿಕ ಪ್ರವಾಸಿ ತಾಣವಾಗಿದ್ದು, ಪ್ರವಾಸೋದ್ಯಮವನ್ನು ವೃದ್ಧಿಸುವಲ್ಲಿ ಈ ನಿಲ್ದಾಣ ನೆರವಾಗಲಿದೆ.
- 1994 ರಲ್ಲಿ ನಿರ್ಮಾಣಗೊಂಡ ಬಂಗ್ದ (Bangda) ವಿಮಾನ ನಿಲ್ದಾಣ ಸದ್ಯ ವಿಶ್ವದ ಅತ್ಯಂತ ಎತ್ತರ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಮಾನ ನಿಲ್ದಾಣ ಎನಿಸಿದೆ. ಟಿಬೆಟ್ ಸ್ವಾಯುತ್ತತ ವಲಯದಲ್ಲಿರುವ ಈ ವಿಮಾನ ನಿಲ್ದಾಣ 4,334 ಮೀಟರ್ ಎತ್ತರದಲ್ಲಿ ಸ್ಥಾಪಿಸಲಾಗಿದೆ.

### 68 ನೇ ಹಿರೋಶಿಮಾ ದಿನ ಆಚರಿಸಿದ ಜಪಾನ್

ಆಗಸ್ಟ್ 6, 1945 ಜಪಾನ್ ಇತಿಹಾಸದಲ್ಲಿ ಅತ್ಯಂತ ಘೋರ ದಿನ. ಎರಡನೇ ವಿಶ್ವ ಮಹಾಯುದ್ದ ಸಮಯದಲ್ಲಿ ಅಮೆರಿಕಾ ಎಸೆದ ವಿಶ್ವದ ಮೊದಲ ಅಣು ಬಾಂಬ್ ಗೆ ಜಪಾನ್ ತತ್ತರಿಸಿ ಹೋಗಿತ್ತು. ಕೇವಲ ಜಪಾನ್ ಅಲ್ಲದೇ ಇಡೀ ವಿಶ್ವವೇ ಅಣು ಬಾಂಬ್ ನ ಘೋರ ಕೃತ್ಯಕ್ಕೆ ಮೂಕ ವಿಸ್ಮಯವಾಗಿತ್ತು. ಇಂತಹ ಘೋರ ಕೃತ್ಯ ನಡೆದು ಆಗಸ್ಟ್ 6, 2013 ಕ್ಕೆ ಸರಿಯಾಗಿ 68 ವರ್ಷ. ಇಡೀ ಜಪಾನ್ ಈ ದಿನದಂದು ಹುತ್ಮಾತರಿಗೆ ನಮನ ಸಲ್ಲಿಸಿತು.

- ಜಪಾನ್ ಪ್ರಧಾನಿ ಶಿಂಜೋ ಅಬೆ ಸೇರಿದಂತೆ ಜಪಾನ್ ನ ಅನೇಕ ಗಣ್ಯರು ಮತ್ತು 50,000 ಕ್ಕೂ ಹೆಚ್ಚು ಸಂಖ್ಯೆಯಲ್ಲಿ ನೆರದಿದ್ದ ಜನರು ಹುತಾತ್ಮರನ್ನು ನೆನೆದರು.
- ಆಗಸ್ಟ್ 6, 1945 ರಲ್ಲಿ ಅಮೆರಿಕಾ "ಲಿಟ್ಲ್ ಬಾಯ್ (Little Boy)" ಎಂಬ ಅಣು ಬಾಂಬ್ ನ್ನು ಜಪಾನ್ ನ ಹಿರೋಶಿಮಾ ನಗರದ ಮೇಲೆ ಎಸೆಯಿತು. ಅಮೆರಿಕಾ ಮಾಡಿದ ಈ ಹೀನಾ ಕೃತ್ಯ ಜಪಾನ್ ನ 1,40,000 ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿತು. ಆಗಸ್ಟ್ 6 ರನ್ನು ಜಪಾನ್ ನಲ್ಲಿ ಹಿರೋಶಿಮಾ ದಿನವೆಂದು ಆಚರಿಸುತ್ತಾರೆ.
- ಇದಾದ ಮೂರು ದಿನಗಳ ಬಳಿಕ ಮತ್ತೆ ಅಮೆರಿಕಾ ಜಪಾನ್ ನ ಮತ್ತೊಂದು ನಗರ "ನಾಗಸಾಕಿ" ಮೇಲೆ ಆಗಸ್ಟ್ 9, 1945 ರಂದು ಎಸೆದ "ಫ್ಯಾಟ್ ಮನ್ (Fat Man)" ಹೆಸರಿನ ಅಣು ಬಾಂಬ್ ಜಪಾನ್ ಅಮೆರಿಕಾಗೆ ಶರಣಾಗುವಂತೆ ಮಾಡಿತು. ಆಗಸ್ಟ್ 9 ನಾಗಸಾಕಿ ದಿನವೆಂದು ಜಪಾನ್ ನಲ್ಲಿ ಆಚರಿಸಲಾಗುತ್ತದೆ.

## ವಸತಿ ಸಾಲ: ವಿಶ್ವಬ್ಯಾಂಕ್ ನೊಂದಿಗಿನ ಒಪ್ಪಂದಕ್ಕೆ ಭಾರತ ಸರ್ಕಾರ ಸಹಿ

ಆರ್ಥಿಕವಾಗಿ ಹಿಂದುಳಿದ ಮತ್ತು ಕಡಿಮೆ ಆದಾಯ ಹೊಂದಿರುವ ಬಡವರಿಗೆ ವಸತಿ ಸೌಕರ್ಯ ಕಲ್ಪಿಸುವುದಕ್ಕಾಗಿ ವಿಶ್ವಬ್ಯಾಂಕ್ ಮತ್ತು ಭಾರತ ಸರ್ಕಾರ 100 ಮಿಲಿಯನ್ ಡಾಲರ್ ಸಾಲ ಒಪ್ಪಂದಕ್ಕೆ ಸಹಿ ಹಾಕಿವೆ. ಬಡವರಿಗೆ ಮನೆ ನಿರ್ಮಿಸಿಕೊಳ್ಳಲು, ಕೊಂಡುಕೊಳ್ಳಲು ಅಥವಾ ಶಿಥಿಲ ಮನೆಯನ್ನು ಅಭಿವೃದ್ದಿಪಡಿಸಿಕೊಳ್ಳುವುದಕ್ಕಾಗಿ ಸಾಲ ಪಡೆಯಲು ಈ ಯೋಜನೆ ಅತ್ಯಂತ ಸಹಕಾರಿಯಾಗಲಿದೆ. ದೆಹಲಿಯಲ್ಲಿ ನಡೆದ ಮಾತುಕತೆಯಲ್ಲಿ ವಿಶ್ವಸಂಸ್ಥೆ, ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಮತ್ತು ಸರ್ಕಾರದ ಸಮ್ಮುಖದಲ್ಲಿ ಸಾಲ ಒಪ್ಪಂದಕ್ಕೆ ಸಹಿ ಹಾಕಲಾಯಿತು.

- ಈ “ಕಡಿಮೆ ಆದಾಯ ವಸತಿ ಫೈನಾನ್ಸ್ ಯೋಜನೆ”ಯನ್ನ ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಅನುಷ್ಠಾನಗೊಳಿಸಲಿದೆ.

### ಒಪ್ಪಂದ ಉದ್ದೇಶ:

- ಕಡಿಮೆ ಆದಾಯ ಹೊಂದಿರುವವರು ಮನೆ ಕಟ್ಟಿಕೊಳ್ಳಲು, ಮನೆ ಕೊಂಡುಕೊಳ್ಳಲು ಅಥವಾ ಇರುವ ಮನೆಯನ್ನು ಅಭಿವೃದ್ದಿಪಡಿಸಿಕೊಳ್ಳಲು ಸುಸ್ಥಿರ ವಸತಿ ಸಾಲ ವ್ಯವಸ್ಥೆಯನ್ನು ಕಲ್ಪಿಸುವುದು ಈ ಒಪ್ಪಂದದ ಪ್ರಮುಖ ಉದ್ದೇಶ.
- ಈ ಮೂಲಕ ದುರ್ಬಲ ವಲಯಕ್ಕೆ ವಿತ್ತೀಯ ಸೇರ್ಪಡೆ (Financial Inclusion) ಮಾಡುವ ಸರ್ಕಾರದ ಗುರಿಯು ಸುಗುಮವಾಗಿ ಸಾಗಲಿದೆ.

## ವಿಶ್ವದ ಅತಿ ಎತ್ತರದ ನಾಗರಿಕ ವಿಮಾನ ನಿಲ್ದಾಣ ನಿರ್ಮಿಸಲಿರುವ ಚೀನಾ

ಹಿಮಾಲಯ ಪ್ರಾಂತ್ಯದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಟಿಬೆಟ್ ಬಳಿ ವಿಶ್ವದ ಅತಿ ಎತ್ತರದ ನಾಗರಿಕ ವಿಮಾನ ನಿಲ್ದಾಣ ನಿರ್ಮಿಸಲು ಚೀನಾ ಮುಂದಾಗಿದೆ. ಭೌಗೋಳಿಕ ಸಮಸ್ಯೆಗಳಿಂದ ಕೂಡಿರುವ ಟಿಬೆಟ್ ಬಳಿ ರಸ್ತೆ ಮತ್ತು ರೈಲ್ವೆ ಸೇವೆ ಅಭಿವೃದ್ಧಿ ಪಡಿಸುತ್ತಿರುವುದರಿಂದ ಭಾರತ ಕಳವಳಕ್ಕೆ ಒಳಗಾಗಿರುವ ಬೆನ್ನಲ್ಲೇ ಚೀನಾ ಈ ಕಾರ್ಯಕ್ಕೆ ಕೈಹಾಕುವ ಮೂಲಕ ಟಿಬೆಟ್ ಪ್ರಾಂತ್ಯದಲ್ಲಿ ತನ್ನ ಅಧಿಪತ್ಯ ಸ್ಥಾಪಿಸಲು ಮುಂದಾಗಿದೆ.

### ವಿಮಾನ ನಿಲ್ದಾಣದ ಬಗ್ಗೆ:

- ಗಾರ್ಜೆ ಟಿಬೆಟಿಯನ್ ಪ್ರದೇಶದಲ್ಲಿ 4411 ಮೀಟರ್ ಎತ್ತರದಲ್ಲಿ ದಾವೋಚೆಂಗ್ ಯಾಡಿಂಗ್ ವಿಮಾನ ನಿಲ್ದಾಣ ಕಾಮಗಾರಿ ಆರಂಭಿಸಲಾಗಿದೆ.
- ಈ ವಿಮಾನ ನಿಲ್ದಾಣ ಸಮುದ್ರ ಮಟ್ಟದಿಂದ 4334 ಮೀಟರ್ ಎತ್ತರದಲ್ಲಿದೆ ಮತ್ತು ಇದು ಬಾಂಗ್ಲಾ ವಿಮಾನ ನಿಲ್ದಾಣವನ್ನು ಮೀರಿಸಲಿದೆ ಎಂದು ಚೀನಾ ಮಾಧ್ಯಮವೊಂದು ವರದಿ ಮಾಡಿದೆ.
- ಈ ವಿಮಾನ ನಿಲ್ದಾಣದ ಜೊತೆಗೆ ಟಿಬೆಟ್ ಸ್ವಾಯತ್ತ ಪ್ರದೇಶದಲ್ಲಿ ಇನ್ನೂ 5 ವಿಮಾನ ನಿಲ್ದಾಣಗಳನ್ನು ನಿರ್ಮಿಸಲಿದೆ.

## ಜೆನರಿಕ್ ಔಷಧಗಳ ಮಾರಾಟ ಶುಲ್ಕ ಹೆಚ್ಚಿಸಲು ಅಮೆರಿಕ ನಿರ್ಧಾರ

ಜೆನರಿಕ್ ಔಷಧಗಳ ಮಾರಾಟ ಶುಲ್ಕ ಹೆಚ್ಚಿಸಲು ಅಮೆರಿಕ ನಿರ್ಧರಿಸಿದ್ದು, ಇದು ಭಾರತದ ಕಂಪೆನಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಅಮೆರಿಕದ ಆಹಾರ ಮತ್ತು ಔಷಧ ಆಡಳಿತವು (ಎಫ್‌ಡಿಎ), ಜೆನರಿಕ್ ಔಷಧ ಮಾರಾಟದ ಮೇಲೆ ಅಕ್ಟೋಬರ್‌ನಿಂದ ಶೇ 48ರಷ್ಟು ಶುಲ್ಕ ಹೆಚ್ಚಿಸಲು ತೀರ್ಮಾನಿಸಿದೆ. ಅಮೆರಿಕದ ಈ ಹೊಸ ಔಷಧ ನೀತಿ ಆ ದೇಶಕ್ಕೆ ಜೆನರಿಕ್ ಔಷಧ ರಫ್ತು ಮಾಡುವ ಎರಡನೇ ಅತಿ ದೊಡ್ಡ ದೇಶವಾಗಿರುವ ಭಾರತದ ಕಂಪೆನಿಗಳ ಮೇಲೆ ನೇರ ಪರಿಣಾಮ ಬೀರಲಿದೆ.

**ಪರಿಣಾಮಗಳೇನು?**

- ಭಾರತದ ಬಹುತೇಕ ಕಂಪೆನಿಗಳು ಜೆನರಿಕ್ ಔಷಧ ತಯಾರಿಕೆಯಲ್ಲಿ ವಿಶೇಷ ಪ್ರಾವೀಣ್ಯ ಹೊಂದಿವೆ. 1.71 ಸಾವಿರ ಕೋಟಿ (3000 ಕೋಟಿ ಡಾಲರ್) ಮೊತ್ತದ ಅಮೆರಿಕದ ಒಟ್ಟು ಜೆನರಿಕ್ ಔಷಧ ಮಾರುಕಟ್ಟೆಯಲ್ಲಿ ಭಾರತದ ಪಾಲು ಶೇ 10ರಷ್ಟಿದೆ.
- ಹೊಸ ನಿಯಮದ ಪ್ರಕಾರ, ಕಂಪೆನಿಗಳು ಜೆನರಿಕ್ ಔಷಧ ಅರ್ಜಿ ಪರಿಶೀಲನೆ ಹಾಗೂ ತಪಾಸಣಾ ಶುಲ್ಕದ ಜೊತೆ ಹೆಚ್ಚುವರಿಯಾಗಿ ಬಳಕೆದಾರರ ಶುಲ್ಕ ಭರಿಸಬೇಕಾಗುತ್ತದೆ.
- `ಎಫ್‌ಡಿಎ' ಈ ಕ್ರಮದಿಂದ ಭಾರತ ಮತ್ತು ಇತರ ರಾಷ್ಟ್ರಗಳಲ್ಲದೇ ಸ್ವತಃ ಅಮೆರಿಕದ ಕಂಪೆನಿಗಳು ಕೂಡ ಹೆಚ್ಚುವರಿ ಶುಲ್ಕ ಪಾವತಿಸಬೇಕಾಗುತ್ತದೆ.
- ನೂತನ ನಿಯಮ ಅಕ್ಟೋಬರ್ 1, 2013ರಿಂದ ಜಾರಿಗೆ ಬರಲಿದೆ. ವರ್ಷಕ್ಕೆ ಒಂದು ಬಾರಿ ಶುಲ್ಕ ಪರಿಷ್ಕರಣೆಗೆ ಒಳಪಡುತ್ತದೆ.
- ನೂತನ ನಿಯಮದ ಪ್ರಕಾರ ಹೊಸ ಕಿರು ಅರ್ಜಿ ಶುಲ್ಕವನ್ನು (ಎಎನ್‌ಡಿಎ) ಈಗಿರುವ 31 ಲಕ್ಷ ರೂಪಾಯಿಯಿಂದ (51,520 ಡಾಲರ್) 38 ಲಕ್ಷ ರೂಪಾಯಿಗೆ (63,860 ಡಾಲರ್) ಹೆಚ್ಚಿಸಲಾಗಿದ್ದು, ಶೇ 24ರಷ್ಟು ಏರಿಸಿದಂತಾಗಿದೆ.

## ಆಗಸ್ಟ್ 19: "ವಿಶ್ವ ಛಾಯಾಗ್ರಾಹಕರ ದಿನ (World Photography Day)"

ಆಗಸ್ಟ್ 19 ವಿಶ್ವ ಛಾಯಾಗ್ರಾಹಕರ ದಿನ. ಜಗತ್ತಿಗೆ ಮೊದಲ ಬಾರಿಗೆ ಛಾಯಾಚಿತ್ರವನ್ನು ತೆಗೆಯುವ ವಿಧಾನವನ್ನು ಪರಿಚಯಿಸಿದರ ಸ್ಮರಣಾರ್ಥ ಫ್ರೆಂಚ್ ಸರ್ಕಾರ ಆಗಸ್ಟ್ 19 ನ್ನು ವಿಶ್ವ ಛಾಯಾಗ್ರಾಹಕರ ದಿನವೆಂದು ಘೋಷಿಸಿದೆ.

- ವಿಶ್ವ ಛಾಯಾಗ್ರಾಹಕರ ದಿನದ ಮೂಲ ಡಗೆರೊಟೈಪ್ (Daguerrotype) ಅನ್ವೇಷಣೆಗೆ ಸಂಬಂಧಿಸಿದ್ದು. ಡಗೆರೊಟೈಫ್ ಛಾಯಾಚಿತ್ರಕ್ಕೆ ಸಂಬಂಧಿಸಿದ್ದ ತಂತ್ರಜ್ಞಾನ. ವಿಶ್ವದಲ್ಲೇ ಮೊದಲ ಬಾರಿಗೆ ಈ ತಂತ್ರಜ್ಞಾನವನ್ನು ಜೋಸೆಫ್ ನೈಸ್ಫೋರ್ ಮತ್ತು ಲೂಯಿಸ್ ಡಗೆರ್ ಎನ್ನುವವರು ಆವಿಷ್ಕರಿಸಿದರು.
- ಜನವರಿ 9, 1839 ರಲ್ಲೇ ಈ ತಂತ್ರಜ್ಞಾನದ ಬಗ್ಗೆ ಫ್ರೆಂಚ್ ಅಕಾಡೆಮಿ ಆಫ್ ಸೈನ್ಸ್ ಇದನ್ನು ಜಗತ್ತಿಗೆ ಅನಾವರಣಗೊಳಿಸಿತಾದರೂ, ಆಗಸ್ಟ್ 19, 1839 ರಲ್ಲಿ ಫ್ರೆಂಚ್ ಸರ್ಕಾರ ಈ ಆವಿಷ್ಕಾರವನ್ನು ಪ್ರಪಂಚಕ್ಕೆ

ಉಡುಗೊರೆಯೆಂದು ಘೋಷಿಸಿತು. ಇದರ ಪರಿಣಾಮವೇ ಆಗಸ್ಟ್ 19 ನ್ನು ವಿಶ್ವ ಛಾಯಾಗ್ರಾಹಕರ ದಿನವೆಂದು ಆಚರಿಸಲಾಗುತ್ತಿದೆ.

- ಅದೇ ವರ್ಷ ಅಂದರೆ 1839 ರಲ್ಲಿ ವಿಲಿಯಂ ಫಾಕ್ಸ್ ಎನ್ನುವವರು ಕಾಲೊಟೈಫ್ ಎನ್ನುವ ಮತ್ತೊಂದು ಛಾಯಾಚಿತ್ರ ತಂತ್ರಜ್ಞಾನವನ್ನು ಪರಿಚಯಿಸಿದರು. ಹಾಗಾಗಿ 1839 ನೇ ಇಸವಿ ಛಾಯಾಚಿತ್ರ ಇತಿಹಾಸದಲ್ಲಿ ಮೊದಲ ಹೆಜ್ಜೆ ಎನಿಸಿತು.

**<u>ಇರಾಕ್ ಪ್ರಧಾನಿ ನೂರಿ ಅಲ್-ಮಲಿಕಿ ಭಾರತ ಭೇಟಿ</u>**

ರಿಪಬ್ಲಿಕ್ ಆಫ್ ಇರಾಕ್ ನ ಪ್ರಧಾನಿ ನೂರಿ ಅಲ್-ಮಲಿಕಿ (Nouri Al-Maliki) ಅವರು ಆಗಸ್ಟ್ 22 ರಿಂದ 25 ರ ವರೆಗೆ ಭಾರತಕ್ಕೆ ಅಧಿಕೃತ ಪ್ರವಾಸ ಕೈಗೊಂಡಿದ್ದರು. ಭೇಟಿ ವೇಳೆ ಮಲಿಕಿ ಭಾರತದ ರಾಷ್ಟ್ರಪತಿ ಪ್ರಣಭ್ ಮುಖರ್ಜಿ, ಉಪರಾಷ್ಟ್ರಪತಿ ಹಮೀದ್ ಅನ್ಸಾರಿ, ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಸೇರಿದಂತೆ ವಿವಿಧ ಗಣ್ಯರನ್ನು ಭೇಟಿ ಮಾಡಿದರು. ಭೇಟಿ ಕುರಿತು ಕಿರು ಮಾಹಿತಿ ಇಲ್ಲಿದೆ.

- ನೂರಿ ಅಲ್-ಮಲಿಕಿ ಅವರಿಗೆ ಇದು ಪ್ರಥಮ ಭಾರತ ಭೇಟಿ. ತಮ್ಮ ಪ್ರತಿ ನಿಧಿಗಳೊಂದಿಗೆ ಭಾರತಕ್ಕೆ ಭೇಟಿ ನೀಡಿದ ಅವರು ಭಾರತ-ಇರಾಕ್ ನಡುವೆ ಸಂಬಂಧವನ್ನು ಬಲಗೊಳಿಸುವ ಅನೇಕ ವಿಚಾರಗಳನ್ನು ಭಾರತದ ಪ್ರತಿನಿಧಿಗಳೊಂದಿಗೆ ಚರ್ಚಿಸಿದರು.
- ಉಭಯ ದೇಶಗಳ ನಡುವೆ ದ್ವಿಪಕ್ಷೀಯ ಸಹಕಾರ ಸೇರಿದಂತೆ ಎರಡು ದೇಶಗಳ ನಡುವೆ ಹಿತಾಸಕ್ತಿಯನ್ನು ಕಾಪಾಡುವ ಅನೇಕ ವಿಚಾರಗಳ ಬಗ್ಗೆ ಚರ್ಚಿಸಿ ಸಹಮತ ವ್ಯಕ್ತಪಡಿಸಲಾಯಿತು.
- ಮಲಿಕಿ ಅವರ ಈ ಮಹತ್ವದ ಭೇಟಿ ವೇಳೆ ಅನೇಕ ಒಡಂಬಡಿಕೆಗೆ ಸಹಿ ಹಾಕಲಾಯಿತು. ಅವುಗಳೆಂದರೆ:
- **<u>ಇಂಧನ ವಲಯ:</u>** ಪೆಟ್ರೋಲಿಯಂ ಮತ್ತು ಅನಿಲ ಉತ್ಪಾದನೆಗೆ ಸಂಬಂಧಿಸಿದಂತೆ ಉಭಯ ದೇಶಗಳ ಇಂಧನ ಸಚಿವರು ಒಡಂಬಡಿಕೆಗೆ ಸಹಿ ಹಾಕಿದರು. ಇರಾಕ್ ನಲ್ಲಿ ONGC ವಿದೇಶ್ ಲಿಮಿಟೆಡ್ ಉದ್ದೇಶಿಸಿರುವ ತೈಲ ಉತ್ಪಾದನೆ ಸೇರಿದಂತೆ ತೈಲ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಅಂಶಗಳ ಈ ಒಡಂಬಡಿಕೆಯಲ್ಲಿ ಕೂಡಿವೆ.
- **<u>ವಿದೇಶಾಂಗ ವ್ಯವಹಾರ:</u>** ಭಾರತ-ಇರಾಕ್ ನಡುವೆ ವಿದೇಶಾಂಗ ವ್ಯವಹಾರಕ್ಕೆ ಸಂಬಂಧಿಸಿದ ಒಡಂಬಡಿಕೆಗೆ ಎರಡು ದೇಶಗಳ ವಿದೇಶಾಂಗ ಸಚಿವರು ಸಹಿ ಹಾಕಿದರು. ಉಭಯ ದೇಶಗಳ ನಡುವೆ ಪರಸ್ಪರ ಸಹಕಾರ, ಹಿತಾಸಕ್ತಿ ಕಾಪಾಡಿಕೊಳ್ಳಲು ಈ ಒಡಂಬಡಿಕೆ ಅನುಕೂಲವಾಗಲಿದೆ.
- **<u>ಜಲ ಸಂಪನ್ಮೂಲ:</u>** ಜಲ ಸಂಪನ್ಮೂಲ ನಿರ್ವಹಣೆ ಮತ್ತು ಅಭಿವೃದ್ಧಿ ಸಂಬಂಧಿಸಿದಂತೆ ತಂತ್ರಜ್ಞಾನ ವಿನಿಮಯ ಮಾಡಿಕೊಳ್ಳುವ ಒಡಂಬಡಕಿಗೆ ಭಾರತದ ಜಲ ಸಂಪನ್ಮೂಲ ಸಚಿವಾಲಯದ ಕಾರ್ಯದರ್ಶಿ ಮತ್ತು ಇರಾಕ್ ಜಲ ಸಂಪನ್ಮೂಲ ಸಚಿವಾಲಯದ ಕಾರ್ಯದರ್ಶಿಗಳ ಸಮ್ಮುಖದಲ್ಲಿ ಸಹಿಹಾಕಲಾಯಿತು.
- ಇವಲ್ಲದೇ ಎರಡು ದೇಶಗಳ ನಡುವೆ ಭಾಂದವ್ಯವನ್ನು ವೃದ್ದಿಸಲು ಅಗತ್ಯವಿರುವ ಕ್ರಮವನ್ನು ಕೈಗೊಳ್ಳಲು ಇರಾಕ್ ಬದ್ದವಿರುವುದಾಗಿ ಮಲಿಕಿ ಅವರು ತಮ್ಮ ಭೇಟಿ ವೇಳೆ ಸ್ಪಷ್ಟಪಡಿಸಿದರು.

**ಜೀವಿಸಲು ಯೋಗ್ಯವಾದ ನಗರಗಳ ಪಟ್ಟಿಯಲ್ಲಿ ಮೆಲ್ಬರ್ನ್ ಗೆ ಮೊದಲ ಸ್ಥಾನ**

ಜಗತ್ತಿನಲ್ಲಿ ವಾಸಿಸಲು ಯೋಗ್ಯವೆನಿಸಿದ ನಗರಗಳ ಪೈಕಿ ಆಸ್ಟ್ರೇಲಿಯಾದ ಮೆಲ್ಬರ್ನ್ ನಗರ ಮೊದಲ ಸ್ಥಾನದಲ್ಲಿದೆ. ದಿ ಎಕನಾಮಿಕ್ ಇಂಟೆಲಿಜೆನ್ಸ್ ಯೂನಿಟ್ ನಡೆಸಿದ ಸಮೀಕ್ಷೆಯಲ್ಲಿ ಮೆಲ್ಬರ್ನ್ ಜಾಗತಿಕ ಮಟ್ಟದಲ್ಲಿ ವಾಸಿಸಲು ಯೋಗ್ಯವಾದ ನಗರವೆಂದು ಗುರುತಿಸಿಕೊಂಡಿದೆ.

- ಜಗತ್ತಿನ 140 ನಗರಗಳಲ್ಲಿ ನಡೆಸಲಾದ ಈ ಸಮೀಕ್ಷೆಯಲ್ಲಿ ಆರೋಗ್ಯ, ಶಿಕ್ಷಣ ಮತ್ತು ಮೂಲಸೌಕರ್ಯ ವಲಯಗಳಲ್ಲಿ ಮೆಲ್ಬರ್ನ್ ಅತ್ಯುತ್ತಮವೆನಿಸಿದೆ.
- ಮೆಲ್ಬರ್ನ್ ಅಲ್ಲದೇ ಆಸ್ಟ್ರೇಲಿಯಾದ ಅಡಿಲೆಡ್, ಸಿಡ್ನಿ ಮತ್ತು ಪರ್ತ್ ನಗರಗಳು ಟಾಪ್ 10 ನಗರಗಳಲ್ಲಿ ಸ್ಥಾನ ಪಡೆದಿವೆ.
- ಮೆಲ್ಬರ್ನ್ ಸತತ ಮೂರನೇ ಬಾರಿ ಈ ಕೀರ್ತಿಗೆ ಪಾತ್ರವಾಗಿರುವುದು ವಿಶೇಷ.
- ಯುದ್ದದಿಂದ ತತ್ತರಿಸಿ ಹೋಗಿರುವ ಸಿರಿಯಾದ ಡಮಾಸ್ಕ ಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದುಕೊಂಡಿದೆ.
- ಇರಾನ್ ನ ತೆಹರಾನ್, ಕೆಮರೂನ್ ನ ಡೌಲಃ ಮತ್ತು ಲಿಬಿಯಾದ ಟ್ರಿಪೊಲಿ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ಕೆಲವು ನಗರಗಳು.

**ಭಾರತ ಮೂಲದ ಸಿಇಓ ಐವನ್ ಮೆನೆಜಿಸ್ ರವರಿಗೆ 105 ಕೋಟಿ ರೂ. ವಾರ್ಷಿಕ ವೇತನ**

ಭಾರತದ ಮದ್ಯದ ಉದ್ಯಮಿ ವಿಜಯ್ ಮಲ್ಯ ಅವರ ಯುನೈಟೆಡ್ ಸ್ಪಿರಿಟ್‌ನಲ್ಲಿ ಇತ್ತೀಚೆಗಷ್ಟೆ ಪಾಲು ಖರೀದಿಸಿರುವ ಹಾಗೂ ಮದ್ಯ ತಯಾರಿಕೆಯಲ್ಲಿ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿರುವ ಬ್ರಿಟನ್ ಮೂಲದ ಡೈಜಿಯೋ ಕಂಪನಿ, ಇತ್ತೀಚೆಗಷ್ಟೇ ನೇಮಕ ಮಾಡಿಕೊಂಡಿರುವ ಭಾರತೀಯ ಮೂಲದ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಐವನ್ ಮೆನೆಜಿಸ್ ಅವರಿಗೆ 105 ಕೋಟಿ ರೂ. ವಾರ್ಷಿಕ ವೇತನ ನೀಡಲು ಮುಂದಾಗಿದೆ. ಇಷ್ಟೊಂದು ಪ್ರಮಾಣದ ವೇತನವನ್ನು ಸದ್ಯ ಭಾರತದಲ್ಲಿ ಯಾರೂ ಪಡೆಯುತ್ತಿಲ್ಲ.

- ಇಷ್ಟು ದಿನ ಉದ್ಯಮಿ ನವೀನ್ ಜಿಂದಾಲ್ ಅವರು ವಾರ್ಷಿಕ 73 ಕೋಟಿ ರೂ. ಸಂಬಳ ಪಡೆಯುವ ಮೂಲಕ ಭಾರತದಲ್ಲಿ ಅತಿ ಹೆಚ್ಚು ವೇತನ ಪಡೆಯುವ ವ್ಯಕ್ತಿಯಾಗಿದ್ದರು.
- ಕಳೆದ 13 ವರ್ಷಗಳಿಂದ ಡೈಜಿಯೋ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಐವನ್ ಅವರು ಕಳೆದ ಹಣಕಾಸು ವರ್ಷದಲ್ಲಿ 75 ಕೋಟಿ ರೂ. ವೇತನ ಪಡೆದಿದ್ದರು. ಆಗ ಅವರು ಮುಖ್ಯ ಕಾರ್ಯಾಧಿಕಾರಿಯಾಗಿದ್ದರು.
- ಜುಲೈ 1ರಿಂದ ಐವನ್ ಅವರಿಗೆ ಸಿಇಒ ಹುದ್ದೆಗೆ ಬಡ್ತಿ ನೀಡಲಾಗಿದ್ದು, ಮೂಲ ವೇತನವನ್ನು 9.6 ಕೋಟಿ ರೂ.ನಷ್ಟು ಹೆಚ್ಚಳ ಮಾಡಲು ಕಂಪನಿ ಮುಂದಾಗಿದೆ.
- ಇದಲ್ಲದೆ, ವಿವಿಧ ಭತ್ಯೆಗಳ ರೂಪದಲ್ಲಿ ವರ್ಷಕ್ಕೆ 95 ಕೋಟಿ ರೂ. ನೀಡಲು ನಿರ್ಧರಿಸಲಾಗಿದೆ ಎಂದು ಡೈಜಿಯೋ ಕಂಪನಿ ಹೇಳಿಕೊಂಡಿದೆ.

**ಹಿನ್ನೆಲೆ:**

- 53 ವರ್ಷದ ಐವನ್ ಮೆನೆಜಿಸ್ ಅವರು ಭಾರತದ ಹೆಸರಾಂತ ಶಿಕ್ಷಣ ಸಂಸ್ಥೆಗಳಾದ ದೆಹಲಿಯ ಸೇಂಟ್ ಸ್ಟೀಫನ್ ಕಾಲೇಜು ಹಾಗೂ ಅಹಮದಾಬಾದ್ ಐಐಎಂನಲ್ಲಿ ಕೆಲಸ ಮಾಡಿದ್ದಾರೆ.
- ಅಮೆರಿಕದ ಕೆಲಾಂಗ್ ಮ್ಯಾನೇಜ್‌ಮೆಂಟ್ ಸ್ಕೂಲ್‌ನಲ್ಲೂ ವ್ಯಾಸಂಗ ಮಾಡಿದ್ದಾರೆ.
- ಉದ್ಯಮಿ ವಿಜಯ್ ಮಲ್ಯ ಅವರ ಯುನೈಟೆಡ್ ಸ್ಪಿರಿಟ್ ಕಂಪನಿಯಿಂದ ಡೈಜಿಯೋ ಕಂಪನಿ ಪಾಲು ಖರೀದಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ ಎನ್ನಲಾಗಿದೆ.
- ಡೈಜಿಯೋ ಸೇರುವ ಮೊದಲು ಐವನ್ ಅವರು ನೆಸ್ಲೆಮ್, ವರ್ಲ್ಪೂಲ್‌ನಂತಹ ಕಂಪನಿಗಳಲ್ಲಿ ಕೆಲಸ ಮಾಡಿದ್ದರು.
- ಭಾರತ ಹಾಗೂ ವಿದೇಶದ ಸಿಇಒಗಳು ಪಡೆಯುತ್ತಿರುವ ಸರಾಸರಿಗಿಂತ ಐವನ್ ಅವರಿಗೆ ಹೆಚ್ಚು ವೇತನ ನೀಡಲಾಗುತ್ತಿದೆ.

**ಯಾವುದಿದು ಡೈಜಿಯೋ ಕಂಪನಿ?**

ಜಾನಿ ವಾಕ್, ಸ್ಮಿರ್ನಾಫ್, ಬೈಲೇಯಂತಹ ಜಗದ್ವಿಖ್ಯಾತ ಮದ್ಯದ ಬ್ರಾಂಡುಗಳನ್ನು ಹೊಂದಿರುವ ಡೈಜಿಯೋ ಕಂಪನಿ ವಾರ್ಷಿಕ 5 ಲಕ್ಷ ಕೋಟಿ ರೂ. ವಹಿವಾಟು ನಡೆಸುತ್ತಿದೆ. 80 ದೇಶಗಳಲ್ಲಿ ಕಚೇರಿಗಳನ್ನು ಹೊಂದಿರುವ ಈ ಕಂಪನಿ 28 ಸಾವಿರ ಸಿಬ್ಬಂದಿ ಹೊಂದಿದೆ. 180 ದೇಶಗಳಲ್ಲಿ ಡೈಜಿಯೋ ಮದ್ಯದ ಉತ್ಪನ್ನಗಳು ಮಾರಾಟವಾಗುತ್ತವೆ.

# ವ್ಯವಹಾರ

**"ಮೆಗಾ ಪುಡ್ ಪಾರ್ಕ್ ನಿರ್ಮಾಣ"ಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ**

ದೇಶದಲ್ಲಿ 12 ಮೆಗಾ ಪುಡ್ ಪಾರ್ಕ್ ಗಳ ನಿರ್ಮಾಣಕ್ಕೆ ಕೇಂದ್ರ ಆರ್ಥಿಕ ವ್ಯವಹಾರಗಳ ಮೇಲಿನ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. 11 ನೇ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೊಳಿಸಲಾದ ಸಹಾಯ ನೀತಿ ಮಾದರಿಯಲ್ಲಿ ಈ ಮೆಗಾ ಪುಡ್ ಪಾರ್ಕ್ ಗಳನ್ನು ಸ್ಥಾಪಿಸಲಾಗುವುದು. ಆಹಾರ ಭದ್ರತೆ ಕಾಯ್ದುಕೊಳ್ಳುವುದಕ್ಕಾಗಿ ಮತ್ತು ಆಹಾರ ಪದಾರ್ಥಗಳ ಸಂಸ್ಕರಣ ಸಾಮರ್ಥ್ಯವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಈ ಮೆಗಾ ಪುಡ್ ಪಾರ್ಕ್ ಗಳು ಪ್ರಮುಖ ಪಾತ್ರವಹಿಸಲಿವೆ.

- 12 ನೇ ಪಂಚವಾರ್ಷಿಕ ಯೋಜನೆಯಡಿ ಮೆಗಾ ಪುಡ್ ಪಾರ್ಕ್ ಗಳನ್ನು ರೂ 1714 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವುದು. ಜೊತೆಗೆ ಶೀತಲ ವ್ಯವಸ್ಥೆಗೆ (Cold Chain) 86 ಕೋಟಿಯನ್ನು ಕೇಂದ್ರ ಸರ್ಕಾರ ಭರಿಸಲಿದೆ.
- ಅನುಕೂಲಕರ ಪ್ರದೇಶದಲ್ಲಿ ಪುಡ್ ಪಾರ್ಕ್ ಗಳ ನಿರ್ಮಾಣಕ್ಕೆ ತಗಲುವ ವೆಚ್ಚದಲ್ಲಿ ಶೇ 50 ರಷ್ಟನ್ನು ಮತ್ತು ಗುಡ್ಡಗಾಡು ಪ್ರದೇಶಗಳಾದ ಸಿಕ್ಕಿಂ, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಖಂಡದಲ್ಲಿ ಈ ಪಾರ್ಕ್ ಗಳ ನಿರ್ಮಾಣಕ್ಕೆ ತಗಲುವ ವೆಚ್ಚದಲ್ಲಿ ಶೇ 75 ರಷ್ಟನ್ನು ಕೇಂದ್ರ ಸರ್ಕಾರ ಭರಿಸಲಿದೆ.
- ಅನುಮೋದನೆ ಪಡೆದು ಅಂತಿಮ ಅಧಿಸೂಚನೆ ಹೊರಡಿಸಿದ 30 ತಿಂಗಳ ಕಾಲವಕಾಶದೊಳಗೆ ಈ ಪಾರ್ಕ್ ಗಳನ್ನು ಸ್ಥಾಪಿಸಬೇಕು.

**ಅನುಕೂಲಗಳು**:

- ಕೃಷಿ ಉತ್ಪನ್ನ ಸಂಸ್ಕರಣೆಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ. ಇದರಿಂದ ಸೂಕ್ತ ಸಂಸ್ಕರಣೆ ಸೌಲಭ್ಯವಿಲ್ಲದೇ ಕೃಷಿ ಉತ್ಪನ್ನಗಳನ್ನು ಹಾಳಾಗುವುದನ್ನು ತಡೆಯಬಹುದಾಗಿದೆ.
- ಈ ಯೋಜನೆಯಿಂದ ಸುಮಾರು 6,000 ರೈತರಿಗೆ ನೇರವಾಗಿ ಹಾಗೂ 25000-30000 ರೈತರಿಗೆ ಪರೋಕ್ಷವಾಗಿ ನೆರವಾಗಲಿದೆ.
- ಪ್ರತಿ ಒಂದು ಮೆಗಾ ಪುಡ್ ಪಾರ್ಕ್ ಗಳಿಂದ ನೇರ ಮತ್ತು ಪರೋಕ್ಷವಾಗಿ 40,000 ಉದ್ಯೋಗಗಳು ಸೃಷ್ಟಿಯಾಗಲಿವೆ.

**ದೇಶದ ಮೊದಲ ಮಹಿಳಾ ಬ್ಯಾಂಕ್ ಸ್ಥಾಪನೆಗೆ ಕೇಂದ್ರ ಒಪ್ಪಿಗೆ**

ದೇಶದ ಮೊದಲ ಬಾರಿಗೆ ಮಹಿಳೆಯರಿಗಾಗಿಯೇ ಸ್ಥಾಪಿಸಲು ಉದ್ದೇಶಿಸಲಾಗಿರುವ "ಭಾರತೀಯ ಮಹಿಳಾ ಬ್ಯಾಂಕ್ ಲಿಮಿಟೆಡ್" ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ.

- ಪ್ರಸ್ತುಕ ಸಾಲಿನ ಬಜೆಟ್ ನಲ್ಲಿ ಹಣಕಾಸು ಸಚಿವ ಚಿದಂಬರಂ ಮಹಿಳಾ ಬ್ಯಾಂಕ್ ಸ್ಥಾಪಿಸುವ ಪ್ರಸ್ತಾವನೆಯನ್ನು ಬಜೆಟ್ ನಲ್ಲಿ ಮಂಡಿಸಿದ್ದರು. ಸದ್ಯ ಕೇಂದ್ರ ಸಚಿವ ಸಂಪುಟ ಈ ಬ್ಯಾಂಕ್ ಸ್ಥಾಪನೆಗೆ ಹಸಿರು ನಿಶಾನೆ ತೋರಿದ್ದು ವರ್ಷದ ಅಂತ್ಯಕ್ಕೆ ಕಾರ್ಯಾರಂಭ ಮಾಡಲಿದೆ.
- ರೂ 1000 ಕೋಟಿ ಪ್ರಾಥಮಿಕ ಬಂಡವಾಳ ಹೂಡಿಕೆಯೊಂದಿಗೆ ಈ ಬ್ಯಾಂಕ್ ಸ್ಥಾಪನೆಗೊಳ್ಳಲಿದ್ದು, ಐದು ವರ್ಷಗಳಲ್ಲಿ ಆದಾಯ ಸೃಷ್ಟಿಯಾಗುವ ನಿರೀಕ್ಷೆ ಹೊಂದಲಾಗಿದೆ.
- ಭಾರತೀಯ ಮಹಿಳಾ ಬ್ಯಾಂಕ್ ಲಿಮಿಟೆಡ್ ನ ಕೇಂದ್ರ ಕಚೇರಿ ನವದೆಹಲಿಯಲ್ಲಿ ಇರಲಿದೆ.
- ಪ್ರಥಮ ಬಾರಿಗೆ ಆರು ಶಾಖೆಗಳೊಂದಿಗೆ ಈ ಬ್ಯಾಂಕ್ ಕಾರ್ಯಾರಂಭ ಮಾಡಲಿದೆ. ದೇಶದ ಉತ್ತರ, ದಕ್ಷಿಣ, ಪಶ್ಚಿಮ, ಮಧ್ಯ ಮತ್ತು ಈಶಾನ್ಯ ಭಾಗಗಳಲ್ಲಿ ಶಾಖೆಗಳನ್ನು ತೆರೆಯಲಾಗುವುದು.
- ದೇಶದ ಸಾಮಾನ್ಯ ಮಹಿಳೆಯರನ್ನು ಮತ್ತು ಸ್ವ-ಸಹಾಯ ಗುಂಪುಗಳಡಿ ಸದಸ್ಯರಾಗಿರುವ ಮಹಿಳೆಯರನ್ನು ಸಬಲೀಕರಣಗೊಳಿಸುವ ದೃಷ್ಟಿಯಿಂದ ಈ ಬ್ಯಾಂಕ್ ನ್ನು ತೆರೆಯಲಾಗುತ್ತಿದೆ.

## ಭಾರತ ಮತ್ತು ಸೌದಿ ಅರೇಬಿಯಾ ವಾಣಿಜ್ಯ ಸಂಬಂಧ ವೃದ್ಧಿಗೆ "ಸೌದಿ-ಇಂಡಿಯಾ ಬಿಸಿನೆಸ್ ನೆಟ್ ವರ್ಕ್"

ಭಾರತ ಮತ್ತು ಸೌದಿ ಅರೇಬಿಯಾ ರಾಷ್ಟ್ರಗಳು "ಸೌದಿ-ಇಂಡಿಯಾ ಬಿಸಿನೆಸ್ ನೆಟ್ ವರ್ಕ್" (Saudi-India Business Network) ವ್ಯವಸ್ಥೆಯನ್ನು ಪ್ರತ್ಯೇಕವಾಗಿ ರಿಯಧ್ ಮತ್ತು ದಮಾಮ್ ನಲ್ಲಿ ಸ್ಥಾಪಿಸಲು ನಿರ್ಧರಿಸಿವೆ. SIBN ಭಾರತ ಮತ್ತು ಸೌದಿ ರಾಷ್ಟ್ರಗಳ ನಡುವಣ ಪರಸ್ಪರ ವಾಣಿಜ್ಯ,ವ್ಯಾಪಾರ, ಬಂಡವಾಳ ಹೂಡಿಕೆ ಸಂಬಂಧಗಳನ್ನು ಪ್ರೋತ್ಸಾಹ ನೀಡುವ ಒಂದು ತಟಸ್ಥ ವ್ಯವಸ್ಥೆಯಾಗಿದೆ ಕಾರ್ಯನಿರ್ವಹಿಸಲಿದೆ.

ಈ ಉದ್ದೇಶಿತ ವ್ಯವಸ್ಥೆಯಲ್ಲಿ ಉಭಯ ದೇಶಗಳ ಉದ್ಯಮಿಗಳು, ವಾಣಿಜ್ಯೋದ್ಯಮಿಗಳು, ಕೈಗಾರಿಕೋದ್ಯಮಿಗಳು ಮತ್ತು ವಾಣಿಜ್ಯ ಮಂಡಳಿ ಸದಸ್ಯರು ಭಾಗಿಯಾಗಲಿದ್ದಾರೆ. SIBN ನ ಸದಸ್ಯತ್ವ ಪಡೆಯಲು ಭಾರತ ಮತ್ತು ಸೌದಿ ರಾಷ್ಟ್ರಗಳ ಎಲ್ಲಾ ಉದ್ಯಮಿಗಳಿಗೂ ಸಮಾನ ಅವಕಾಶವಿದೆ.

**ಭಾರತ-ಸೌದಿ ಅರೇಬಿಯಾ ನಡುವಣ ವಾಣಿಜ್ಯ ಸಂಬಂಧ:**

- ಸೌದಿ ಅರೇಬಿಯಾ ಭಾರತದೊಂದಿಗೆ ವಾಣಿಜ್ಯ ಸಂಬಂಧ ಹೊಂದಿರುವ ರಾಷ್ಟ್ರಗಳ ಪೈಕಿ 4ನೇ ಅತಿ ದೊಡ್ಡ ದೇಶವಾಗಿದೆ.
- ಸೌದಿ ಅರೇಬಿಯಾ ಭಾರತಕ್ಕೆ ಪೆಟ್ರೋಲಿಯಂ ಕಚ್ಚಾ ತೈಲವನ್ನು ಒದಗಿಸುವ ಅತೀ ದೊಡ್ಡ ದೇಶವಾಗಿದೆ. ಇದು ಭಾರತದ ತೈಲ ಬೇಡಿಕೆಯ ಶೇ. 17 ರಷ್ಟನ್ನು ನೀಗಿಸುತ್ತಿದೆ.
- ಸೌದಿ ಅರೇಬಿಯಾ ಭಾರತದ ಉತ್ಪನ್ನಗಳ ಬಹುದೊಡ್ಡ ಮಾರುಕಟ್ಟೆಯಾಗಿದೆ, ಅಲ್ಲದೆ ಭಾರತದ ರಫ್ತು ಉದ್ಯಮದ ಶೇ.1.86 ರಷ್ಟು ಪಾಲನ್ನು ಹೊಂದಿದೆ
- ಭಾರತ ಸೌದಿ ಅರೇಬಿಯಾ ಉತ್ಪನ್ನಗಳ 5 ನೇ ಬಹುದೊಡ್ಡ ಮಾರುಕಟ್ಟೆಯಾಗಿದೆ.

**ಕೇಂದ್ರ ಸರ್ಕಾರದ ಬಹು ನಿರೀಕ್ಷಿತ ಕಂಪನಿಗಳ ಮಸೂದೆಯನ್ನು ಅಂಗೀಕರಿಸಿದ ರಾಜ್ಯಸಭೆ**

ಉದ್ಯೋಗಿಗಳು ಮತ್ತು ಸಣ್ಣ ಹೂಡಿಕೆದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಉದ್ದೇಶದೊಂದಿಗೆ ಕೇಂದ್ರ ಸರ್ಕಾರ ರೂಪಿಸಿರುವ ಬಲು ನಿರೀಕ್ಷಿತ ಕಂಪನಿಗಳ ಮಸೂದೆಯನ್ನು ರಾಜ್ಯಸಭೆ ಅಂಗೀಕರಿಸಿದೆ. ಅಭಿವೃದ್ಧಿಗೆ ಮತ್ತಷ್ಟು ವೇಗವನ್ನು ನೀಡಬಲ್ಲ ಮತ್ತು ಪಾರದರ್ಶಕತೆಯನ್ನು ತರಬಲ್ಲ ಈ ಮಸೂದೆಯನ್ನು ಸರ್ಕಾರ ಒಂದು ಐತಿಹಾಸಿಕ ಹೆಜ್ಜೆ ಎಂದು ವ್ಯಾಖ್ಯಾನಿಸಿದ್ದು, ರಾಷ್ಟ್ರಪತಿಯವರ ಅಂಕಿತ ಪಡೆದ ಬಳಿಕ ಈ ಕಾಯಿದೆ ಜಾರಿಗೆ ಬರಲಿದೆ. 60 ವರ್ಷಗಳ ಹಿಂದಿನ ಕಂಪನಿಗಳ ಕಾಯಿದೆಯ ಸ್ಥಾನದಲ್ಲಿ ಈ ನೂತನ ಮಸೂದೆಯನ್ನು ಸರ್ಕಾರ ಜಾರಿಗೆ ತರಲಿದ್ದು ಮಸೂದೆಯನ್ನು ರಾಜ್ಯಸಭೆ ಧ್ವನಿಮತದಿಂದ ಅಂಗೀಕರಿಸಿತು.

1956ರ ಕಂಪನಿ ಕಾಯಿದೆಗೆ ಕಳೆದ 57 ವರ್ಷಗಳ ಅವಧಿಯಲ್ಲಿ ಕನಿಷ್ಠ 25 ತಿದ್ದುಪಡಿಗಳನ್ನು ತರಲಾಗಿದ್ದು, ಇದೀಗ ಸರ್ಕಾರ ಹೊಸ ಕಾಯಿದೆಯನ್ನು ರೂಪಿಸಿದೆ.

**ಮಸೂದೆಯಲ್ಲಿನ ಪ್ರಮುಖ ಅಂಶಗಳು:**

- ಸಿಎಸ್‌ಆರ್‌ನಲ್ಲಿ ಸ್ಥಳೀಯ ಪ್ರದೇಶಗಳಿಗೆ ಆದ್ಯತೆ, ಸಿಎಸ್‌ಆರ್ ಮಾನದಂಡಗಳನ್ನು ಉಲ್ಲಂಗಿಸಿದ ಕಂಪನಿಗಳು ಇದಕ್ಕೆ ಸೂಕ್ತ ವಿವರಣೆ ನೀಡಬೇಕಲ್ಲದೆ ದಂಡವನ್ನೂ ಪಾವತಿಸಬೇಕಾಗುತ್ತದೆ.
- ಬ್ಯಾಂಕ್ ಅಥವಾ ಯಾವುದೇ ಹಣಕಾಸು ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವಲ್ಲಿ ನಡೆಯುವ ವಂಚನೆಗಳಿಗೆ ಕಡಿವಾಣ ಮತ್ತು ಸಾಂಸ್ಥಿಕ ಅಪರಾಧಿಗಳಿಗೆ ಶಿಕ್ಷೆ.
- ಉದ್ಯೋಗಿಗಳ ಭದ್ರತೆಗೆ ಹೆಚ್ಚಿನ ಒತ್ತು - ಕಂಪನಿ ದಿಢೀರನೆ ಮುಚ್ಚಿದಲ್ಲಿ ಉದ್ಯೋಗಿಗಳಿಗೆ 2 ವರ್ಷಗಳ ವೇತನ ಪಾವತಿಸುವುದು ಕಡ್ಡಾಯ.
- ಕಂಪನಿಗಳ ಲೆಕ್ಕಪರಿಶೋಧನೆಗಾಗಿ ಕಂಪನಿಯ ಸದಸ್ಯರ ಸಮ್ಮತಿಯೊಂದಿಗೆ ಪ್ರತಿ 5 ವರ್ಷಗಳಿಗೊಮ್ಮೆ ಲೆಕ್ಕಪರಿಶೋಧಕರ ನೇಮಕ. ಓರ್ವ ಲೆಕ್ಕಪರಿಶೋಧಕ ಗರಿಷ್ಠ ಎಂದರೆ 20 ಕಂಪನಿಗಳ ಲೆಕ್ಕಪತ್ರ ಪರಿಶೋಧನೆಯ ಜವಾಬ್ದಾರಿಯನ್ನು ಹೊಂದಬಹುದಾಗಿದೆ.
- ಖಾಸಗಿ ಕಂಪನಿಯಲ್ಲಿನ ನಿರ್ದೇಶಕರ ಗರಿಷ್ಠ ಸಂಖ್ಯೆಯನ್ನು 12 ರಿಂದ 15ಕ್ಕೆ ಹೆಚ್ಚಳ. ಅಗತ್ಯಬಿದ್ದಲ್ಲಿ ಈ ಸಂಖ್ಯೆಯನ್ನು ವಿಶೇಷ ನಿರ್ಣಯ ಕೈಗೊಳ್ಳುವ ಮೂಲಕ ಹೆಚ್ಚಿಸಬಹುದಾಗಿದೆ.
- ಕಂಪನಿಗಳ ಆಡಳಿತ ಮಂಡಳಿಗಳು ಮೂರನೇ ಒಂದರಷ್ಟು ಸ್ವತಂತ್ರ ನಿರ್ದೇಶಕರನ್ನು ಮತ್ತು ಕನಿಷ್ಠ ಓರ್ವ ಮಹಿಳಾ ನಿರ್ದೇಶಕರನ್ನು ಹೊಂದುವುದು ಕಡ್ಡಾಯ.
- ಪ್ರತಿ ವರ್ಷದ ಮಾ.31ಕ್ಕೆ ಕಂಪನಿಯ ಆರ್ಥಿಕ ವರ್ಷ ಮುಕ್ತಾಯಗೊಳ್ಳಬೇಕು.
- ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಕೆಲವೊಂದು ಮಾಹಿತಿಗಳನ್ನು ನಿರ್ದಿಷ್ಟ ಕಾರಣದಿಂದಾಗಿ ವರ್ಜಿಸಿದಲ್ಲಿ ಅಂತಹವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು.

- ಕಂಪನಿಯ ಆಡಳಿತ ಮಂಡಳಿಯ ನಿರ್ದೇಶಕರು ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಗಳ ಮಿತಿಮೀರಿದ ವೆಚ್ಚಗಳಿಗೆ ಕಡಿವಾಣ ಮತ್ತು ಇವರ ಪ್ರತಿಯೊಂದೂ ವೆಚ್ಚಗಳ ಬಗೆಗೆ ದಾಖಲಾತಿ. -
- ಕಂಪನಿಗಳಲ್ಲಿನ ಅಕ್ರಮ ಮತ್ತು ಭ್ರಷ್ಟಾಚಾರ ಪ್ರಕರಣಗಳ ಇತ್ಯರ್ಥಕ್ಕಾಗಿ ವಿಶೇಷ ನ್ಯಾಯಾಲಯಗಳ ರಚನೆ.

**ವಸತಿ ಸಾಲ: ವಿಶ್ವಬ್ಯಾಂಕ್ ನೊಂದಿಗಿನ ಒಪ್ಪಂದಕ್ಕೆ ಭಾರತ ಸರ್ಕಾರ ಸಹಿ**

ಆರ್ಥಿಕವಾಗಿ ಹಿಂದುಳಿದ ಮತ್ತು ಕಡಿಮೆ ಆದಾಯ ಹೊಂದಿರುವ ಬಡವರಿಗೆ ವಸತಿ ಸೌಕರ್ಯ ಕಲ್ಪಿಸುವುದಕ್ಕಾಗಿ ವಿಶ್ವಬ್ಯಾಂಕ್ ಮತ್ತು ಭಾರತ ಸರ್ಕಾರ 100 ಮಿಲಿಯನ್ ಡಾಲರ್ ಸಾಲ ಒಪ್ಪಂದಕ್ಕೆ ಸಹಿ ಹಾಕಿವೆ. ಬಡವರಿಗೆ ಮನೆ ನಿರ್ಮಿಸಿಕೊಳ್ಳಲು, ಕೊಂಡುಕೊಳ್ಳಲು ಅಥವಾ ಶಿಥಿಲ ಮನೆಯನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕಾಗಿ ಸಾಲ ಪಡೆಯಲು ಈ ಯೋಜನೆ ಅತ್ಯಂತ ಸಹಕಾರಿಯಾಗಲಿದೆ. ದೆಹಲಿಯಲ್ಲಿ ನಡೆದ ಮಾತುಕತೆಯಲ್ಲಿ ವಿಶ್ವಸಂಸ್ಥೆ, ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಮತ್ತು ಸರ್ಕಾರದ ಸಮ್ಮುಖದಲ್ಲಿ ಸಾಲ ಒಪ್ಪಂದಕ್ಕೆ ಸಹಿ ಹಾಕಲಾಯಿತು.

- ಈ "ಕಡಿಮೆ ಆದಾಯ ವಸತಿ ಫೈನಾನ್ಸ್ ಯೋಜನೆ"ಯನ್ನ ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಅನುಷ್ಠಾನಗೊಳಿಸಲಿದೆ.

**ಒಪ್ಪಂದ ಉದ್ದೇಶ:**

- ಕಡಿಮೆ ಆದಾಯ ಹೊಂದಿರುವವರು ಮನೆ ಕಟ್ಟಿಕೊಳ್ಳಲು, ಮನೆ ಕೊಂಡುಕೊಳ್ಳಲು ಅಥವಾ ಇರುವ ಮನೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಸುಸ್ಥಿರ ವಸತಿ ಸಾಲ ವ್ಯವಸ್ಥೆಯನ್ನು ಕಲ್ಪಿಸುವುದು ಈ ಒಪ್ಪಂದದ ಪ್ರಮುಖ ಉದ್ದೇಶ.
- ಈ ಮೂಲಕ ದುರ್ಬಲ ವಲಯಕ್ಕೆ ವಿತ್ತೀಯ ಸೇರ್ಪಡೆ (Financial Inclusion) ಮಾಡುವ ಸರ್ಕಾರದ ಗುರಿಯು ಸುಗುಮವಾಗಿ ಸಾಗಲಿದೆ.

**ದೇಶದ ಪ್ರಥಮ ಇಸ್ಲಾಮಿಕ್ ಹಣಕಾಸು ಸಂಸ್ಥೆ ಕೇರಳದಲ್ಲಿ ಪ್ರಾರಂಭಿಸಲು ಆರ್.ಬಿ.ಐ. ಅನುಮತಿ**

ಇಸ್ಲಾಮಿಕ್ ಹಣಕಾಸು ತತ್ವಗಳನ್ನು ಆಧರಿಸಿ ಕೇರಳ ಸರ್ಕಾರ ಆರಂಭಿಸಲು ಉದ್ದೇಶಿಸಿರುವ ಹಣಕಾಸು ಸಂಸ್ಥೆಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಶಾನೆ ತೋರಿದೆ. ಷರಿಯಾ ತತ್ವದ ಮೇಲೆ ಕಾರ್ಯನಿರ್ವಹಿಸುವ ಈ ಬ್ಯಾಂಕ್ ಸಾಲಕ್ಕೆ ಯಾವುದೇ ರೀತಿಯ ಬಡ್ಡಿಯನ್ನೂ ಪಡೆಯುವುದಿಲ್ಲ. ಹಾಗೆಯೇ ಠೇವಣಿಗೂ ಬಡ್ಡಿ ನೀಡುವುದಿಲ್ಲ. ಇದು ದೇಶದ ಮೊದಲ ಇಸ್ಲಾಮಿಕ್ ಎಂಬ ಬ್ಯಾಂಕ್ ಎಂಬ ಹೆಗ್ಗಳಿಕೆಯನ್ನು ಪಡೆಯಲಿದೆ.

**ಏನಿದು ಇಸ್ಲಾಮಿಕ್ ಬ್ಯಾಂಕ್?**

- 'ಚೆರಮನ್ ಹಣಕಾಸು ಸೇವಾ ಸಂಸ್ಥೆ'ಯನ್ನು ಕೇರಳ ಸರ್ಕಾರದ ಕೈಗಾರಿಕಾ ಅಭಿವೃದ್ಧಿ ನಿಗಮ ಆರಂಭಿಸಿದ್ದು, ಇದು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯ ರೀತಿ ಕೆಲಸ ಮಾಡಲಿದೆ.
- 100 ಕೋಟಿ ರೂ. ಬಂಡವಾಳದೊಂದಿಗೆ ಆರಂಭವಾಗಲಿರುವ ಈ ಸಂಸ್ಥೆ ಮುಂದಿನ ದಿನಗಳಲ್ಲಿ ಪರ್ಯಾಯ ಹೂಡಿಕೆ ನಿಧಿಯಾಗಿ 250 ಕೋಟಿ ರೂ. ಸಂಗ್ರಹಿಸುವ ಗುರಿಯನ್ನು ಇಟ್ಟುಕೊಂಡಿದೆ.
- ಮುಂದಿನ ದಿನಗಳಲ್ಲಿ ಒಟ್ಟಾರೆ 40000 ಕೋಟಿ ರೂ. ಬಂಡವಾಳ ಸಂಗ್ರಹಿಸುವ ಉದ್ದೇಶವನ್ನು ಈ ಸಂಸ್ಥೆ ಹೊಂದಿದೆ.
- ಈ ಸಂಸ್ಥೆಯಲ್ಲಿ ಯಾರ ಠೇವಣಿಗೂ ಬಡ್ಡಿ ನೀಡಲಾಗುವುದಿಲ್ಲ ಜೊತೆಗೆ ಸಾಲ ನೀಡಿದ್ದಕ್ಕೆ ಬಡ್ಡಿಯನ್ನೂ ಪಡೆಯುವುದಿಲ್ಲ. ಬದಲಾಗಿ ತಾನೇ ನೇರವಾಗಿ ಮೂಲಸೌಕರ್ಯ, ಸೇವಾ ವಲಯ ಹಾಗೂ ಉತ್ಪಾದನಾ ವಲಯಗಳಲ್ಲಿ ಬಂಡವಾಳ ಹೂಡಲಿದೆ.
- ಬಂದ ಲಾಭವನ್ನು ಬಡ್ಡಿಯ ಬದಲಾಗಿ ಲಾಭಾಂಶದ ಹೆಸರಲ್ಲಿ ಹೂಡಿಕೆದಾರರಿಗೆ ನೀಡಲಿದೆ. ಈ ಸಂಸ್ಥೆಯಲ್ಲಿ ಸಾಲ ದೊರೆಯಲಿದೆ. ಆದರೆ ಮದ್ಯ, ತಂಬಾಕು, ಜೂಜು ವ್ಯವಹಾರಗಳಿಗೆ ಸಾಲ ಸಿಗುವುದಿಲ್ಲ.

**ಕಿರಿಕಿರಿ ಕರೆ ಮತ್ತು ಸಂದೇಶಗಳಿಗೆ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಬ್ರೇಕ್**

ಕಿರಿಕಿರಿ ಕರೆ/ಸಂದೇಶಗಳ ಮೇಲೆ ನಿರ್ಬಂಧ ಹೇರುವ ನಿಯಮಗಳನ್ನು ಉಲ್ಲಂಘನೆ ಮಾಡಿದಲ್ಲಿ ಬ್ಯಾಂಕ್, ವಿಮಾ ಕಂಪನಿಗಳು ಮತ್ತು ರಿಯಲ್ ಎಸ್ಟೇಟ್ ಕಂಪನಿಗಳ ದೂರವಾಣಿ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ ಎಂದು ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಹೇಳಿದೆ. ಈ ಕುರಿತು ಹೊಸ ನಿಯಮಗಳನ್ನು ಜಾರಿ ಮಾಡಲಾಗಿದ್ದು, ದೂರವಾಣಿ ಕಂಪನಿಗಳ ಮೇಲೆ ದಂಡ ವಿಧಿಸುವ ನಿಯಮವೂ ಇದರಲ್ಲಿ ಸೇರಿದೆ.

**ಹೊಸ ನಿಯಮ:**

- 'ಅನಧಿಕೃತವಾಗಿ' ಚಂದಾದಾರರಿಗೆ ಕಿರಿಕಿರಿ ಕರೆಗಳು ಅಥವಾ ಸಂದೇಶಗಳು ಬಂದಲ್ಲಿ, ಯಾವ ಟೆಲಿಕಾಂ ಕಂಪನಿ ಮೂಲಕ ಕರೆ ಬಂದಿದೆಯೋ ಆ ಕಂಪನಿಗೆ 5 ಸಾವಿರ ರೂ. ದಂಡ (ಪ್ರತಿ ಕರೆಗೆ) ವಿಧಿಸಲಾಗುತ್ತದೆ.
- ದೂರವಾಣಿ ಕಂಪನಿಗಳಲ್ಲಿ ''ಟೆಲಿಮಾರ್ಕೆಟರ್'' ಎಂದು ನೋಂದಣಿಯಾಗದೇ ಬರುವ ವಾಣಿಜ್ಯಿಕ ಕಿರಿಕಿರಿ ಕರೆಗಳಿಗೆ ದಂಡ ಮತ್ತು ಸಂಪರ್ಕ ಕಡಿತ ನಿಯಮವು ಅನ್ವಯಿಸುತ್ತದೆ.
- ಈ ಕಂಪನಿಗಳ ಏಜೆಂಟರು ಒಂದು ವೇಳೆ ಇಂಥ ಕರೆ ಮಾಡಿದರೂ ಅದಕ್ಕೆ ಕಂಪನಿಗಳೇ ಜವಾಬ್ದಾರಿಯಾಗಿರುತ್ತವೆ.
- ಬ್ಯಾಂಕ್, ವಿಮಾ ಕಂಪನಿಗಳು, ಬಿಲ್ಡರ್‌ಗಳಿಂದ ಕಿರಿಕಿರಿ ಕರೆಗಳು ಹೆಚ್ಚುತ್ತಿರುವ ಬಗ್ಗೆ ಭಾರಿ ಪ್ರಮಾಣದ ದೂರು ಬರಲಾರಂಭಿಸಿದ ಕಾರಣ ಟ್ರಾಯ್ ಈ ಕ್ರಮ ಕೈಗೊಂಡಿದೆ.

**ಡಾಲರ್ ಎದುರು ರುಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾಗಿರುವ ಹಲವಾರು ಅಂಶಗಳು:ವರದಿ**

ಡಾಲರ್ ಎದುರು ರುಪಾಯಿ ಸಾರ್ವತ್ರಿಕ ಕುಸಿತ ದಾಖಲಿಸುತ್ತಿದೆ. ಇದೇ ಮೊದಲ ಬಾರಿಗೆ 65 ರ ಗಡಿ ದಾಟಿ ಕುಸಿದಿದೆ. ಇದಕ್ಕೆ ಕಾರಣವಾದರೂ ಏನು? ಈ ಕುರಿತು ಇಲ್ಲಿದೆ ಒಂದಷ್ಟು ಮಾಹಿತಿ.

**ಆಮದು-ರಫ್ತು ಅಂತರ ಹೆಚ್ಚಳ :**

ಆಮದು ಹಾಗೂ ರಫ್ತು ಅಂತರ ಹೆಚ್ಚಳದಿಂದಾಗಿ ಡಾಲರ್ ಹಾಗೂ ವಿನಿಮಯ ಮಾಡಬಹುದಾದ ಇತರೆ ಕರೆನ್ಸಿಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಇದರಿಂದ ಅನಿವಾರ್ಯವಾಗಿ ರುಪಾಯಿ ಮೌಲ್ಯ ಕುಸಿಯುತ್ತಿದೆ. ನೀತಿಯಲ್ಲಿನ ಗೊಂದಲ ಆರ್ಥಿಕ ನೀತಿಗಳಿಗೆ ಸಂಬಂಧಿಸಿ ಇರುವ ಗೊಂದಲಗಳೂ ರುಪಾಯಿ ದುರ್ಬಲಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಒಂದು ದಿನ ದೇಶದ ಕೇಂದ್ರೀಯ ಬ್ಯಾಂಕ್ ಆದ ಆರ್‌ಬಿಐ ತಾನು ಲಿಕ್ವಿಡಿಟಿಯನ್ನು ಬಿಗಿಗೊಳಿಸುವುದಾಗಿ ಹೇಳಿದರೆ ಮತ್ತೊಂದು ದಿನ ಮಾರುಕಟ್ಟೆಗೆ 100 ಶತಕೋಟಿ ಡಾಲರ್ ಬಿಡುಗಡೆ ಮಾಡುವುದಾಗಿ ತಿಳಿಸುತ್ತದೆ.

**ಕಾದಿಟ್ಟ ವಿದೇಶಿ ವಿನಿಮಯ :**

ಕಾದಿಟ್ಟ ಭಾರತದ ವಿದೇಶಿ ವಿನಿಮಯ ಕೇವಲ ಏಳು ತಿಂಗಳಿಗಷ್ಟೇ ಸಾಕಾಗಲಿದೆ. ಇತ್ತೀಚಿನ ಕೆಲ ತಿಂಗಳುಗಳಲ್ಲಿ ಕಾಯ್ದಿಟ್ಟ ವಿದೇಶಿ ವಿನಿಮಯದ ಪ್ರಮಾಣ ಕುಸಿಯುತ್ತಿದೆ. ಇದು ಕರೆನ್ಸಿ ಮಾರುಕಟ್ಟೆಗಳಲ್ಲಿ ಆರ್‌ಬಿಐ ಆಕ್ರಮಣಕಾರಿಯಾಗಿ ಮಧ್ಯಪ್ರವೇಶಿಸಲು ಬಹುದೊಡ್ಡ ಅಡ್ಡಿಯಾಗಿದೆ.

**ಕುಂಠಿತ ಬೆಳವಣಿಗೆ:**

2012- 13ರಲ್ಲಿ ಭಾರತದ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ದಶಕದಲ್ಲೇ ಅತಿ ಕಡಿಮೆ ಪ್ರಮಾಣಕ್ಕೆ ಕುಸಿದಿದೆ. ಈ ವರ್ಷವೂ ಪರಿಸ್ಥಿತಿ ಹೆಚ್ಚು ಸುಧಾರಿಸುವ ಲಕ್ಷಣ ಗೋಚರಿಸುತ್ತಿಲ್ಲ. ನಿಧಾನಗತಿಯ ಬೆಳವಣಿಗೆಯಿಂದಾಗಿ ವಿದೇಶಿ ಹೂಡಿಕೆದಾರರು ಭಾರತದ ಮಾರುಕಟ್ಟೆಯಿಂದ ಹಣ ಹಿಂತೆಗೆದುಕೊಳ್ಳುತ್ತಿದ್ದಾರೆ.

**ವಿದೇಶಿ ಹಣದ ಮೇಲೆ ಅವಲಂಬನೆ :**

ಭಾರತದ ಚಾಲ್ತಿ ಖಾತೆ ಕೊರತೆ ಕಳೆದ ಕೆಲವು ವರ್ಷಗಳಿಂದ ವಿದೇಶಿ ಹಣವನ್ನೇ ಅವಲಂಬಿಸಿದೆ. ವಿದೇಶಿ ಹೂಡಿಕೆದಾರರು ಭಾರತದಿಂದ ಹಣ ಹಿಂತೆಗೆದುಕೊಂಡರೆ ಅದು ರುಪಾಯಿ ದುರ್ಬಲವಾಗಲು ಕಾರಣವಾಗುತ್ತದೆ.

**ಅಮೆರಿಕ ಆರ್ಥಿಕತೆ ಸುಧಾರಣೆ :**

ಅಮೆರಿಕದ ಆರ್ಥಿಕತೆಯ ನಿಧಾನಗತಿಯ ಆದರೆ ಸ್ಥಿರ ಚೇತರಿಕೆಯಿಂದಾಗಿ ಇತರೆ ಕರೆನ್ಸಿಗಳ ಎದುರು ಡಾಲರ್ ಹೆಚ್ಚು ಪ್ರಬಲವಾಗುತ್ತಿದೆ. ಅಮೆರಿಕದ ನೀತಿ ಅಮೆರಿಕದ ಆರ್ಥಿಕತೆ ಚೇತರಿಕೆಯ ಹಾದಿಯಲ್ಲಿರುವ ಹಿನ್ನೆಲೆಯಲ್ಲಿ ಹಣಕಾಸು ಉತ್ತೇಜನ ಪ್ಯಾಕೇಜ್ ಹಿಂತೆಗೆದುಕೊಳ್ಳುವ ಸೂಚನೆ ಸಿಕ್ಕಿದೆ. ಇದು ಆ ದೇಶದಲ್ಲಿ ಬಡ್ಡಿದರ ಹೆಚ್ಚಳಕ್ಕೆ ಕಾರಣವಾಗುತ್ತದೆ. ಇದರ ಪರಿಣಾಮ

ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಹಣದ ಹರಿವು ಕಡಿಮೆಯಾಗುತ್ತದೆ. ಬಂಡವಾಳ ನಿಯಂತ್ರಣ ಸರ್ಕಾರ ಹಾಗೂ ಆರ್‌ಬಿಐನ ಬಂಡವಾಳದ ಹರಿವಿನ ಮೇಲೆ ತಾತ್ಕಾಲಿಕ ನಿಯಂತ್ರಣ ಹೇರುವ ನಿರ್ಧಾರ ಮಾರುಕಟ್ಟೆಯಲ್ಲಿ ಋಣಾತ್ಮಕ ಪ್ರತಿಕ್ರಿಯೆಗೆ ಕಾರಣವಾಯಿತು. ಇದು ಭಾರತೀಯ ಕಂಪನಿಗಳ ವಿದೇಶಿ ಹೂಡಿಕೆ ಮೇಲೆ ಪ್ರತಿಕೂಲ ಪರಿಣಾಮ ಬೀರುವುದಷ್ಟೇ ಅಲ್ಲದೆ ವಿದೇಶಿ ಕಂಪನಿಗಳು ಭಾರತಕ್ಕೆ ಬಂಡವಾಳ ಹೂಡಲು ಹಿಂದೇಟು ಹಾಕಲು ಕಾರಣವಾಗುತ್ತವೆ.

**ಆಹಾರ ಭದ್ರತಾ ವಿಧೇಯಕದಿಂದ ಭಾರತದ ಸಾಲ ಯೋಗ್ಯತೆ ರೇಟಿಂಗ್ ಋಣಾತ್ಮಕವಾಗಲಿದೆ: ಮೂಡೀಸ್**

ಭಾರತ ಸರ್ಕಾರ ಅನುಷ್ಠಾನಕ್ಕೆ ತಂದಿರುವ ಆಹಾರ ಭದ್ರತಾ ವಿಧೇಯಕವು ಸರಕಾರದ ಹಣಕಾಸು ಮತ್ತು ಬೃಹತ್ ಅರ್ಥ ವ್ಯವಸ್ಥೆ ದುರ್ಬಲವಾಗಲು ಕಾರಣವಾಗಲಿದೆ. ಇದು ಭಾರತದ ಸಾಲ ಯೋಗ್ಯತೆ ರೇಟಿಂಗ್ ಅನ್ನು ಋಣಾತ್ಮಕ ವಲಯಕ್ಕೆ ಎಳೆಯಲಿದೆ ಎಂದು ಜಾಗತಿಕ ರೇಟಿಂಗ್ ಏಜೆನ್ಸಿ 'ಮೂಡೀಸ್' ಎಚ್ಚರಿಸಿದೆ.

**ಋಣಾತ್ಮಕ ರೇಟಿಂಗ್:**

ಆಹಾರ ಭದ್ರತಾ ಕಾರ್ಯಕ್ರಮ ಭಾರತ ಸರಕಾರದ ಪಾಲಿಗೆ ಋಣಾತ್ಮಕ ರೇಟಿಂಗ್‌ಗೆ ದಾರಿಯಾಗಲಿದೆ. ಏಕೆಂದರೆ ಇದು ಸರಕಾರದ ವೆಚ್ಚವನ್ನು ವಿಪರೀತ ಜಾಸ್ತಿ ಮಾಡಲಿದೆ. ಆಹಾರ ಭದ್ರತಾ ಕಾರ್ಯಕ್ರಮಕ್ಕೆ ಸರಕಾರ ನೀಡಲಿರುವ ಸಬ್ಸಿಡಿಯು ಜಿಡಿಪಿಯ ಶೇ.1.2ರಷ್ಟು ಹಣವನ್ನು ನುಂಗಿಹಾಕಲಿದೆ. ಇದರಿಂದ ಸರ್ಕಾರದ ಹಣಕಾಸು ಕ್ಷೀಣಿಸಲಿದೆ ಎಂದು ಮೂಡೀಸ್ ವರದಿ ನೀಡಿದೆ. ಮೂಡೀಸ್ ಪ್ರಸ್ತುತ ಭಾರತಕ್ಕೆ 'ಬಿಎಎ3' ರೇಟಿಂಗ್ ನೀಡಿ ಸ್ಥಿರ ಮುನ್ನೋಟ ಒದಗಿಸಿದೆ. 'ಬಿಎಎ3' ಎಂದರೆ ಮಧ್ಯಮ ದರ್ಜೆಯ ರೇಟಿಂಗ್ ಆಗಿದ್ದು, ಸಾಧಾರಣ ಸಾಲ ಗಂಡಾಂತರಗಳು (ಕ್ರೆಡಿಟ್ ರಿಸ್ಕ್) ಇರುತ್ತವೆ.

**ಆಹಾರ ಭದ್ರತಾ ವಿಧೇಯಕ:**

ಲೋಕಸಭೆಯಲ್ಲಿ ಅಂಗೀಕಾರವಾದ ಆಹಾರ ಭದ್ರತಾ ವಿಧೇಯಕವು ದೇಶದ 82 ಕೋಟಿ ಬಡವರಿಗೆ ಅಗ್ಗದ ದರದಲ್ಲಿ ಆಹಾರಧಾನ್ಯ ಒದಗಿಸಲಿದೆ. ಹಸಿವು, ದಾರಿದ್ರ್ಯ ನಿರ್ಮೂಲನೆಯ ಮಹತ್ತರ ಉದ್ದೇಶ ಇಟ್ಟುಕೊಂಡು ವಿಶ್ವದಲ್ಲೇ ಮೊದಲ ಬಾರಿಗೆ ಜಾರಿಯಾಗುತ್ತಿರುವ ಜನಪರ ಕಾರ್ಯಕ್ರಮ ಇದಾಗಿದೆ. ಈ ಕಾರ್ಯಕ್ರಮ ಅನುಷ್ಠಾನಕ್ಕೆ ಸರ್ಕಾರದ ಮೇಲೆ ವಾರ್ಷಿಕ 1.30 ಲಕ್ಷ ಕೋಟಿ ರೂ. ಹಣಕಾಸಿನ ಹೊರೆ ಬೀಳಲಿದೆ.

**ಮೂಡೀಸ್ ಎಚ್ಚರಿಕೆ:**

ಈ ವರ್ಷದ ಉಳಿದ ತಿಂಗಳಲ್ಲಿ ಆಹಾರ ಭದ್ರತಾ ಕಾರ್ಯಕ್ರಮ ಜಾರಿಯಾಗುವ ಸಾಧ್ಯತೆಗಳಿವೆ. ಹಾಗಾಗಿ, ಸರ್ಕಾರದ ಹಣಕಾಸಿನ ಮೇಲೆ ಬೀಳುವ ಪರಿಣಾಮ ಈ ವರ್ಷ ಕಡಿಮೆ. ಆದರೆ, ಮುಂದಿನ ವರ್ಷದಿಂದ ಭಾರಿ ಹೊಡೆತವೇ ಬೀಳಲಿದೆ ಎಂದು ಮೂಡೀಸ್ ಎಚ್ಚರಿಸಿದೆ. ಈ ವರ್ಷಕ್ಕೆ ಆಹಾರ ಭದ್ರತೆಗೆ ನಿಗದಿಯಾಗಿರುವ ಸಬ್ಸಿಡಿ ಮೊತ್ತ 90 ಸಾವಿರ ಕೋಟಿ ರೂ. ಅದರಲ್ಲಿ 10 ಸಾವಿರ ಕೋಟಿ ರೂ. ಕಾರ್ಯಕ್ರಮ ಜಾರಿಗೆ ಬಳಕೆಯಾಗಲಿದೆ. ಭವಿಷ್ಯದಲ್ಲಿ ಸಬ್ಸಿಡಿ ವೆಚ್ಚದ ಹೊರೆ ಜಾಸ್ತಿಯಾಗಲಿದೆ. ಇದು

ಸರ್ಕಾರದ ಹಣಕಾಸಿನ ನಿರ್ವಹಣೆ ಮತ್ತು ಸದೃಢತೆಯನ್ನು ಅಲುಗಾಡಿಸಲಿದೆ. ಸರಕಾರ ನೀಡುತ್ತಿರುವ ಸಬ್ಸಿಡಿಯ ಪ್ರಮಾಣವು ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಮೂಡೀಸ್ ತಿಳಿಸಿದೆ.

**ಪರಿಣಾಮವೇನು?**

ಇತರೆ ಉದಯೋನ್ಮುಖ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದ ವಿತ್ತೀಯ ಮತ್ತು ಚಾಲ್ತಿ ಖಾತೆ ಕೊರತೆಯ ಪ್ರಮಾಣ ಏರಿಕೆಯ ಸ್ತರದಲ್ಲಿದೆ. ಏರಿಕೆಯ ವಿತ್ತೀಯ ಕೊರತೆಯು ಚಾಲ್ತಿ ಖಾತೆ ಕೊರತೆಯ ವಿಸ್ತಾರಕ್ಕೆ ಕೊಡುಗೆ ನೀಡುತ್ತಿದೆ. ಇದರಿಂದ ದೇಶೀಯ ಬೇಡಿಕೆ ಮತ್ತು ಆಮದು ಹೆಚ್ಚಳ ಆಗುತ್ತಿದೆ. ಏರಿಕೆಯ ಚಾಲ್ತಿ ಖಾತೆ ಕೊರತೆ ರೂಪಾಯಿ ಅಪಮೌಲ್ಯ ಮತ್ತು ಇಂಧನ ದರ ಹೆಚ್ಚಳಕ್ಕೂ ಕಾರಣವಾಗುತ್ತಿದೆ ಎಂದು ಮೂಡೀಸ್ ಎಚ್ಚರಿಸಿದೆ.

**ಷೇರು ಮಾರುಕಟ್ಟೆ ಬಂಡವಾಳದಲ್ಲಿ ಟಾಟಾ ಸಮೂಹ ದೇಶದಲ್ಲೇ ನಂ.1**

ಉಪ್ಪಿನಿಂದ ಸಾಫ್ಟ್ ವೇರ್ ವರೆಗೆ ಉದ್ಯಮ ವಿಸ್ತರಿಸಿರುವ ಅಪ್ಪಟ ದೇಶೀಯ ಕಂಪನಿ ಟಾಟಾ ಸಮೂಹದ ಷೇರು ಮಾರುಕಟ್ಟೆ ಬಂಡವಾಳವೀಗ 6 ಲಕ್ಷ ಕೋಟಿ ರೂ.ಗೆ ಸಮೀಪಿಸುತ್ತಿದೆ. ತೀವ್ರ ಏರಿಳಿತದ ಷೇರು ಮಾರುಕಟ್ಟೆಯಲ್ಲಿ ಅತಿ ಹೆಚ್ಚಿನ ಮಾರುಕಟ್ಟೆ ಬಂಡವಾಳ ಹೊಂದಿದ ಕಂಪನಿ ಖ್ಯಾತಿ ಟಾಟಾ ಸಮೂಹದ್ದು.

**ಟಾಟಾ ಸಮೂಹದ ಮೌಲ್ಯವೆಷ್ಟು?**

- ಷೇರು ಮಾರುಕಟ್ಟೆಯಲ್ಲಿ ನೋಂದಣಿಯಾಗಿರುವ ಟಾಟಾ ಸಮೂಹದ 32 ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ 5.90 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ.
- ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಹೊಂದಿರುವ ಮಾರುಕಟ್ಟೆ ಬಂಡವಾಳದ ದುಪ್ಪಟ್ಟು ಪ್ರಮಾಣ ಇದಾಗಿದೆ.
- ರಿಲಯನ್ಸ್ 2.75 ಲಕ್ಷ ಕೋಟಿ ರೂ., ಕುಮಾರ ಮಂಗಳಂ ಬಿರ್ಲಾ ನೇತೃತ್ವದ ಆದಿತ್ಯ ಬಿರ್ಲಾ ಸಮೂಹ 1.5 ಲಕ್ಷ ಕೋಟಿ ರೂ. ಮತ್ತು ಅನಿಲ್ ಅಂಬಾನಿ ನೇತೃತ್ವದ ರಿಲಯನ್ಸ್ ಗ್ರೂಪ್ 61 ಸಾವಿರ ಕೋಟಿ ರೂ. ಮಾರುಕಟ್ಟೆ ಬಂಡವಾಳ ಹೊಂದಿವೆ.
- ಈ ಮೂರು ಕಂಪನಿಗಳ ಒಟ್ಟು ಬಂಡವಾಳ ಸೇರಿಸಿದರೆ ಟಾಟಾ ಸಮೂಹದ ಬಂಡವಾಳ ಇನ್ನೂ ಹೆಚ್ಚಿನ ಪ್ರಮಾಣದಲ್ಲಿದೆ.

**ಬೆಳವಣಿಗೆ ಹೇಗೆ?**

- ಗಮನಾರ್ಹ ಸಂಗತಿ ಎಂದರೆ, ಟಾಟಾ ಸಮೂಹ ಮಾರುಕಟ್ಟೆ ಬಂಡವಾಳ ಕಳೆದ ಒಂದೇ ವರ್ಷದಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ.
- ಕಳೆದ ಕೆಲವು ತಿಂಗಳಿಂದ ಷೇರು ಮಾರುಕಟ್ಟೆ ತೀವ್ರ ಏರಿಳಿತದ ವಹಿವಾಟು ನಡೆಸುತ್ತಿದೆ. ಈ ಪರಿಸ್ಥಿತಿಯಲ್ಲಿ ಟಾಟಾ ಸಮೂಹ ಒಂದೇ ಹೆಚ್ಚಿನ ಬಂಡವಾಳ ಗಳಿಸಿರುವುದು ಆಶ್ಚರ್ಯಕರ ಸಂಗತಿ.

- ಕಳೆದ ಮೂರು ತಿಂಗಳಲ್ಲೇ 80 ಸಾವಿರ ಕೋಟಿ ರೂ.(ಶೇ.15ಕ್ಕಿಂತ ಅಧಿಕ)ಗಿಂತ ಹೆಚ್ಚಿನ ಮಾರುಕಟ್ಟೆ ಬಂಡವಾಳ ಟಾಟಾಗೆ ಸೇರ್ಪಡೆಯಾಗಿದೆ.
- ಸೈರಸ್ ಮಿಸ್ತ್ರಿ ಟಾಟಾ ಸಮೂಹದ ನೇತೃತ್ವ ವಹಿಸಿಕೊಂಡ ನಂತರ ಈ ವರ್ಷ ಒಟ್ಟಾರೆ 1 ಲಕ್ಷ ಕೋಟಿ ರೂ. ಬಂಡವಾಳ ಹೆಚ್ಚಾಗಿದೆ.
- ಟಾಟಾ ಸಮೂಹದ ಟಿಸಿಎಸ್‌ನ ಮಾರುಕಟ್ಟೆ ಬಂಡವಾಳವೇ 3.96 ಲಕ್ಷ ಕೋಟಿ ರೂ.ಗೆ ಏರಿಕೆ ಕಂಡಿದೆ. ಟಿಸಿಎಸ್ 4 ಲಕ್ಷ ಕೋಟಿ ರೂ. ಮಟ್ಟ ದಾಟಿದರೆ ರಿಲಯನ್ಸ್ ನಂತರ ಐತಿಹಾಸಿಕ ದಾಖಲೆಗೆ ಕಾರಣವಾಗಲಿದೆ.
- 1991ರಲ್ಲಿ ಆರ್ಥಿಕ ಬಿಕ್ಕಟ್ಟು ಕಾಣಿಸಿಕೊಂಡಾಗ ಟಾಟಾ ಸಮೂಹದ ಮಾರುಕಟ್ಟೆ ಬಂಡವಾಳ 8 ಸಾವಿರ ಕೋಟಿ ರೂ. ಇತ್ತು.

## ವಿಜ್ಞಾನ-ತಂತ್ರಜ್ಞಾನ

### ಟಾಟಾ ಮೋಟಾರ್ಸ್ ನಿಂದ ದೇಶದ ಮೊದಲ ಹೈಡ್ರೋಜನ್ ಫ್ಯೂಲ್ ಸೆಲ್ ಚಾಲಿತ ಬಸ್

ದೇಶದ ಮೊದಲ ಹೈಡ್ರೋಜನ್ ಫ್ಯೂಲ್ ಸೆಲ್ ಚಾಲಿತ ಬಸ್ ನ್ನು ಟಾಟಾ ಮೋಟಾರ್ಸ್ ಇಸ್ರೋದ ಜತೆಗೂಡಿ ಅಭಿವೃದ್ಧಿಪಡಿಸಿದೆ. ಭಾರತದಲ್ಲಿ ಇದೇ ಮೊದಲ ಬಾರಿಗೆ ಇಂತಹ ತಂತ್ರಜ್ಞಾನ ಬಳಸಿ ಚಲಿಸಲಿರುವ ಬಸ್ ಇದಾಗಿದೆ.

- ತಮಿಳುನಾಡಿನ ತಿರುವೆನ್ನೆಲ್ಲಿ ಜಿಲ್ಲೆಯ ಮಹೇಂದ್ರಗಿರಿಯಲ್ಲಿರುವ "ಲಿಕ್ವಿಡ್ ಪ್ರೊಪಲಶನ್ ಸಿಸ್ಟಂ ಸೆಂಟರ್" ನಲ್ಲಿ ಈ ಬಸ್ ನ ಪ್ರಯೋಗಾರ್ಥ ಪರೀಕ್ಷೆ ಕೈಗೊಳ್ಳಲಾಗಿತ್ತು. ಸುಮಾರು 5 ಕಿ.ಮೀ ಚಲಿಸುವ ಮೂಲಕ ಪರೀಕ್ಷೆ ಬಹುತೇಕ ಯಶಸ್ವಿಯಾಗಿದೆ ಎಂದು ಹೇಳಲಾಗಿದೆ.
- ಮುಂದಿನ ದಿನಗಳಲ್ಲಿ 1,000 -2,000 ಕಿ.ಮೀ ವರೆಗೆ ಪ್ರಾಯೋಗಿಕ ಪರೀಕ್ಷೆಗೆ ಚಾಲನೆ ನೀಡಲಾಗುವುದು ಎಂದು ಟಾಟಾ ಮೋಟಾರ್ಸ್ ಸಂಸ್ಥೆ ಹೇಳಿದೆ.
- ಎಲೆಕ್ಟ್ರೋ-ಕೆಮಿಕಲ್ ಎಂಜಿನ್ ಅನ್ನು ಈ ಬಸ್ಸಿನಲ್ಲಿ ಅಳವಡಿಸಲಾಗಿದ್ದು, ರಿವರ್ಸ್ ಎಲೆಕ್ಟ್ರಾಲೊಲಿಸಿಸ್ ತಂತ್ರಜ್ಞಾನ ಬಳಸಿ ಈ ಬಸ್ ಚಲಿಸಲಿದೆ. ಹೈಡ್ರೋಜನ್ ಅನಿಲವನ್ನು 150 ಬಾರ್ ಒತ್ತಡದಲ್ಲಿ ಸಿಲಿಂಡರ್ ನಲ್ಲಿ ಶೇಖರಿಸಿಟ್ಟು, ಬಸ್ ಚಾವಣಿಯ ಮೇಲೆ ಇಡಲಾಗುವುದು.
- ಇಂಜಿನ್ ನ್ನು ಇಂಧನ ಸೇರ್ಪಡೆಗೊಂಡಾಗ, 2 ಬಾರ್ ಒತ್ತಡಕ್ಕೆ ಪರಿವರ್ತನೆಗೊಂಡು ಆ ನಂತರ ಡೈರೆಕ್ಟ್ ಕರೆಂಟ್ ನಂತರ ಪರಿವರ್ತಿತ ವಿದ್ಯುತ್ ಆಗಿ ಬದಲಾವಣೆಗೊಂಡು ಇಂಜಿನ್ ಕಾರ್ಯನಿರ್ವಹಿಸಲಿದೆ.
- ಹೈಡ್ರೋಜನ್ ಅನಿಲ ಸುರಕ್ಷತೆ ದೃಷ್ಟಿಯಿಂದ ಉತ್ತಮವಾಗಿರುವ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಇದನ್ನು ಬಳಸಬಹುದಾಗಿದೆ.

### ಸೈಬರ್ ಅಪರಾಧ ಹರಿಯಾಣ ನಂ.1

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಇತ್ತೀಚೆಗೆ ಹೊರತಂದಿರುವ ಸೈಬರ್ ಅಪರಾಧ ಅಂಕಿ-ಅಂಶಗಳ ಪ್ರಕಾರ ಹರಿಯಾಣದಲ್ಲಿ ದೇಶದಲ್ಲೇ ಅತ್ಯಂತ ಹೆಚ್ಚು ಸೈಬರ್ ಅಪರಾಧ ದಾಖಲಾಗಿದೆ. 2011-2012 ರಲ್ಲಿ 116 ಸೈಬರ್ ಅಪರಾಧ ಪ್ರಕರಣ ದಾಖಲಾಗಿರುವುದಾಗಿ ಹೇಳಲಾಗಿದೆ.

- 113 ಸೈಬರ್ ಪ್ರಕರಣಗಳು ದಾಖಲಾಗುವ ಮೂಲಕ ಪಶ್ಚಿಮ ಬಂಗಾಳ ಎರಡನೇ ಸ್ಥಾನದಲ್ಲಿದೆ. ಮಹಾರಾಷ್ಟ್ರದಲ್ಲಿ 90 ಪ್ರಕರಣಗಳು ದಾಖಲಾಗುವ ಮೂಲಕ ಮೂರನೇ ಸ್ಥಾನದಲ್ಲಿದೆ.

- ಇದೇ ವೇಳೆ ಸೈಬರ್ ಅಪರಾಧದಲ್ಲಿ ಬಂಧಿತರಾದ ಸಂಖ್ಯೆಯಲ್ಲೂ ಹರಿಯಾಣ ದೇಶದ ಇತರೆ ರಾಜ್ಯಗಳಿಗಿಂತ ಮುಂದಿದೆ. ಕಳೆದ ವರ್ಷ ಹರಿಯಾಣದಲ್ಲಿ 137 ಸೈಬರ್ ಅಪರಾಧಿಗಳನ್ನು ಬಂಧಿಸಲಾಗಿದೆ. ಇದರಲ್ಲಿ 18-30 ವರ್ಷ ವಯಸ್ಸಿನವರೇ ಹೆಚ್ಚು.
- ಒಟ್ಟಾರೆಯಾಗಿ ಸುಮಾರು 601 ಸೈಬರ್ ಪ್ರಕರಣಗಳು ದೇಶದಾದ್ಯಂತ ದಾಖಲಾಗಿವೆ.

**ರೈಲು ಬೋಗಿಯಲ್ಲಿ "ಸೌರ ಶಕ್ತಿ" ಬಳಕೆ: ಐಐಟಿ ಮದ್ರಾಸ್ ಸಂಶೋಧನೆ**

ವಿಶ್ವದ ಅತಿ ದೊಡ್ಡ ರೈಲು ಸಂಪರ್ಕ ಜಾಲ ಎನಿಸಿರುವ ಭಾರತೀಯ ರೈಲ್ವೆಯ ರೈಲು ಬೋಗಿಗಳಲ್ಲಿ ಶೀಘ್ರವೇ ಸೌರ ಶಕ್ತಿ ಬಳಕೆಗೆ ಬರಲಿದೆ. ಸೌರ ಶಕ್ತಿ ಬಳಸಿ ರೈಲು ಬೋಗಿಗಳಲ್ಲಿ ಎಸಿ, ಬಲ್ಬ್ ಬೆಳಗಿಸುವ ರೈಲು ಬೋಗಿಗಳ ವಿನ್ಯಾಸಕ್ಕಾಗಿ ಇಂಟೆಗ್ರಲ್ ಕೋಚ್ ಫ್ಯಾಕ್ಟರಿ ಐಐಟಿ ಮದ್ರಾಸ್ ಜತೆ ಕೈಜೋಡಿಸಿದ್ದು, ಶೀಘ್ರವೇ ಈ ವಿನೂತನ ತಂತ್ರಜ್ಞಾನ ಆವಿಷ್ಕಾರಗೊಳ್ಳಲಿದೆ.

- ದೇಶದಲ್ಲಿ ಇದೊಂದು ಮೊದಲ ಪ್ರಯತ್ನವಾಗಿದೆ. ಪ್ರಸ್ತುತ ಹವಾ ನಿಯಂತ್ರಕ (ಎಸಿ) ಬೋಗಿಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ ಇವುಗಳು ಫಾಸಿಲ್ ಇಂಧನ ಅಥವಾ ಪವರ್ ಗ್ರಿಡ್ ಗಳ ಮೇಲೆ ಅವಲಂಭಿತವಾಗಿವೆ. ಆದ್ದರಿಂದ ಸೌರ ಶಕ್ತಿಯನ್ನು ಬೋಗಿಗಳಲ್ಲಿ ಬಳಸಿಕೊಂಡು ಇವುಗಳ ಅವಲಂಭನೆಯಿಂದ ಹೊರಬರಲು ಈ ಪ್ರಯತ್ನಕ್ಕೆ ಕೈಹಾಕಲಾಗಿದೆ.
- ಪ್ರಸ್ತುತ ಎರಡು ಮಾದರಿಯಲ್ಲಿ ಹವಾ ನಿಯಂತ್ರಕಗಳಿಗೆ ಬೇಕಾಗುವ ವಿದ್ಯುತ್ ಶಕ್ತಿಯನ್ನು ತಯಾರಿಸಲಾಗುತ್ತಿದೆ. ಅವುಗಳೆಂದರೆ ಡಿಸೇಲ್ ಬಳಸುವ ಪವರ್ ಕಾರು ಮತ್ತು ರೈಲಿನ ವೇಗದಿಂದ ಉತ್ಪತ್ತಿಯಾಗುವ ವಿದ್ಯುತ್.
- ಈ ನಿಟ್ಟಿನಲ್ಲಿ ಸೌರ ಶಕ್ತಿಯನ್ನು ಬಳಸುವ ಬೋಗಿಗಳನ್ನು ವಿನ್ಯಾಸಗೊಳಿಸಲು ಐಐಟಿ ಮದ್ರಾಸ್ ನೊಂದಿಗೆ ಇಂಟೆಗ್ರಲ್ ಕೋಚ್ ಫ್ಯಾಕ್ಟರಿ ಒಪ್ಪಂದ ಮಾಡಿಕೊಂಡಿದೆ. ಈ ತಂತ್ರಜ್ಞಾನ ಯಾವಾಗ ಬಳಕೆಗೆ ಸಿದ್ದವಾಗಲಿದೆ ಎಂಬುದನ್ನು ಈಗಾಗಲೇ ಹೇಳಲಾಗದ್ದಿದ್ದರು, ಶೀಘ್ರವೇ ಅಳವಡಿಸಿಕೊಳ್ಳುವ ತವಕದತ್ತ ರೈಲ್ವೆ ಇಲಾಖೆ ದೃಷ್ಟಿ ನೆಟ್ಟಿದೆ.

**ಪೃಥ್ವಿ-II ಕ್ಷಿಪಣಿ ಪ್ರಯೋಗಾರ್ಥ ಪರೀಕ್ಷೆ ಯಶಸ್ವಿ**

ಸ್ವದೇಶಿ ನಿರ್ಮಿತ ಪೃಥ್ವಿ-II ಕ್ಷಿಪಣಿ ಪ್ರಯೋಗಾರ್ಥ ಪರೀಕ್ಷೆಯನ್ನು ಒಡಿಶಾದ ಚಂಡೀಪುರದ ತೀರದಿಂದ ಯಶಸ್ವಿಯಾಗಿ ಪರೀಕ್ಷಿಸಲಾಯಿತು. ಈ ಪ್ರಯೋಗಾರ್ಥ ಪರೀಕ್ಷೆಯಿಂದ ದೇಶದ ರಕ್ಷಣಾ ವ್ಯವಸ್ಥೆಯಲ್ಲಿ ಮತ್ತೊಂದು ಮೈಲಿಗಲ್ಲು ಸಾಧಿಸಿದಂತಾಗಿದೆ.

**ಪೃಥ್ವಿ ಕ್ಷಿಪಣಿ:**

- ಪೃಥ್ವಿ ಸ್ವದೇಶಿ ನಿರ್ಮಿತ, ನೆಲದಿಂದ ನೆಲಕ್ಕೆ ಚಿಮ್ಮುವ ಕ್ಷಿಪಣಿ.
- ಅಣ್ವಸ್ತ್ರ ತಲೆಗಳನ್ನು ಹೊತ್ತೊಯ್ಯಬಲ್ಲ ಈ ಕ್ಷಿಪಣಿ 350 ಕಿ.ಮೀ ಸಾಗುವ ಸಾಮರ್ಥ್ಯವನ್ನು ಹೊಂದಿದೆ.

- ಕ್ಷಿಪಣಿಯು ಆತ್ಯಾಧುನಿಕ ನಾವಿಗೇಷನ್ ಮತ್ತು ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, ಯಶಸ್ವಿಯಾಗಿ ಗುರಿಯನ್ನು ಬೇಧಿಸುವ ಶಕ್ತಿ ಹೊಂದಿದೆ.
- ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆ (DRDO) ದ "ಇಂಟಿಗ್ರೇಟೆಡ್ ಗೈಡೆಡ್ ಮಿಸೈಲ್ ಡೆವೆಲಪ್ ಮೆಂಟ್ ಪ್ರೋಗ್ರಾಂ" ನಡಿ ಮೊದಲ ಬಾರಿಗೆ ಅಭಿವೃದ್ದಿಪಡಿಸಲಾದ ಕ್ಷಿಪಣಿ ಪೃಥ್ವಿ. 2003 ರಲ್ಲಿ ಪೃಥ್ವಿ ಕ್ಷಿಪಣಿ ವ್ಯವಸ್ಥೆಯನ್ನು ರಕ್ಷಣಾ ವ್ಯವಸ್ಥೆಗೆ ಸೇರ್ಪಡೆಗೊಳಿಸಲಾಗಿದ್ದು, ಅತ್ಯಂತ ಯಶಸ್ವಿ ಕ್ಷಿಪಣಿ ಎನಿಸಿದೆ.

**<u>ಅಂಟಾರ್ಟಿಕ ಮತ್ತು ಅರ್ಕಟಿಕ್ ನಲ್ಲಿ ಭಾರತದ ಸಂಶೋಧನಾ ಕೇಂದ್ರಗಳ ಸ್ಥಾಪನೆ</u>**

ಪ್ರಸುತ್ತ ಅಂಟಾರ್ಟಿಕದಲ್ಲಿ ಭಾರತ ಎರಡು ಸಂಶೋಧನಾ ಕೇಂದ್ರಗಳನ್ನು ಮತ್ತು ಅರ್ಕಟಿಕ್ ನಲ್ಲಿ ಒಂದು ಸಂಶೋಧನಾ ಕೇಂದ್ರವನ್ನು ತೆರದಿದೆ. ಮುಂದಿನ ದಿನಗಳಲ್ಲಿ ಈ ಕೇಂದ್ರಗಳನ್ನು ವಿಸ್ತರಿಸುವ ಉದ್ದೇಶವನ್ನು ಹೊಂದಿಲ್ಲವೆಂದು ಹೇಳಲಾಗಿದೆ. ದ್ರುವ ಭಾಗದಲ್ಲಿ ಪರಿಸರ, ಭೂಗೋಳ, ಜೈವಿಕ ಕುರಿತಾದ ಸಂಶೋಧನೆಯನ್ನು ಈ ಕೇಂದ್ರಗಳು ನಡೆಸುತ್ತಿವೆ.

- ಅಂಟಾರ್ಟಿಕದಲ್ಲಿ ಭಾರತ "ಮೈತ್ರಿ" ಮತ್ತು "ಭಾರತಿ" ಎಂಬ ಎರಡು ಸಂಶೋಧನಾ ಕೇಂದ್ರಗಳನ್ನು ಹೊಂದಿದೆ. ಭಾರತಿ ಸಂಶೋಧನಾ ಕೇಂದ್ರವನ್ನು ಮಾರ್ಚ್ 2013 ರಲ್ಲಿ ತೆರೆಯಲಾಗಿದೆ. "ಮೈತ್ರಿ" ಯನ್ನು 1989 ರಲ್ಲಿ ಸ್ಥಾಪಿಸಲಾಯಿತು.
- ಅರ್ಕಾಟಿಕ್ ನಲ್ಲಿ ಭಾರತ "ಹಿಮಾದ್ರಿ" ಎಂಬ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದೆ. 2008 ರಲ್ಲಿ ಅರ್ಕಟಿಕ್ ನ ಸ್ಪಿಟ್ಸ್ ಬರ್ಗ್ ದ್ವೀಪ ಪ್ರದೇಶದಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಹಿಮ ಪರಿಸರ ಕುರಿತಾಗಿ ಸಂಶೋಧನೆಯನ್ನು ನಡೆಸಲಾಗುತ್ತಿದೆ.

**<u>ಪ್ರಪ್ರಥಮ ಬಾರಿಗೆ ಮಾತನಾಡುವ ರೋಬೊಟನ್ನು ಬಾಹ್ಯಾಕಾಶಕ್ಕೆ ಕಳುಹಿಸಿದ ಜಪಾನ್ ವಿಜ್ಞಾನಿಗಳು</u>**

ಜಪಾನ್ ವಿಜ್ಞಾನಿಗಳು ರೂಪಿಸಿದ `ಕಿರೊಬೊ' ಎಂಬ ರೋಬೋಟ್ ಮನುಷ್ಯನಂತೆಯೇ ಮಾತಾಡುವ ಸಾಮರ್ಥ್ಯ ಹೊಂದಿದ್ದು, ಪ್ರಥಮ ಬಾರಿಗೆ ಇದನ್ನು ಬಾಹ್ಯಾಕಾಶಕ್ಕೆ ರವಾನಿಸಲಾಯಿತು. ಗಗನಯಾತ್ರಿಗಳು ಏಕಾಂಗಿತನದಿಂದ ಬಳಲುವುದನ್ನು ತಪ್ಪಿಸಲು `ಗಗನಯಾತ್ರಿ ಕಿರೊಬೊ' ನೆರವಾಗಲಿದೆ. ಎಚ್2ಬಿ ರಾಕೆಟ್ ಮೂಲಕ ಬಾಹ್ಯಾಕಾಶಕ್ಕೆ ಕಳಿಸಲಾದ ಆಹಾರ, ನೀರು ಮತ್ತಿತರ ಅಗತ್ಯ ಪದಾರ್ಥಗಳ ಜತೆಗೆ ರೋಬೋಟನ್ನೂ ರವಾನಿಸಲಾಯಿತು ಎಂದು ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೊರೇಶನ್ ಏಜೆನ್ಸಿ ಅಧಿಕಾರಿಗಳು ತಿಳಿಸಿದ್ದಾರೆ.

**ರೋಬೊ ಬಗ್ಗೆ:**

- ನವೆಂಬರ್ ತಿಂಗಳಿನಲ್ಲಿ ಬಾಹ್ಯಾಕಾಶ ಯಾತ್ರೆ ಕೈಗೊಳ್ಳಲಿರುವ ಕೊಯಿಚಿ ವಕಾಟಾ ಅವರಿಗೆ ಕಿರೊಬೊ ಸ್ನೇಹಿತನಾಗಲಿದೆ.

- 34 ಸೆಂ.ಮೀ. ಎತ್ತರದ `ಕಿರೊಬೊ' ಜಪಾನ್ ಭಾಷೆಯಲ್ಲಿ ಮಾತಾಡಬಲ್ಲದು;
- ಬಹುದಿನಗಳ ಕಾಲ ಜನರಿಂದ ದೂರವುಳಿಯುವ ವ್ಯಕ್ತಿಯ ಏಕಾಂಗಿತನ ಅರ್ಥ ಮಾಡಿಕೊಂಡು ಅವರ ಭಾವನೆಗೆ ಸ್ಪಂದಿಸಬಲ್ಲದು.
- ಟೋಕಿಯೋ ವಿಶ್ವವಿದ್ಯಾಲಯದ ವಿಜ್ಞಾನಿಗಳು ಹಾಗೂ ಎಂಜಿನಿಯರ್‌ಗಳು ಕಿರೊಬೊ `ಸೃಷ್ಟಿಕರ್ತ'ರಾಗಿದ್ದಾರೆ.
- ಕ್ಯಾಮೆರಾದ ನೆರವಿನಿಂದ ಧ್ವನಿ, ಮುಖ, ಭಾವನೆಗಳ ಗುರುತಿಸುವಿಕೆ ಸಾಮರ್ಥ್ಯದ ಹೊಂದಿರುವ ಕಿರೊಬೊ, ಸಹಜ ಶೈಲಿಯಲ್ಲೇ ಮಾತಾಡಬಲ್ಲದು.
- ತನ್ನನ್ನು ಅನಾವರಣ ಮಾಡಿದ ದಿನದಂದು ಸುದ್ದಿಗಾರರ ಜತೆ ಮಾತಾಡಿದ್ದ ಕಿರೊಬೊ, `ಮಾನವರು ಹಾಗೂ ರೋಬೊಟ್‌ಗಳು ಒಟ್ಟಾಗಿ ಬದುಕುವ ಜಗತ್ತನ್ನು ಸೃಷ್ಟಿಸಲು ನಾನು ನೆರವಾಗಲಿದ್ದೇನೆ' ಎಂದು ಹೇಳಿತ್ತು.

**ಆರ್‌ಡಿಎಕ್ಸ್ ಸ್ಫೋಟಕಗಳನ್ನು ಪತ್ತೆಹಚ್ಚುವ ಕಿಟ್ ತಯಾರಿಸಿದ ಭಾರತದ ಡಿ.ಆರ್.ಡಿ.ಒ. ಸಂಸ್ಥೆ**

ಇದೇ ಪ್ರಥಮ ಬಾರಿಗೆ ಭಾರತ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನ ಸಾಧನವೊಂದನ್ನು ತಯಾರಿಸಿ ಮಾರುಕಟ್ಟೆಗೆ ಬಿಡಲು ಅಮೆರಿಕ ಮುಂದಾಗಿದೆ. ಸೌತ್ ಕ್ಯಾರೊಲಿನಾ ಮೂಲದ ಕ್ರೋವ್ ಅಂಡ್ ಕಂಪೆನಿ ಈ ಕಿಟ್‌ನ್ನು ತಯಾರಿಸಲಿದೆ. ಇಲ್ಲಿನ ಶ್ವೇತಭವನದ ಹತ್ತಿರವೇ ಇರುವ ಅಮೆರಿಕದ ವಾಣಿಜ್ಯೋದ್ಯಮ ಸಂಘದ ಕಟ್ಟಡದಲ್ಲಿ ಈ ಸ್ಫೋಟಕ ಪತ್ತೆ ಕಿಟ್‌ನ್ನು ಅನಾವರಣಗೊಳಿಸಲಾಯಿತು. ತಂತ್ರಜ್ಞಾನದ ವಿನಿಮಯವು ಕೇವಲ ಒಮ್ಮುಖವಾಗಿರದೆ ದ್ವಿಮುಖಿ ಯಾಗಿರ ಬೇಕು ಎಂಬುದು ನಮ್ಮ ಆಶಯ. ಈ ಕಿಟ್ ಉತ್ಪಾದನೆಗೆ ಸಂಬಂಧಿಸಿದಂತೆ ಭಾರತ- ಅಮೆರಿಕ ನಡುವೆ ಈಗ ಏರ್ಪಟ್ಟಿರುವ ಒಪ್ಪಂದ ಅದಕ್ಕೊಂದು ಅತ್ಯುತ್ತಮ ಉದಾಹರಣೆ' ಎಂದು ಮಾಜಿ ರಕ್ಷಣಾ ಕಾರ್ಯದರ್ಶಿ ವಿಲಿಯಮ್ ಎಸ್.ಕೊಹೆನ್ ಹೇಳಿದರು.

**ಸ್ಫೋಟಕ ಪತ್ತೆ ಕಿಟ್ ನ ಬಗ್ಗೆ :**

- ಡಿಆರ್‌ಡಿಒ ಅಧೀನ ಘಟಕವಾದ ಹೈ ಎನರ್ಜಿ ಮಟೀರಿಯಲ್ ರೀಸರ್ಚ್ ಲ್ಯಾಬೊರೇಟರಿ ಈ ಕಿಟ್ ಅಭಿವೃದ್ಧಿಪಡಿಸಿದೆ.
- ನೈಟ್ರೊ ಎಸ್ಟರ್, ನೈಟ್ರಮೈನ್, ಟ್ರೈನೈಟ್ರೊಟಾಲಿನ್, ಡೈನಮೈಟ್ ಅಥವಾ ಬ್ಲ್ಯಾಕ್ ಪೌಡರ್ ಬಳಕೆಯಿಂದ ತಯಾರಾದ ಯಾವುದೇ ಸ್ಫೋಟಕವನ್ನು ಸಾಧಾರಣ ತಾಪಮಾನದ ಸ್ಥಿತಿಯಲ್ಲಿ ಇದು 2-3 ನಿಮಿಷಗಳೊಳಗೆ ಪತ್ತೆ ಮಾಡುತ್ತದೆ.
- ಈ ಹಿಂದಿನ ಎಲೆಕ್ಟ್ರಾನಿಕ್ ಸ್ಫೋಟಕ ಪತ್ತೆ ಸಾಧನಗಳಿಂದ ಆರ್‌ಡಿಎಕ್ಸ್ ಬಳಸಿ ತಯಾರಾದ ಪ್ಲ್ಯಾಸ್ಟಿಕ್ ಸ್ಫೋಟಕಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುತ್ತಿರಲಿಲ್ಲ. ಆದರೆ ರಾಸಾಯನಿಕ ಆಧಾರಿತ ಈ ಕಿಟ್ ಅದನ್ನೂ ಪತ್ತೆ ಹಚ್ಚಲಿದೆ.
- ಒಂದೆಡೆಯಿಂದ ಮತ್ತೊಂದೆಡೆಗೆ ಸುಲಭವಾಗಿ ಕೊಂಡೊಯ್ಯಬಹುದಾದ ಈ ಕಿಟ್ ಕಲುಷಿತ ವಾತಾವರಣದಲ್ಲೂ ನಿಖರ ಫಲಿತಾಂಶ ನೀಡುತ್ತದೆ ಎನ್ನಲಾಗಿದೆ.

## ಗುರು ಗ್ರಹದ ಚಂದ್ರ ಯುರೋಪಾದಲ್ಲಿ ಜೀವಿಗಳಿಗೆ ವಾಸಯೋಗ್ಯವಾದ ಪರಿಸರ: ವಿಜ್ಞಾನಿಗಳ ಶಂಕೆ

ಭೂಮಿಯಲ್ಲದೇ, ಬ್ರಹ್ಮಾಂಡದ ಯಾವ ಗ್ರಹದಲ್ಲಿ ವಾಸಯೋಗ್ಯ ವಾತಾವರಣವಿದೆ ಎಂಬುದರ ಕುರಿತು ವಿಜ್ಞಾನಿಗಳು ತಲೆಕೆಡಿಸಿಕೊಳ್ಳುತ್ತಿರುವುದು ಹಳೇ ವಿಷಯ. ಮಂಗಳನಿಂದ ಹಿಡಿದು ಶನಿ ಗ್ರಹದ ವರೆಗೆ ಈ ನಿಟ್ಟಿನಲ್ಲಿ ಸಂಶೋಧನೆ ಸಾಗಿದೆ. ಆದರೆ, ಇದೀಗ ಗುರು ಗ್ರಹದ ಚಂದ್ರ ಯುರೋಪಾದಲ್ಲಿ ಜೀವಿಗಳಿಗೆ ವಾಸಯೋಗ್ಯವಾದ ಪರಿಸರ ಇದೆ ಎಂಬ ಬಲವಾದ ಶಂಕೆಯನ್ನು ನಾಸಾ ವಿಜ್ಞಾನಿಗಳು ವ್ಯಕ್ತಪಡಿಸಿದ್ದಾರೆ.

**ಸಂಶೋಧನೆ ಹೇಗೆ?**

- 1979ರಲ್ಲಿ ನಾಸಾದ ವಾಯೇಜರ್-2 ಗಗನ ನೌಕೆ ಮತ್ತು 1990ರಲ್ಲಿ ಗೆಲಿಲಿಯೋ ಗಗನನೌಕೆಗಳು ಯುರೋಪಾವನ್ನು ಸಂಶೋಧನೆಗೊಳಪಡಿಸಿತ್ತು. ಸದ್ಯ ವಿವಿಧ ರೀತಿಯಲ್ಲಿ ವಿಜ್ಞಾನಿಗಳು ಯುರೋಪಾದ ಬಗ್ಗೆ ಸಂಶೋಧನೆ ನಡೆಸಿದ್ದು,
- ಯುರೋಪಾದ ಮೇಲ್ಮೈಯಲ್ಲಿ ಮಂಜಿನ ಹೊದಿಕೆ ಕಂಡು ಬಂದಿದೆ. ಅದರಂತೆ, ಆ ಗ್ರಹದಲ್ಲಿ ನೀರಿನಂಶ ಮತ್ತು ಅನೇಕ ಸೂಕ್ಷ್ಮಾಣು ಜೀವಿಗಳ ಆವಾಸ ಸ್ಥಾನವಿರಬಹುದು ಎಂದು ಹೇಳಲಾಗಿದೆ.
- ನಾಸಾದ ವಿಜ್ಞಾನಿಗಳ ಪ್ರಕಾರ, ಯುರೋಪಾದ ಮೇಲ್ಮೈಗೆ ಮಾನವ ರೊಬೋಟ್ ಒಂದನ್ನು ಕಳುಹಿಸಿದರೆ, ಅಲ್ಲಿ ಏನಿದೆ ಎಂಬುದನ್ನು ಸಂಶೋಧಿಸಲು ಸಾಧ್ಯ.
- ಈ ಸಾಧ್ಯತೆಗಳಿಗಾಗಿ ಸಂಶೋಧನೆ ಸಾಗಿದ್ದು, ಯುರೋಪಾದ ಯಾವ ಭಾಗದಲ್ಲಿ ರೊಬೋಟ್ ಇಳಿಸಬೇಕು, ಯಾವೆಲ್ಲ ರೀತಿಯ ಅಧ್ಯಯನಗಳಾಗಬೇಕು, ತಂತ್ರಜ್ಞಾನ ಹೇಗಿರಬೇಕು ಎಂಬ ನಿಟ್ಟಿನಲ್ಲಿ ಅಧ್ಯಯನ ಸಾಗಿದೆ.
- ಸೌರ ಮಂಡದಲ್ಲಿ, ಜೀವಿಗಳ ಆವಾಸವಿರುವ ಪ್ರಬಲ ಸಾಧ್ಯತೆ ಯುರೋಪಾದಲ್ಲಿದೆ. ಈ ಗ್ರಹದಲ್ಲಿ ಸಮೂಹ ಸಂರಚನೆಗಳಿದ್ದು, ಕೆಂಪಾದ ಕಲೆಗಳಿವೆ. ಇದು ಮಂಜಿನಿಂದಾಗಿರಬಹುದೇ, ಈ ಹೊದಿಕೆಯೊಳಗೆ ನೀರಿನ ಅಂಶವಿರಬಹುದೇ ಎಂಬ ಸಂಶಯಗಳಿವೆ.
- ಅಲ್ಲದೇ ಗುರು ಗ್ರಹ ಮತ್ತು ಯುರೋಪಾದ ನಡುವಿನ ಗುರುತ್ವಾಕರ್ಷಣ ಶಕ್ತಿ ಇತ್ಯಾದಿಗಳ ಕುರಿತೂ ವಿವಿಧ ಆಯಾಮದಲ್ಲಿ ಸಂಶೋಧನೆ ಸಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

## ಮಂಗಳ ಗ್ರಹಕ್ಕೆ ವಲಸೆ ಹೋಗಿ ಶಾಶ್ವತವಾಗಿ ನೆಲೆಸಲು ಲಕ್ಷಕ್ಕೂ ಹೆಚ್ಚು ಅರ್ಜಿ

ಭೂಮಿಯಿಂದ ಮಂಗಳ ಗ್ರಹಕ್ಕೆ ವಲಸೆ ಹೋಗಿ ಮಂಗಳ ಗ್ರಹದಲ್ಲಿ ನೆಲೆಯಾಗಲು 1 ಲಕ್ಷಕ್ಕೂ ಅಧಿಕ ಮಂದಿ ತಮ್ಮ ಅರ್ಜಿ ಗುಜರಾಯಿಸಿದ್ದಾರೆ. ಕೆಂಪು ಗ್ರಹದಲ್ಲಿ ವಸಾಹತು ಸ್ಥಾಪಿಸುವ ಬಹು ಶತಕೋಟಿ ಡಾಲರ್ ವೆಚ್ಚದ 'ದಿ ಮಾರ್ಸ್ ಒನ್' ಯೋಜನೆಗೆ 2022ರಲ್ಲಿ ಚಾಲನೆ ಲಭಿಸಲಿದೆ. ಸದ್ಯದ ಯೋಜನೆಯ ಪ್ರಕಾರ ಮಂಗಳನಲ್ಲಿಗೆ ತೆರಳಿದ ಈ ಗಗನ ಯಾತ್ರಿಗಳು ಮತ್ತೆ ಭೂಮಿಗೆ ವಾಪಾಸಾಗದೆ ಅಲ್ಲೇ ನೆಲೆಯಾಗಲಿರುವ ಕಾರಣ ರಿಟರ್ನ್ ಬುಕ್ಕಿಂಗ್ ಇಲ್ಲ!

ಮಂಗಳ ಗ್ರಹದಲ್ಲಿ ಜೀವಿಗಳು ವಾಸಿಸಲು ಯೋಗ್ಯವಾದ ವಾತಾವರಣ ಇದೆಯೇ? ಎಂಬ ಬಗ್ಗೆ ವಿಜ್ಞಾನಿಗಳೂ ಇನ್ನೂ ಸಂಶೋಧನೆಯಲ್ಲಿ ಮುಳುಗಿರುವಂತೆ ಜನರು ಮಾರ್ ಒನ್ ಯೋಜನೆಯಡಿ ಮಂಗಳ ಗ್ರಹಕ್ಕೆ ವಲಸೆ ಹೋಗಿ ಅಲ್ಲಿ ಶಾಶ್ವತವಾಗಿ ನೆಲೆಸುವ ತಮ್ಮ ಹೆಬ್ಬಯಕೆಯನ್ನು ತೋರ್ಪಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಈ ಸಂಖ್ಯೆ ಇನ್ನಷ್ಟು ಹೆಚ್ಚುವ ಸಾಧ್ಯತೆಗಳಿದ್ದು,

ಸದ್ಯ ಬಹಳಷ್ಟು ಜನರು ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದು ಮಾರ್ ಒನ್‌ನ ಸಿಇಒ ಮತ್ತು ಸಹಸ್ಥಾಪಕ ಬಾಸ್ ಲಾನ್ಸ್‌ಡ್ರಾಪ್ ತಿಳಿಸಿದ್ದಾರೆ.

**ಏನಿದು ಯೋಜನೆ?**

- 18 ವರ್ಷ ಮೇಲ್ಪಟ್ಟವರಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಮಂಗಳನಲ್ಲಿ ವಾಸ್ತವ್ಯ ಹೂಡ ಬಯಸುವವರು ತಮ್ಮ ಸಂಪೂರ್ಣ ವಿವರಗಳನ್ನು ಆಯಾಯ ದೇಶಗಳಿಗೆ ನಿಗದಿಪಡಿಸಲಾದ ಅರ್ಜಿ ಶುಲ್ಕವನ್ನು ಪಾವತಿಸಿ, ಭರ್ತಿ ಮಾಡಿ ಸಲ್ಲಿಸಬಹುದಾಗಿದೆ.
- ಅಮೆರಿಕದ ನಾಗರಿಕರಿಗೆ ಅರ್ಜಿ ಶುಲ್ಕ 38 ಡಾಲರ್‌ಗಳಾಗಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ.
- ಈ ಅರ್ಜಿಗಳಲ್ಲಿ ವಿವಿಧ ಖಂಡಗಳ 40 ಗಗನಯಾತ್ರಿಗಳ ತಂಡವನ್ನು ವರ್ಷಾಂತ್ಯದೊಳಗಾಗಿ ಆಯ್ಕೆ ಮಾಡಲಾಗುವುದು.
- ಇವರಲ್ಲಿ ಎರಡು ಪುರುಷ ಮತ್ತು ಮಹಿಳಾ ಗಗನಯಾತ್ರಿಗಳ ತಂಡ 2022ರ ಸೆಪ್ಟಂಬರ್ ವೇಳೆಗೆ ಮಂಗಳನಲ್ಲಿಗೆ ತೆರಳಲಿದ್ದು, 2023ರ ಎಪ್ರಿಲ್ ವೇಳೆಗೆ ಮಂಗಳನಲ್ಲಿ ಇಳಿಯಲಿದೆ.
- ನಾಲ್ಕು ಮಂದಿ ಗಗನಯಾತ್ರಿಗಳ ಮತ್ತೊಂದು ತಂಡ ಎರಡು ವರ್ಷಗಳ ಬಳಿಕ ಮಂಗಳ ಗ್ರಹದತ್ತ ಹಾರಲಿದೆ.
- ಯಾತ್ರಿಗಳು ಮತ್ತೆ ಭೂಮಿಗೆ ವಾಪಾಸಾಗದೆ ಅಲ್ಲೇ ನೆಲೆಯಾಗಲಿರುವರು. ಈ ಹಿನ್ನೆಲೆಯಲ್ಲಿ ಗಗನಯಾತ್ರಿಗಳಿಗೆ ಆರೋಗ್ಯ ರಕ್ಷಣೆ, ಆಹಾರಧಾನ್ಯಗಳನ್ನು ಬೆಳೆಸುವ ಕುರಿತಂತೆ ಎಂಟು ವರ್ಷಗಳ ತರಬೇತಿ ನೀಡಲಾಗುವುದು ಎಂದು ವೆಬ್‌ಸೈಟ್‌ನಲ್ಲಿ ವಿವರಿಸಲಾಗಿದೆ.

**"ಇಂಟರ್ ನೆಟ್.ಆರ್ಗ್ (Internet.Org)" ಅಭಿವೃದ್ಧಿ ತಂಡಕ್ಕೆ ಫೇಸ್ ಬುಕ್ ಸೇರ್ಪಡೆ**

ಜಾಗತಿಕ ಮಟ್ಟದಲ್ಲಿ ಪ್ರತಿಯೊಬ್ಬರಿಗೂ ಇಂಟರ್ ನೆಟ್ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ "ಇಂಟರ್ ನೆಟ್.ಆರ್ಗ್" ಕಾರ್ಯಕ್ರಮಕ್ಕೆ ಫೇಸ್ ಬುಕ್ ಕೈಜೋಡಿಸಿದೆ. ಫೇಸ್ ಬುಕ್ ನ ಸಂಸ್ಥಾಪಕ ಮತ್ತು ಸಿಇಓ ಆಗಿರುವ ಮಾರ್ಕ್ ಜುಕರ್ ಬರ್ಗ್ ಅವರು ಈ ಕಾರ್ಯಕ್ರಮದ ಮುಖ್ಯಸ್ಥಿಕೆಯನ್ನು ವಹಿಸಿಕೊಳ್ಳಲಿದ್ದಾರೆ.

**ಏನಿದು ಇಂಟರ್ ನೆಟ್.ಆರ್ಗ್:**

- ಜಗತ್ತಿನ ಪ್ರತಿಯೊಬ್ಬರು ಇಂಟರ್ ನೆಟ್ ಅನ್ನು ಬಳಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ಈ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ತಂತ್ರಜ್ಞಾನ ದಿಗ್ಗಜರಾದ ನೋಕಿಯಾ, ಎರಿಕ್ ಸನ್, ಒಪೆರಾ, ಕ್ವಲಕಂ, ಸ್ಯಾಮಸಂಗ್ ಮತ್ತು ಮೀಡಿಯಾ ಟೆಕ್ ಸಂಸ್ಥೆಗಳು ಈ ಕಾರ್ಯಕ್ರಮದ ರೂವಾರಿಗಳು. ಈ ತಂಡಕ್ಕೆ ಹೊಸ ಸೇರ್ಪಡೆ ಫೇಸ್ ಬುಕ್.
- ಈ ವಿನೂತನ ಕಾರ್ಯಕ್ರಮದಡಿ ಅಗ್ಗದರದ ಆದರೆ ಉತ್ಕೃಷ್ಟ ದರ್ಜೆಯ ಸ್ಮಾರ್ಟ್ ಫೋನ್ ಗಳನ್ನು ಅಭಿವೃದ್ಧಿಪಡಿಸಿ, ವಿಶ್ವದ 5 ಬಿಲಿಯನ್ ಜನ ಸಮುದಾಯಕ್ಕೆ ಅಂತರ್ಜಾಲ ಸೌಲಭ್ಯ ಒದಗಿಸುವುದು ಗುರಿಯಾಗಿದೆ.

- ಇದಲ್ಲದೇ, ಕಡಿಮೆ ಡಾಟ ಬಳಸುವ ಅಪ್ಲಿಕೇಷನ್ ಅಭಿವೃದ್ಧಿಪಡಿಸಿ ಇಂಟರ್ ನೆಟ್ ಬಳಕೆಗೆ ತಗಲುವ ವೆಚ್ಚವನ್ನು ಕಡಿಮೆಗೊಳಿಸುವತ್ತಲು ತಂತ್ರಜ್ಞಾನ ರೂಪಿಸಲಿದೆ.

**ದೇಶದ ಮೊದಲ ರಕ್ಷಣಾ ಉಪಗ್ರಹ GSAT-7 ಯಶಸ್ವಿ ಉಡಾವಣೆ**

ಭಾರತದ ಮೊದಲ ಸ್ವದೇಶಿ ನಿರ್ಮಿತ ರಕ್ಷಣಾ ಉಪಗ್ರಹ ಜಿ ಸ್ಯಾಟ್-7 ಯಶಸ್ವಿಯಾಗಿ ಉಡಾವಣೆಯಾಗಿದೆ. ಭಾರತದ ಭೂಭಾಗಗಳು ಹಾಗೂ ಸಾಗರದ ಮೇಲೆ ಹದ್ದಿನ ಕಣ್ಣಿಡಲು ನೆರವಾಗಲಿರುವ ಈ ಉಪಗ್ರಹವನ್ನು ಫ್ರೆಂಚ್ ಗಯಾನಾದ ಕೌರು ಬಾಹ್ಯಾಕಾಶ ನೆಲೆಯಿಂದ ಉಡಾಯಿಸಲಾಯಿತು ಎಂದು ಭಾರತೀಯ ಬಾಹ್ಯಾಕಾಶ ಅಧ್ಯಯನ ಸಂಸ್ಥೆ ಇಸ್ರೋ ತಿಳಿಸಿದೆ. ಭೂಮಧ್ಯರೇಖೆಯಿಂದ 36 ಸಾವಿರ ಕಿಲೋಮೀಟರುಗಳ ದೂರವನ್ನು ಇದು 34 ನಿಮಿಷಗಳಲ್ಲಿ ಕ್ರಮಿಸಿತು. ಸೆ.14ರ ನಂತರ ಪೂರ್ವ ರೇಖಾಂಶದಿಂದ 74 ಡಿಗ್ರಿ ಕಕ್ಷೆಯಲ್ಲಿ ಕಾರ್ಯಾಚರಣೆ ಆರಂಭಿಸುವ 'ಜಿಸ್ಯಾಟ್' ಬಹು ಬ್ಯಾಂಡ್ ಸಂಪರ್ಕಕ್ಕೆ ಇದು ನೆರವಾಗಲಿದೆ. 2.5 ಟನ್ ತೂಕವಿರುವ ಈ ಉಪಗ್ರಹವನ್ನು ಹೊತ್ತ ರಾಕೆಟ್ ಕಕ್ಷೆ ತಲುಪಿದ ತರುವಾಯ ಹಾಸನದಲ್ಲಿರುವ ಬಾಹ್ಯಾಕಾಶ ಸಂಶೋಧನಾ ಕೇಂದ್ರಕ್ಕೆ ಸಂದೇಶ ರವಾನಿಸಿದೆ ಎಂದು ಇಸ್ರೋ ಪ್ರಕಟಣೆಯಲ್ಲಿ ತಿಳಿಸಿದೆ.

**ವಿಶೇಷತೆಗಳೇನು?**

- ನೌಕಾದಳಕ್ಕೆ ನೆರವಾಗುವ ಮಾಹಿತಿಗಳನ್ನು ರವಾನಿಸುವ ಜಿಸ್ಯಾಟ್ -7 ಉಪಗ್ರಹದ ಉಡಾವಣೆಗಾಗಿ 470 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.
- ಇಷ್ಟು ದಿನ 'ಇನ್‌ಮಾರ್‌ಸ್ಯಾಟ್' ನಂತಹ ನೆರೆಯ ದೇಶಗಳ ಉಪಗ್ರಹಗಳಿಂದ ಅಗತ್ಯ ಮಾಹಿತಿ ಪಡೆಯಲಾಗುತ್ತಿತ್ತು. ಆದರೆ, ಜಿಸ್ಯಾಟ್-7ನಿಂದಾಗಿ ಅನ್ಯ ದೇಶಗಳನ್ನು ಅಂಗಲಾಚುವ ಅನಿವಾರ್ಯತೆ ಕಡಿಮೆಯಾಗುತ್ತದೆ ಎಂದು ಹೇಳಲಾಗಿದೆ.
- ಮುಂದುವರಿದ ತಂತ್ರಜ್ಞಾನವನ್ನು ಆಧರಿಸಿ ಜಿ ಸ್ಯಾಟ್ ಉಪಗ್ರಹ ನಿರ್ಮಿಸಲಾಗಿದೆ. ಇದು ಸಿ ಬ್ಯಾಂಡ್, ಎಸ್ ಬ್ಯಾಂಡ್, ಕೆಯು ಬ್ಯಾಂಡ್ ಮತ್ತು ಯುಎಚ್ಎಫ್ ಬ್ಯಂಡ್(ಅಲ್ಟ್ರಾ ಹೈ ಫ್ರೀಕ್ವೆನಿಸಿ)ನಂತಹಾ ಬಹು ಬ್ಯಾಂಡ್ ಸೇವೆಯನ್ನು ನೀಡುತ್ತದೆ.
- ಸೆಪ್ಟೆಂಬರ್ ಕೊನೆಯವಾರದಿಂದ ಕಾರ್ಯಾರಂಭಮಾಡುವ ಈ ಉಪಗ್ರಹದ ನಿರ್ಮಾಣಕ್ಕೆ 185 ಕೋಟಿ ರೂಪಾಯಿಗಳು ತಗುಲಿವೆ.
- ಸೌರ ವಿದ್ಯುತ್ ಸಹಾಯದಿಂದ ಉಪಗ್ರಹವು ಕಾರ್ಯನಿರ್ವಹಿಸಲಿದೆ. ಗ್ರಹಣದ ಸಂದರ್ಭದಲ್ಲಿ ಇದಕ್ಕೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಲಾಗಿದ್ದು, ಅಂತಹ ಸಮಯದಲ್ಲಿ ಲಿಥಿಯಂ ಐಯಾನ್ ಬ್ಯಾಟರಿಗಳಿಂದ ಎಂದಿನಂತೆ ಇದು ಕಾರ್ಯನಿರ್ವಹಿಸಲಿದೆ.
- ಸೌರಶಕ್ತಿಯ ನೆರವಿಲ್ಲದೆ 108 ಗಂಟೆಗಳ ಕಾಲ ಬ್ಯಾಟರಿಗಳು ಸಹಾಯದಿಂದ 'ಜಿಸ್ಯಾಟ್ -7' ಕೆಲಸ ಮಾಡಲಿದೆ.

**ಹೈದ್ರಾಬಾದ್ ನ ಭಾರತ್ ಬಯೋಟೆಕ್ ನಿಂದ ಟೈಫಾಯಿಡ್ ಲಸಿಕೆ "ಟೈಪ್ ಬಾರ್-ಟಿಸಿವಿ" ಬಿಡುಗಡೆ**

ವಿಶ್ವದ ಮೊದಲ ಪ್ರಾಯೋಗಿಕವಾಗಿ ಪರೀಕ್ಷಿಸಲಾದ ಟೈಫಾಯಿಡ್ ಲಸಿಕೆಯನ್ನು ಹೈದ್ರಾಬಾದ್ ನ ಭಾರತ್ ಬಯೋಟೆಕ್ ಸಂಸ್ಥೆ ಇತ್ತೀಚೆಗೆ ಬಿಡುಗಡೆಗೊಳಿಸಿತು.

- ಟೈಫ್ ಬಾರ್-ಟಿಸಿವಿ (Typbar-TCV) ಹೆಸರಿನ ಈ ಲಸಿಕೆ ದೀರ್ಘಕಾಲ ಟೈಫಾಯಿಡ್ ನಿಂದ ರಕ್ಷಿಸಲಿದೆ ಎಂದು ಸಂಸ್ಥೆ ತಿಳಿಸಿದೆ.
- ಸಂಸ್ಥೆಯ ಹೇಳಿಕೆಯ ಪ್ರಕಾರ ಟೈಫ್ ಬಾರ್-ಟಿಸಿವಿ ಲಸಿಕೆಯನ್ನು ಆರು ತಿಂಗಳ ಮಕ್ಕಳಿಗೂ ನೀಡಬಹುದಾಗಿದೆ. ಇದರಿಂದ ಟೈಫಾಯಿಡ್ ನಿಂದ ಮರಣಹೊಂದುವ ಮಕ್ಕಳ ಸಂಖ್ಯೆಯನ್ನು ಗಣನೀಯವಾಗಿ ತಗ್ಗಿಸಬಹುದಾಗಿದೆ.
- ಮುಂದಿನ ಕೆಲವು ವಾರಗಳಲ್ಲಿ ಈ ನೂತನ ಲಸಿಕೆ ಮಾರುಕಟ್ಟೆಯಲ್ಲಿ ಲಭ್ಯವಿರಲಿದೆ. ಅಲ್ಲದೇ ವಿದೇಶಗಳಿಗೂ ಈ ಲಸಿಕೆಯನ್ನು ರಫ್ತು ಮಾಡುವುದಾಗಿ ಹೇಳಿದೆ.
- ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ವಾರ್ಷಿಕವಾಗಿ 2.5 ಲಕ್ಷದಿಂದ 6 ಲಕ್ಷ ಮಕ್ಕಳು ಟೈಫಾಯಿಡ್ ನಿಂದ ಅಸುನೀಗುತ್ತಿದ್ದಾರೆ ಹಾಗೂ 20 ಮಿಲಿಯನ್ ಗೂ ಹೆಚ್ಚು ಮಕ್ಕಳು ಟೈಫಾಯಿಡ್ ರೋಗದಿಂದ ನರಳುತ್ತಿದ್ದಾರೆ.

**ಕೇವಲ ಅರ್ಧ ಗಂಟೆಯಲ್ಲಿ 600 ಕಿ.ಮೀ. ವೇಗವನ್ನು ಕ್ರಮಿಸುವ ತಂತ್ರಜ್ಞಾನ ಅಭಿವೃದ್ಧಿಪಡಿಸಿರುವ ವಿಜ್ಞಾನಿಗಳು**

ಒಂದು ವಾಹನದಲ್ಲಿ 100 ಕಿ.ಮೀ. ವೇಗದಲ್ಲಿ ಕ್ರಮಿಸಿದರೆ ಆಶ್ಚರ್ಯಪಡುವ ಸಂದರ್ಭದಲ್ಲಿ ಗಂಟೆಗೆ 1126 ಕಿ.ಮೀ. ವಾಹನದಲ್ಲಿ ಕೂತರೆ? ಕಾಲ ಬದಲಾಗಿದೆ, ಆಧುನಿಕ ಆವಿಷ್ಕಾರಗಳಿಂದ ಅಂತರ ಕಡಿಮೆಯಾಗುತ್ತಿದೆ. ಸಂಶಯವೇ ಇಲ್ಲ. ಸಾಮಾನ್ಯ ವಿಮಾನಕ್ಕಿಂತಲೂ ವೇಗದಲ್ಲಿ ಕ್ರಮಿಸುವ ತಂತ್ರಜ್ಞಾನವೊಂದರ ಆವಿಷ್ಕಾರ ಇದೀಗ ಸುದ್ದಿಯಾಗಿದೆ. 'ಹೈಪರ್‌ಲೂಪ್' ಎಂಬ ಈ ತಂತ್ರಜ್ಞಾನದಲ್ಲಿ 600 ಕಿ.ಮೀ.ವೇಗವನ್ನು ಕೇವಲ ಅರ್ಧಗಂಟೆಯಲ್ಲಿ ಕ್ರಮಿಸಬಹುದು. ಸುಮಾರಾಗಿ ಮೆಟ್ರೋ, ಮೋನೋ ರೈಲು ಮಾದರಿಯನ್ನು ಹೋಲುವ ಈ ಸಾರಿಗೆಯ ಹಿಂದಿನ ತಲೆ, ಪೇಪಾಲ್ ಎಂಬ ಸಂಸ್ಥೆಯ ಸಂಸ್ಥಾಪಕ ಎಲೋನ್ ಮಾಸ್ಕ್ ಎಂಬುವರದ್ದು. ನಗರಗಳಲ್ಲಿನ ಟ್ರಾಫಿಕ್ ಕಿರಿಕಿರಿಗೆ, ಅತಿ ವೇಗದ ಸುರಕ್ಷಿತ ಸಾರಿಗೆಗೆ 'ಹೈಪರ್ ಲೂಪ್' ಪರಿಣಾಮಕಾರಿ ಉತ್ತರ ಎಂಬುದು ಮಾಸ್ಕ್ ಅವರ ಹೇಳಿಕೆ.

**'ಹೈಪರ್ ಲೂಪ್' ಹೇಗಿದೆ?:**

ಹೈಪರ್‌ಲೂಪ್ ವಾಹನ ದೊಡ್ಡದಾದ ಪೈಪ್‌ನೊಳಗೆ ಸಾಗುವ ದೊಡ್ಡ ಪ್ರಮಾಣದ ಡಬ್ಬ (ಕ್ಯಾಪ್ಸೂಲ್)ದಂತಿದೆ. ಇದರೊಳಗೆ 8 ರಿಂದ ಗರಿಷ್ಠ 28 ಮಂದಿ ಕೂರುವಂತೆ ವಿನ್ಯಾಸ ಮಾಡಬಹುದಾಗಿದೆ. ಮೆಟ್ರೋ, ಮೋನೋ ರೈಲಿನಂತೆ, ಪಿಲ್ಲರ್‌ಗಳನ್ನು ಹಾಕಿ ಅದರಲ್ಲಿ ಪೈಪ್‌ಗಳನ್ನು ಅಳವಡಿಸಿ ಈ ಕ್ಯಾಪ್ಸೂಲ್‌ಗಳನ್ನು ಪೈಪ್‌ಗಳ ಒಳಗೇ ಓಡಿಸುವ ವಿಧಾನವಿದು. ಇದರಲ್ಲಿ ಅಪಘಾತದ ಪ್ರಮೇಯವಿಲ್ಲ. ಹೈಸ್ಪೀಡ್ ರೈಲಿಗಿಂತಲೂ, ಈ ಸಾರಿಗೆ ಕಡಿಮೆ ವೆಚ್ಚ ಮತ್ತು ಹೆಚ್ಚು ಸುರಕ್ಷಿತ.

**'ಹೈಪರ್ ಲೂಪ್' ತಂತ್ರಜ್ಞಾನವೇನು?:**

ಹೈಪರ್‌ಲೂಪ್ ತಂತ್ರಜ್ಞಾನದಲ್ಲಿ ಅಳವಡಿಸಲಾದ ದೊಡ್ಡ ಪೈಪ್‌ನಲ್ಲಿ ನಿಮ್ನ ವಾತಾವರಣವಿರುತ್ತದೆ. ಅಯಸ್ಕಾಂತೀಯ ಶಕ್ತಿಯ ಮೂಲಕ ಇದನ್ನು ನಿರ್ವಹಿಸಲಾಗುತ್ತದೆ. ಇದಕ್ಕಾಗಿ ಕ್ಯಾಪ್ಸೂಲ್ ಒಳಗಡೆಯಲ್ಲಿ ಮುಂಭಾಗ ಬ್ಯಾಟರಿ ಚಾಲಿತ ಕಂಪ್ರಸರ್‌ಗಳನ್ನು ಇಟ್ಟು, ಒಂದು ಬದಿಯಿಂದ ಗಾಳಿಯ ಒತ್ತಡ ಸೃಷ್ಟಿ ಮಾಡುತ್ತ, ಮುಂದಕ್ಕೆ ಹೋಗುವಂತೆ ಮಾಡಲಾಗುತ್ತದೆ. ಪ್ರತಿ ಕ್ಯಾಪ್ಸೂಲ್ 183 ಕೆ.ಜಿ. ಭಾರವಿದ್ದು, ಸುಮಾರು 16ರಿಂದ 30 ಅಡಿ ವರೆಗೆ ವಿಸ್ತರಿಸುವಂತೆ ರೂಪಿಸಬಹುದಾಗಿದೆ. 930 ಕಿ.ಮೀ.ಯಿಂದ ಗರಿಷ್ಠ 1600 ಕಿ.ಮೀ.ವರೆಗೆ ಇದರ ವೇಗವನ್ನು ವೃದ್ಧಿಸಿಕೊಳ್ಳಬಹುದು. ಇದು ಸಂಪೂರ್ಣ ಸ್ವಯಂಚಾಲಿತವಾಗಿದ್ದು, ಅಪಘಾತವಾಗುವ ಪ್ರಮೇಯವಿಲ್ಲ ಎಂದು ಮಾಸ್ಕ್ ಹೇಳುತ್ತಾರೆ.

**<u>ವೈಮಾನಿಕ ಸಾಧನ "ಜೆಟ್ ಪ್ಯಾಕ್" ಹಾರಾಟಕ್ಕೆ ನ್ಯೂಜಿಲ್ಯಾಂಡ್ ಸರ್ಕಾರ ಸಮ್ಮತಿ</u>**

ವ್ಯಕ್ತಿಗತ ಬಳಕೆಗಾಗಿ ಅಭಿವೃದ್ಧಿ ಪಡಿಸಲಾಗಿರುವ ವೈಮಾನಿಕ ಸಾಧನ `ಜೆಟ್‌ಪ್ಯಾಕ್' ಹಾರಾಟಕ್ಕೆ ನ್ಯೂಜಿಲ್ಯಾಂಡ್‌ನ ನಾಗರಿಕ ವಿಮಾನಯಾನ ಪ್ರಾಧಿಕಾರ ಅನುಮತಿ ನೀಡಿದ್ದು, ಮಾನವ ಸಹಿತ ಪರೀಕ್ಷಾರ್ಥ ಸಂಚಾರಕ್ಕೂ ಸಮ್ಮತಿಸಿದೆ. `ಜೆಟ್‌ಪ್ಯಾಕ್' ಹಾರಾಟಕ್ಕೆ ವಿಮಾನಯಾನ ಪ್ರಾಧಿಕಾರ ಅನುಮತಿ ನೀಡಿರುವುದು ಮಹತ್ವದ ಮೈಲಿಗಲ್ಲು. ಮುಂದಿನ ವರ್ಷದಿಂದ ಈ ವೈಮಾನಿಕ ಸಾಧನದ ಮಾರಾಟವನ್ನು ಆರಂಭಿಸುವ ಉದ್ದೇಶ ಇದೆ' ಎಂದು ಮಾರ್ಟಿನ್ ವಿಮಾನಯಾನ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೀಟರ್ ಕೂಕರ್ ಹೇಳಿದ್ದಾರೆ.

**ಏನಿದು ಜೆಟ್ ಪ್ಯಾಕ್?**

ಸೇನೆ ಮತ್ತು ತುರ್ತು ಸೇವೆಗಳ ಬಳಕೆಗಾಗಿ ವಿಶೇಷವಾಗಿ ವಿನ್ಯಾಸ ಮಾಡಲಾದ `ಜೆಟ್‌ಪ್ಯಾಕ್'ಗಳು ಮುಂದಿನ ವರ್ಷದ ಮಧ್ಯಭಾಗದಲ್ಲಿ ಮಾರುಕಟ್ಟೆಗೆ ಬರಲಿವೆ. ಶ್ರೀಸಾಮಾನ್ಯರು ಬಳಸಬಹುದಾದಂತಹ ಸರಳ ಮಾದರಿಯ ಸಾಧನಗಳು 2015ರ ವೇಳೆಗೆ ಸಿದ್ಧವಾಗಲಿದೆ' ಎಂದು ಅವರು ತಿಳಿಸಿದ್ದಾರೆ.

**ಜೆಟ್ ಪ್ಯಾಕ್ ತಂತ್ರಜ್ಞಾನ:**

`ಜೆಟ್‌ಪ್ಯಾಕ್' ಸ್ವಯಂ ನೋದಕ ಶಕ್ತಿಯ (ಪ್ರೊಪಲ್ಷನ್) ಫ್ಯಾನ್‌ಗಳನ್ನು ಅಳವಡಿಕೆ ಮಾಡಿರುವ ಜೋಡಿ ಸಿಲಿಂಡರ್‌ಗಳಿರುವ ವೈಮಾನಿಕ ಸಾಧನ. ಇದು ವೈಮಾನಿಕ ಸಾಧನಗಳ ಸಂಶೋಧಕ ಗ್ಲೆನ್ ಮಾರ್ಟಿನ ಅವರ ಕನಸಿನ ಕೂಸು. ಇದನ್ನು ಆವಿಷ್ಕರಿಸಲು ಅವರು 30 ವರ್ಷ ಶ್ರಮಿಸಿದ್ದಾರೆ. ಟಿವಿಗಳಲ್ಲಿ ಮಕ್ಕಳಿಗಾಗಿ ಪ್ರಸಾರವಾಗುತ್ತಿದ್ದ `ಥಂಡರ್‌ಬರ್ಡ್ಸ್' ಮತ್ತು `ಲಾಸ್ಟ್ ಇನ್ ಸ್ಪೇಸ್' ಕಾರ್ಯಕ್ರಮಗಳಿಂದ ಬಾಲ್ಯದಲ್ಲೇ ಪ್ರೇರಿತರಾದ ಮಾರ್ಟಿನ್, 1980ರ ದಶಕದಲ್ಲಿ ಸಾಮಾನ್ಯ ಜನರು ಬಳಸಬಹುದಾದಂಥ ಮತ್ತು ತಜ್ಞ ಪೈಲಟ್‌ಗಳಿಗೆ ನೀಡುವಂಥ, ತರಬೇತಿ ಅಪೇಕ್ಷಿಸದ ವೈಮಾನಿಕ ಸಾಧನ ಆವಿಷ್ಕರಿಸ ತೊಡಗಿದುದರ ಫಲವೇ `ಜೆಟ್‌ಪ್ಯಾಕ್'.

**ಪರ್ವತ ಪ್ರದೇಶಗಳಲ್ಲಿ ಸಂಭವಿಸುವ ವಿಕೋಪಗಳ ಮುನ್ಸೂಚನೆಗೆ "ಡೋಪ್ಲರ್ ರಾಡಾರ್"**

ಅಪಾಯಕಾರಿ ಪರ್ವತ ಪ್ರದೇಶಗಳಲ್ಲಿ ಸಂಭವಿಸಬಹುದಾದ ಮೇಘ ಸ್ಫೋಟದಂತಹ ಘಟನೆಗಳ ಬಗ್ಗೆ ಸೂಚನೆ ನೀಡುವ `ಡೋಪ್ಲರ್ ರಾಡಾರ್' ಅನ್ನು ಉತ್ತರಾಖಂಡದಲ್ಲಿ ಅಳವಡಿಸಿದ್ದರೆ ದುರಂತ ತಪ್ಪಿಸಬಹುದಿತ್ತು' ಎಂದು `ಸೌತ್ ಏಷ್ಯಾ ನೆಟ್‌ವರ್ಕ್ ಆನ್ ಡ್ಯಾಮ್ಸ್ ರಿವರ್ಸ್ ಅಂಡ್ ಪೀಪಲ್' ಸಂಸ್ಥೆ ಅಭಿಪ್ರಾಯಪಟ್ಟಿದೆ.

**ಉತ್ತರಾಖಂಡ ವಿಪತ್ತು: ದೇಶ ಕಲಿತಿರುವ ಪಾಠಗಳು?**

- `ಡೋಪ್ಲರ್ ರಾಡಾರ್' ಪರ್ವತ ಪ್ರದೇಶಗಳಲ್ಲಿ ಸಂಭವಿಸುವ ವಿಕೋಪಗಳ ಬಗ್ಗೆ 5 ರಿಂದ 6 ಗಂಟೆ ಮುಂಚಿತವಾಗಿ ಸೂಚನೆ ನೀಡುತ್ತದೆ.
- ಈ ಸಮಯದಲ್ಲಿ ಆಗಬಹುದಾಗ ಜೀವ ಹಾನಿ ಹಾಗೂ ಚರಾಸ್ತಿಗಳ ಹಾನಿಯನ್ನು ತಪ್ಪಿಸಬಹುದು.
- ಒಂದು ವೇಳೆ ಉತರಾಖಂಡದಲ್ಲಿ ಈ ರಾಡಾರ್ ಅಳವಡಿಸಿದ್ದರೆ ಸಾವಿರಾರು ಜನರ ಪ್ರಾಣವನ್ನು ಕಾಪಾಡಬಹುದಿತ್ತು.
- `ಡೋಪ್ಲರ್ ರಾಡಾರ್'ಗಳನ್ನು ಕೇಂದ್ರ ಸರ್ಕಾರ 2008ರಲ್ಲೇ ಖರೀದಿಸಿತ್ತು. ಆದರೆ ಉತ್ತರಾಖಂಡ ಸರ್ಕಾರ ಅದಕ್ಕೆ ಸರಿಯಾದ ಸ್ಥಳವನ್ನು ಗುರುತಿಸಿ ಅಳವಡಿಸಿರಲಿಲ್ಲ.
- ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಹವಾಮಾನ ಬದಲಾವಣೆ ಬಗ್ಗೆ ಅಧ್ಯಯನ ಮಾಡಲು ಹಾಗೂ ನದಿಗಳನ್ನು ರಕ್ಷಿಸಲು ರಚಿಸಲಾಗಿರುವ ಸರ್ಕಾರಿ ಪ್ರಾಧಿಕಾರಗಳ ವೈಫಲ್ಯದಿಂದ ಈ ಉತ್ತರಾಖಂಡ ದುರಂತ ಸಂಭವಿಸಿದೆ.

**ಚಂದ್ರನಲ್ಲಿ ಜಲವನ್ನು ಪತ್ತೆಹಚ್ಚಿದ ನಾಸಾ ವಿಜ್ಞಾನಿಗಳು:** ಭಾರತದ ಚಂದ್ರಯಾನ ಯೋಜನೆಯಿಂದ ಸಂಗ್ರಹವಾದ ಮಾಹಿತಿ ಆಧರಿಸಿ ಚಂದ್ರನಲ್ಲಿದ್ದ ಜಲವನ್ನು ಪತ್ತೆ ಹಚ್ಚುವಲ್ಲಿ ಅಮೆರಿಕದ ಬಾಹ್ಯಾಕಾಶ ಸಂಸ್ಥೆಯಾದ ನಾಸಾ ಯಶಸ್ವಿಯಾಗಿದೆ. ಚಂದ್ರನಲ್ಲಿನ ಜಲದ ಅಸ್ತಿತ್ವವನ್ನು ಈ ಮೊದಲು ನಡೆದ ಅಪೋಲೋ ವ್ಯೋಮನೌಕೆಯು ತಿಳಿಯಪಡಿಸಿತ್ತು. ಇದೀಗ ಚಂದ್ರನ ಶಿಲಾಪರದಗಳಲ್ಲಿದ್ದ ಇಂಥ ನೀರಿನ ಇರುವಿಕೆಯನ್ನು ಇಸ್ರೋ ಚಂದ್ರಯಾನ ಯೋಜನೆಯಡಿಯ ಮೂನ್ ಮೈನರಾಲಜಿ ಮ್ಯಾಪರ್ (ಎಂ3) ಉಪಕರಣದ ಸಹಾಯದಿಂದ ಚಿತ್ರಸಹಿತ ಪತ್ತೆ ಮಾಡುವಲ್ಲಿ ನಾಸಾ ಯಶಸ್ವಿಯಾಗಿದೆ ಎಂದು ನಾಸಾ ಸಂಶೋಧಕರು ಹೇಳಿಕೊಂಡಿದ್ದಾರೆ. ಚಂದ್ರನ ಸಮಭಾಜಕದ ಸಮೀಪವಿರುವ 'ಬುಲ್ಲೈಲ್ಡಸ್' ಗುಂಡಿಯಲ್ಲಿನ ಶಿಲಾಪದರಗಳಲ್ಲಿ ನೀರು ಇರುವುದನ್ನು ಭಾರತೀಯ ಬಾಹ್ಯಾಕಾಶ ಸಂಸ್ಥೆ `ಇಸ್ರೊ'ದ ಚಂದ್ರಯಾನ-1 ನೌಕೆಯ `ಎಂ-3' ಎಂಬ ಚಂದ್ರನಲ್ಲಿಯ ಖನಿಜ ಪತ್ತೆ ಮಾಪಕ ಸಂಗ್ರಹಿಸಿದ್ದ ಅಂಕಿ, ಅಂಶಗಳನ್ನು ಬಳಸಿಕೊಂಡು `ನಾಸಾ' ವಿಜ್ಞಾನಿಗಳು ಈ ಸಾಧನೆ ಮಾಡಿದ್ದಾರೆ.2009ರಲ್ಲಿ ಈ ಮುನ್ನ ಎಂ3 ಸಾಧನವು ಚಂದ್ರನ ಮೇಲ್ಮೈನಲ್ಲಿನ ನೀರಿನ ಕಣಗಳನ್ನು ಪತ್ತೆ ಮಾಡಿತ್ತು. ಸೌರ ಗಾಳಿಯು ಚಂದ್ರನ ಮೇಲ್ಮೈಗೆ ಅಪ್ಪಳಿಸಿದಾಗ ಈ ನೀರಿನ ತೆಳು ಪದರ ನಿರ್ಮಾಣವಾಗಿದೆ ಎಂದು ಹೇಳಲಾಗಿದೆ.

# ಪರಿಸರ

**ನಾಗ್ ಪುರ ಪ್ರಸಿದ್ಧ ಕಿತ್ತಳೆ, ಧರ್ಮಾವರಂ ಸೀರೆಗೆ ಭೌಗೋಳಿಕ ಸೂಚಕ (Geographical Indication)ಸ್ಥಾನಮಾನ**

ನಾಗಪುರದ ರಸಭರಿತ ಕಿತ್ತಳೆ ಹಣ್ಣು, ಆಂಧ್ರದ ಧರ್ಮಾವರಂ ಸೀರೆ, ಬುಡಕಟ್ಟು ವರ್ಲಿ ಕಲೆ, ಮತ್ತು ಕೇರಳದ ಕೈಪಡ್ ಭತ್ತಕ್ಕೆ ಭೌಗೋಳಿಕ ಸೂಚಕ ಸ್ಥಾನಮಾನ ನೀಡಲು ನಿರ್ಧರಿಸಲಾಗಿದೆ. ಇದೇ ವೇಳೆ ಇಂದೋರ್ ನ ಚರ್ಮದ ಬೊಂಬೆಗಳ ಗುರುತು ಚಿನ್ಹೆ (LOGO)ಯನ್ನು ಸಹ ಅಂಗೀಕರಿಸಲಾಗಿದೆ. ಹೈದ್ರಾಬಾದ್ ನಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ಪ್ರಮುಖ ನಿರ್ಣಯವನ್ನು ಕೈಗೊಳ್ಳಲಾಗಿದೆ.

- "**ವರ್ಲಿ ಬುಡಕಟ್ಟು ಕಲೆ (Warli Tribal Art)**": ವರ್ಲಿ ಬುಡಕಟ್ಟು ಜನಾಂಗ ನಿರ್ವಹಿಸುತ್ತಿರುವ ಬಂದಿರುವ ಪ್ರಸಿದ್ಧ ಕಲೆಯೇ ವರ್ಲಿ ಕಲೆ. ಸಾಮಾನ್ಯವಾಗಿ ಮಹಿಳೆಯರೇ ಹೆಚ್ಚಾಗಿ ರೂಢಿಗತ ಮಾಡಿಕೊಂಡಿರುವ ಈ ಕಲೆ ಇತ್ತೀಚಿನ ದಿನಗಳಲ್ಲಿ ಪ್ರಸಿದ್ದಿ ಪಡೆದುಕೊಂಡಿದೆ.
- **ಧರ್ಮಾವರಂ ಸೀರೆ**: ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಧರ್ಮಾವರಂ ನಲ್ಲಿ ನೇಯಲಾಗುವ ಈ ಸೀರೆಗಳು ತನ್ನ ವೈಶಿಷ್ಟ್ಯತೆಯಿಂದಾಗಿ ಇಂದು ಅತ್ಯಂತ ಪ್ರಸಿದ್ದಿ ಹೊಂದಿವೆ. ಮಿನುಗುವ ಬಣ್ಣ ಮತ್ತು ಚಿನ್ನದಂತಹ ಲೇಪನ ಹೊಂದಿರುವ ಪಲ್ಲುಗಳಿಂದ ಈ ಸೀರೆಗಳು ಗ್ರಾಹಕರ ಮನ ಗೆದ್ದಿವೆ.
- **ನಾಗ್ ಪುರ ಕಿತ್ತಳೆ**: ಕಿತ್ತಳೆ ನಗರವೆಂತಲೇ ಖ್ಯಾತಿ ಹೊಂದಿರುವ ರಸಭರಿತ ನಾಗ್ ಪುರ ಕಿತ್ತಳೆಗಳು ವಿಶಿಷ್ಟ ರುಚಿಯಿಂದಲೇ ವಿದೇಶದಲ್ಲೂ ಖ್ಯಾತಿ ಹೊಂದಿವೆ.
- **ಕೈಪಡ್ ಭತ್ತ (Kaipad Rice):** ಸಮುದ್ರದ ಹಿನ್ನೀರಿನಲ್ಲಿ ಭತ್ತ ಬೆಳೆಯುವ ವಿಧಾನವೇ ಕೈಪಡ್ ಭತ್ತ. ಪ್ರಸ್ತುತ ಕೇರಳದಲ್ಲಿ ಈ ವಿಧಾನ ಹೆಚ್ಚಾಗಿ ಜಾರಿಯಲ್ಲಿದೆ.
- ಸದ್ಯ 187 ದೇಶಿಯ ಉತ್ಪನ್ನಗಳಿಗೆ ಭೌಗೋಳಿಕ ಸೂಚಕ ಸ್ಥಾನಮಾನ ನೀಡಲಾಗಿದೆ. ಈ ನಾಲ್ಕು ಉತ್ಪನ್ನಗಳು ಸೇರ್ಪಡೆಗೊಂಡರೆ ಇವುಗಳ ಸಂಖ್ಯೆ 191 ಕ್ಕೆ ಏರಿಕೆಯಾಗಲಿದೆ.
- ಡಾರ್ಜಲಿಂಗ್ ಟೀ ದೇಶದಲ್ಲಿ GI ಗುರುತನ್ನು ಪಡೆದ ಮೊದಲ ಉತ್ಪನ್ನವಾಗಿದೆ. 2003 ರಲ್ಲಿ ಡಾರ್ಜಲಿಂಗ್ ಟೀ ಗೆ ಈ ಸ್ಥಾನಮಾನವನ್ನು ನೀಡಲಾಯಿತು.

**ಅಕ್ರಮ ಮರಳುಗಾರಿಕೆ: ವರದಿ ಸಲ್ಲಿಸಿದ ಸಮಿತಿ**

ಉತ್ತರ ಪ್ರದೇಶದ ಗೌತಮ್ ಬುದ್ಧ ನಗರದಲ್ಲಿ ವ್ಯಾಪಕವಾಗಿ ಹಬ್ಬಿರುವ ಅಕ್ರಮ ಮರಳುಗಾರಿಕೆ ಕುರಿತಾಗಿ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ರಚಿಸಲಾಗಿದ್ದ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದ ನಿರ್ದೇಶಕರಾದ ಡಾ.ಸರೋಜ್ ನೇತೃತ್ವದ ಮೂರು ಜನ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಇತ್ತೀಚೆಗೆ ರಚಿಸಿತ್ತು.

- ಐಎಎಸ್ ಅಧಿಕಾರಿ ದುರ್ಗಾ ಶಕ್ತಿ ನಾಗಪಾಲ್ ಅವರನ್ನು ಉತ್ತರ ಪ್ರದೇಶ ಸರ್ಕಾರ ಇತ್ತೀಚೆಗೆ ಅಮಾನತು ಮಾಡಿದ ಬೆನ್ನಲ್ಲಿ ಕೇಂದ್ರ ಸರ್ಕಾರ ಈ ಸಮಿತಿಯನ್ನು ರಚಿಸಿತ್ತು. ನಿರ್ಮಾಣದ ಹಂತದಲ್ಲಿರುವ ಮಸೀದಿಯ ಗೋಡೆಯನ್ನು ಕೆಡವಿದ್ದಾರೆ ಎಂಬ ಹಿನ್ನಲೆಯಲ್ಲಿ ಅಮಾನತುಗೊಳಿಸಿರುವುದಾಗಿ ಉತ್ತರ ಪ್ರದೇಶ ಸರ್ಕಾರದ ಹೇಳಿಕೆ. ಆದರೆ ಅಕ್ರಮ ಮರಳುಗಾರಿಕೆ ವಿರುದ್ಧ ಧ್ವನಿ ಎತ್ತಿದ ಕಾರಣ ದುರ್ಗಾ ಶಕ್ತಿ ಅವರನ್ನು ಅಮಾನತುಗೊಳಿಸಿರುವುದಾಗಿ ವಿರೋಧ ಪಕ್ಷಗಳ ವಾದ.
- ಅಕ್ರಮ ಮರಳುಗಾರಿಕೆ ಎಗ್ಗಿಲ್ಲದೇ ಸಾಗಿರುವುದಾಗಿ ಸಮಿತಿಯು ತನ್ನ ಅಧ್ಯಯನ ವರದಿಯಲ್ಲಿ ತಿಳಿಸಿದೆ. ಮೈನ್ಸ್ ಅಂಡ್ ಮಿನರಲ್ಸ್ ಆಕ್ಟ್ 1957 ಮತ್ತು ಇತರೆ ಪರಿಸರ ಸಂಬಂಧಿ ನಿಯಮಗಳನ್ನು ಗಾಳಿಗೆ ತೂರಿರುವುದಾಗಿ ಸಮಿತಿ ತನ್ನ ವರದಿಯಲ್ಲಿ ತಿಳಿಸಿದೆ.

**ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ ನೀಡಿದ ಕೇಂದ್ರ ಸಚಿವ ಚಿರಂಜೀವಿ**

ಕೇಂದ್ರ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವ ತೆಲುಗು ಚಿತ್ರನಟ ಚಿರಂಜೀವಿ “ಸ್ವಚ್ಛ ಭಾರತ ಅಭಿಯಾನ”ಕ್ಕೆ (Clean India Campaign) ಆಗ್ರಾದ ತಾಜ್ ಮಹಲ್ ಬಳಿ ಚಾಲನೆ ನೀಡಿದರು. ಈ ಅಭಿಯಾನ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಮುಂದಾಳತ್ವದಲ್ಲಿ 12 ನೇ ಪಂಚ ವಾರ್ಷಿಕ ಯೋಜನೆಯಡಿ ತೆಗೆದುಕೊಂಡಿದ್ದು, ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವುದು, ಪ್ರವಾಸಿ ತಾಣಗಳಲ್ಲಿ ಗುಣಮಟ್ಟದ ಸೇವೆಗಳನ್ನು ಅಭಿವೃದ್ಧಿಪಡಿಸುವುದೂ ಸೇರಿದಂತೆ ಪ್ರವಾಸಿ ತಾಣಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಭಾರತೀಯ ತೈಲ ಮತ್ತು ನೈಸರ್ಗಿಕ ಅನಿಲ ಪ್ರಾಧಿಕಾರವು (ONGC) ತನ್ನ ಕಂಪನಿಯ ಸಾಮಾಜಿಕ ಹೊಣೆಗಾರಿಕೆ ವ್ಯಾಪ್ತಿಯಲ್ಲಿ ತಾಜ್ ಮಹಲ್ ಮತ್ತು ಸುತ್ತಲಿನ ನೈರ್ಮಲ್ಯತೆ ಕಾಪಾಡುವ ಜವಾಬ್ದಾರಿಯನ್ನು ಪಡೆದುಕೊಂಡಿದೆ.

**ತಾಜ್ ಮಹಲ್ ಜವಾಬ್ದಾರಿ ಹೊತ್ತ ONGC :**

- 17 ನೇ ಶತಮಾನದ ಅತ್ಯದ್ಭುತ ಕಲಾಕೃತಿಯಾದ ತಾಜ್ ಮಹಲ್ ನ್ನು ONGC ‘ಸ್ವಚ್ಛ ಭಾರತ ಅಭಿಯಾನದಡಿ’ ದತ್ತು ಪಡೆದುಕೊಂಡಿದೆ
- ಈ ಅಭಿಯಾನದಡಿ ದತ್ತು ಪಡೆದುಕೊಂಡ ಎರಡನೇ ಸ್ಮಾರಕ ಇದಾಗಿದೆ, ಇದಕ್ಕೂ ಮೊದಲು ದೆಹಲಿಯ ಕುತುಬ್ ಮಿನಾರ್ ಸ್ಮಾರಕವನ್ನು ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು 2012 ದತ್ತು ಪಡೆದಿತ್ತು
- ONGC ಯು ತಾಜ್ ಮಹಲ್ ಬಳಿ ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತೆ, ಕಸದ ತೊಟ್ಟಿಗಳು, ಹಲವಾರು ದುರಸ್ಥಿ ಕಾಮಗಾರಿಗಳು, ನೈರ್ಮಲ್ಯ ನಿರ್ವಹಣೆ, ಪ್ರವಾಸಿಗರಿಗಾಗಿ ಸಹಾಯವಾಣಿ, ಸ್ವಯಂ ಸೇವಕರುನ್ನು ಹೀಗೆ ಹಲವಾರು ವ್ಯವಸ್ಥೆಗಳನ್ನು ಕಲ್ಪಿಸಲಿದೆ.

- ಇದೇ ಅಲ್ಲದೇ ಭಾರತದ ಇತರೆ ಸ್ಮಾರಕಗಳಾದ-ಮಹಾರಾಷ್ಟ್ರ ಎಲ್ಲೋರ ಮತ್ತು ಎಲಿಫೆಂಟಾ ಗುಹೆಗಳು, ದೆಹಲಿಯ ಕೆಂಪುಕೋಟೆ, ಹೈದ್ರಾಬಾದಿನ ಗೋಲ್ಕೊಂಡ ಕೋಟೆ ಮತ್ತು ತಮಿಳುನಾಡಿನ ಮಹಾಬಲಿಪುರಂ ನ್ನು ಸಹ ONGC ದತ್ತು ಪಡೆಯಲಿದೆ.

**<u>ಜಾಗತಿಕ ತಾಪಮಾನ ಹೆಚ್ಚಳದಿಂದ ಸಾಗರ ಗರ್ಭದಲ್ಲಿ ಅಗಾಧ ಬದಲಾವಣೆ</u>**

ಜಾಗತಿಕ ತಾಪಮಾನ ಹೆಚ್ಚಳದಿಂದ ಸಾಗರ ಗರ್ಭದಲ್ಲಾಗುವ ಅಗಾಧ ಬದಲಾವಣೆಗಳ ಬಗ್ಗೆ ಹೊಸ ವರದಿಯೊಂದು ಆತಂಕಕಾರಿ ಅಂಶಗಳನ್ನು ಬಹಿರಂಗಗೊಳಿಸಿದೆ. ಆಸ್ಟ್ರೇಲಿಯಾದ ಪೂರ್ವ ಮತ್ತು ದಕ್ಷಿಣ ಕರಾವಳಿ, ಅಮೆರಿಕ, ಯುರೋಪ್, ಅಟ್ಲಾಂಟಿಕ್ ಮತ್ತು ಮೆಡಿಟೇರಿಯನ್ ಸಾಗರಗಳನ್ನು ಪ್ರಧಾನವಾಗಿಟ್ಟುಕೊಂಡು ಈ ಅಧ್ಯಯನ ನಡೆಸಲಾಗಿದೆ.

**ವರದಿಯ ವಿಶೇಷತೆಗಳು:**

- ಸಾಗರ ಜೀವಿಗಳಿಗೆ ಆಹಾರ ಮೂಲವಾಗಿರುವ ಫೈಟೋಪ್ಲಾಂಕ್ಟಾನ್ ಎಂಬ ಸಸ್ಯ ಪ್ರಭೇದ ಮತ್ತು ಮೀನುಗಳ ಜೀವನ ಚಕ್ರದಲ್ಲಿ ಬದಲಾವಣೆ ಗೋಚರಿಸಿವೆ. ನಿಗದಿತ ಕಾಲಾವಧಿಗಿಂತ ಮೊದಲೇ ಅವು ಜನ್ಮತಾಳುತ್ತಿವೆ.
- ಮೀನು, ಚಿಪ್ಪುಮೀನು, ಏಡಿಯಂತಹ ಚಿಪ್ಪುಜೀವಿಗಳು, ಕಾಂಡ್ಲ ಕಾಡುಗಳು ಮತ್ತು ಕಡಲ ಹುಲ್ಲು ತಮ್ಮ ಮೂಲ ಸ್ಥಾನವನ್ನು ಬದಲಾಯಿಸುತ್ತಿವೆ. ಒಂದು ದಶಕದ ಅವಧಿಯಲ್ಲಿ ಕನಿಷ್ಠ 72 ಕಿ.ಮೀ ದೂರಕ್ಕೆ ಸ್ಥಳಾಂತರಗೊಳ್ಳುತ್ತಿವೆ. ಹವಾಮಾನ ವೈಪರಿತ್ಯದಿಂದಾಗಿ ಕೆಲವು ಜಲಚರಗಳು 470 ಕಿ.ಮೀ ದೂರದವರೆಗೂ ಸ್ಥಳಾಂತರಗೊಂಡ ನಿದರ್ಶನಗಳಿವೆ ಎನ್ನುತ್ತಾರೆ ಅಧ್ಯಯನ ಕೈಗೊಂಡ ತಜ್ಞರು.
- 857 ಜಲಚರಗಳ ಅಧ್ಯಯನ ನಡೆಸಿರುವ ತಜ್ಞರ ತಂಡ ಒಟ್ಟು 208 ವರದಿಗಳನ್ನು ಸಿದ್ಧಪಡಿಸಿದೆ. ಜಲಚರಗಳ ಜೀವನಚಕ್ರ, ಸಂತಾನಭಿವೃದ್ಧಿ, ವರ್ತನೆ ಮುಂತಾದ ಮೂಲಭೂತ ಹಂತಗಳ ಬಗ್ಗೆ ಈ ವರದಿ ಬೆಳಕು ಚೆಲ್ಲಿದೆ.
- ಒಂದು ಡಿಗ್ರಿ ತಾಪಮಾನ ಹೆಚ್ಚಳ ಭೂಮಿಯ ಮೇಲಿನ ಜೀವಿಗಳಿಗಿಂತ ಸಾಗರ ಜೀವಿಗಳ ಮೇಲೆ ಅಗಾಧ ದುಷ್ಪರಿಣಾಮ ಬೀರುತ್ತದೆ. ಭೂಮಿಯ ಹೆಚ್ಚುವರಿ ತಾಪಮಾನವನ್ನು ಸಾಗರಗಳು ಹೀರಿಕೊಳ್ಳುವುದೇ ಇದಕ್ಕೆ ಕಾರಣ.

**<u>ಅಂಡಮಾನ್-ನಿಕೋಬರ್ ದ್ವೀಪ ಸಮೂಹದಲ್ಲಿ ಅರಣ್ಯ ನಾಶಕ್ಕೆ ಪ್ರಾಣಿಗಳೇ ಕಾರಣ: ಅಧ್ಯಯನ ವರದಿ</u>**

ಇಂದು ಅರಣ್ಯಗಳ ನಾಶಕ್ಕೆ ಮಾನವನೇ ಕಾರಣ ಎಂಬುದನ್ನು ಸಾಬೀತುಪಡಿಸಲು ಯಾವುದೇ ಅಧ್ಯಯನ ಬೇಕಿಲ್ಲ. ಮಾನವ ಅಷ್ಟರ ಮಟ್ಟಿಗೆ ಪ್ರಕೃತಿಯ ಮೇಲೆ ದೌರ್ಜನ್ಯ ನಡೆಸಿದ್ದಾನೆ. ಆದರೆ ಅಂಡಮಾನ್-ನಿಕೋಬಾರ್ ದ್ವೀಪಸಮೂಹದಲ್ಲಿ ಹಾಗಲ್ಲ. ಇಲ್ಲಿ ಅರಣ್ಯ ನಾಶ ಆಗುತ್ತಿರುವುದು ಆನೆಗಳು ಮತ್ತು ಜಿಂಕೆಗಳಿಂದ ಎಂಬ ಅಚ್ಚರಿಯ ಮಾಹಿತಿ ಲಭಿಸಿದೆ.

**ವರದಿಯಲ್ಲೇನಿದೆ?**

- ಪರಿಸರ ಸಂಶೋಧನಾ ಪ್ರತಿಷ್ಠಾನ ಎಂಬ ಪುದುಚೇರಿಯ ಸಂಸ್ಥೆಯೊಂದು ನಡೆಸಿರುವ ಅಧ್ಯಯನದ ಪ್ರಕಾರ, ಇಲ್ಲಿ ಸಸ್ಯಾಹಾರಿಗಳಾದ ಆನೆಗಳು ಮತ್ತು ಜಿಂಕೆಗಳ ಉಪಟಳ ವಿಪರೀತವಾಗಿದ್ದು, ಅವುಗಳು ಇಲ್ಲಿನ ಜೀವವೈವಿಧ್ಯಕ್ಕೆ ಭಂಗ ತರುತ್ತಿವೆ.
- ಅಂಡಮಾನ್‌ನಲ್ಲಿ ಕಾಡು ಹಂದಿ ಮೂಲನಿವಾಸಿ ಪ್ರಾಣಿಯಾಗಿದ್ದು, ಇಲ್ಲಿನ ಕಾಡಿನಲ್ಲಿ 1880ಕ್ಕಿಂತ ಮೊದಲು ಕಾಡು ಹಂದಿಗಳೇ ಪ್ರಾಧಾನ್ಯತೆ ಪಡೆದಿದ್ದವು.
- ಕಾಡು ಹಂದಿಗಳ ಇರುವಿಕೆಗೆ ತಕ್ಕಂತೆ ಇಲ್ಲಿನ ಪರಿಸರವಿದೆ. ಆದರೆ ಭಾರತದ ಮುಖ್ಯ ಭೂಮಿಯಿಂದ 1880ರಲ್ಲಿ ಆನೆಗಳ ಪ್ರವೇಶವಾಯಿತು. ಅಂತೆಯೇ 1930ರಲ್ಲಿ ಬ್ರಿಟಿಷರು ಜಿಂಕೆಗಳನ್ನು ಇಲ್ಲಿಗೆ ಕರೆತಂದರು.
- ಜಿಂಕೆ ಮತ್ತು ಕಾಡುಹಂದಿಗಳು ಸಸ್ಯಾಹಾರಿ ಪ್ರಾಣಿಗಳಾಗಿದ್ದು ಇವುಗಳ ಹಾವಳಿಯಿಂದ ಕಾಡು ಕ್ರಮೇಣ ಕಡಿಮೆಯಾಗುತ್ತಿದೆ ಎಂದು ಅಧ್ಯಯನ ವಿವರಿಸಿದೆ.

**ಜಗತ್ತಿನ ಅತ್ಯಂತ ಹಿರಿಯ ಪೆಂಗ್ವಿನ್ ಗೆ ಈಗ 36 ರ ಸಂಭ್ರಮ**

ಇಂಗ್ಲೆಂಡ್‌ನಲ್ಲಿರುವ ಜಗತ್ತಿನ ಅತ್ಯಂತ ಹಿರಿಯ ಪೆಂಗ್ವಿನ್ ಎಂದು ಗುರುತಿಸಲಾದ `ಮಿಸ್ಸಿ'ಗೆ ಈಗ 36ರ ಸಂಭ್ರಮ. ಗ್ಲೌಸೆಸ್ಟರ್ ಶೈರ್‌ನ ಬರ್ಡ್‌ಲ್ಯಾಂಡ್ ವನ್ಯಜೀವಿ ಉದ್ಯಾನದಲ್ಲಿರುವ ಕಿಂಗ್ ಪೆಂಗ್ವಿನ್, `ಮಿಸ್ಸಿ'ಯನ್ನು 1982ರಲ್ಲಿ ಕರೆತರಲಾಗಿತ್ತು. ಆ ಸಂದರ್ಭದಲ್ಲಿ ಅದಕ್ಕೆ 5 ವರ್ಷ ವಯಸ್ಸಾಗಿತ್ತು. ಒಂದು ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡಿದ್ದರೂ ಉದ್ಯಾನದಲ್ಲಿರುವ ಪೆಂಗ್ವಿನ್ ಗಳಿಗೆ `ಮಿಸ್ಸಿ'ಯೇ ನಾಯಕಿ. `ಮಿಸ್ಸಿ'ಯೇ ಜಗತ್ತಿನ ಹಿರಿಯ ಪೆಂಗ್ವಿನ್ ಎಂಬುದು ಅದರ ಆರೈಕೆಯಲ್ಲಿ ತೊಡಗಿದ್ದ ವನ್ಯಜೀವಿ ಉದ್ಯಾನದ ಸಿಬ್ಬಂದಿಗೆ ತಿಳಿದಿರಲಿಲ್ಲ. ಆದರೆ, ಡೆನ್ಮಾರ್ಕ್‌ನ ಮೃಗಾಲಯವೊಂದು `ಮಿಸ್ಸಿ'ಗಿಂತ ಎರಡು ವರ್ಷ ಕಡಿಮೆ ವಯಸ್ಸಿನ ಜೆಂಟೂ ಪ್ರಭೇದದ ಪೆಂಗ್ವಿನ್‌ನನ್ನು ಹಿರಿಯ ಪೆಂಗ್ವಿನ್ ಎಂದು ಹೇಳಿಕೊಂಡಾಗಲಷ್ಟೇ ಈ ವಿಚಾರ ತಿಳಿದು ಬಂತು. `ಮಿಸ್ಸಿ'ಯ ವಿವರಗಳನ್ನು ಗಿನ್ನಿಸ್ ವಿಶ್ವ ದಾಖಲೆ ಸಂಸ್ಥೆಗೆ ಕಳುಹಿಸಲು ಸಿಬ್ಬಂದಿ ಯೋಜಿಸುತ್ತಿದ್ದಾರೆ. ಕಿಂಗ್ ಪ್ರಭೇದದ ಪೆಂಗ್ವಿನ್‌ಗಳು ಅತಿ ಹೆಚ್ಚು ಅಂದರೆ, 26 ವರ್ಷಗಳ ಕಾಲ ಬದುಕುವ ಸಾಮರ್ಥ್ಯ ಹೊಂದಿವೆ. ಇವುಗಳ ಸರಾಸರಿ ಆಯಸ್ಸು 15-20 ವರ್ಷಗಳು.

**ಭಾರತದಲ್ಲಿ ಎಚ್ಐವಿ/ಏಡ್ಸ್ ಪೀಡಿತರ ಇತ್ತೀಚಿನ ಅಂಕಿ-ಅಂಶ**

ದೇಶದಲ್ಲಿ ಎಚ್ಐವಿ/ಏಡ್ಸ್ ಸೋಂಕಿತರ ಅಂಕಿ ಅಂಶಗಳನ್ನು ಬಿಡುಗಡೆಗೊಳಿಸಲಾಗಿದೆ. ಅಂಕಿ ಅಂಶಗಳ ಪ್ರಕಾರ 2011 ರಲ್ಲಿ ಭಾರತದಲ್ಲಿ 2088642 ಜನರು ಎಚ್ಐವಿ/ಏಡ್ಸ್ ಬಾಧಿತರಾಗಿರುವುದಾಗಿ ತಿಳಿದು ಬಂದಿದೆ.

- ಅಂಕಿ ಅಂಶಗಳ ಪ್ರಕಾರ ಆಂಧ್ರಪ್ರದೇಶ ದೇಶದಲ್ಲೇ ಅತಿ ಹೆಚ್ಚು ಎಚ್ಐವಿ/ಏಡ್ಸ್ ಸೋಂಕಿರನ್ನು ಹೊಂದಿದೆ. ಆಂಧ್ರಪ್ರದೇಶದಲ್ಲಿ 4,19,180 ಏಡ್ಸ್ ಸೋಂಕಿತರಿರುವುದಾಗಿ ತಿಳಿದುಬಂದಿದೆ.

- ಮಹಾರಾಷ್ಟ್ರ 3,15,849 ಸೋಂಕಿತರನ್ನು ಹೊಂದುವ ಮೂಲಕ ದೇಶದಲ್ಲೇ ಅತಿ ಹೆಚ್ಚು ಏಡ್ಸ್ ಸೋಂಕಿತರನ್ನು ಎರಡನೇ ರಾಜ್ಯವೆನಿಸಿದೆ.
- ಕರ್ನಾಟಕ ರಾಜ್ಯ ಮೂರನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ 2,09,368 ಏಡ್ಸ್/ಎಚ್ಐವಿ ಸೋಂಕಿತರು ಇರುವುದಾಗಿ ಹೇಳಲಾಗಿದೆ.
- ತಮಿಳುನಾಡು, ಪಶ್ಚಿಮ ಬಂಗಾಳ, ಗುಜರಾತ್ ಮತ್ತು ಬಿಹಾರ ಲಕ್ಷಕ್ಕಿಂತಲೂ ಹೆಚ್ಚು ಏಡ್ಸ್ ಪೀಡಿತರನ್ನು ಹೊಂದಿರುವ ಪ್ರಮುಖ ರಾಜ್ಯಗಳು.

**'ಕೇರಳ ಫೀಡ್ಸ್' ನಿಂದ ಆನೆಗಳಿಗೆ ರೆಡಿಮೇಡ್ ಪೌಷ್ಠಿಕ ಆಹಾರ ಉತ್ಪಾದನೆ**

ಆನೆಗಳನ್ನು ಸಾಕುವ ಕೇರಳದ ಜನರು ಪ್ರತಿ ದಿನವೂ ಕಾಡುಮೇಡಿಂದ ಹುಲ್ಲು, ತರಕಾರಿ ಸೇರಿದಂತೆ ಅಗತ್ಯ ವಸ್ತುಗಳನ್ನು ಒದಗಿಸುವುದು ಇತ್ತೀಚಿನ ದಿನಗಳಲ್ಲಿ ಸಾಧ್ಯವಿಲ್ಲದ ಮಾತು. ಹೀಗಾಗಿ ಆನೆಗಳು ಪೌಷ್ಠಿಕಾಂಶ ಕೊರತೆಯಿಂದ ಬಳಲುವಂತಾಗಿದೆ. ಆನೆಗಳನ್ನು ಸಾಕುವ ಭಾರೀ ಶ್ರೀಮಂತರೂ ಸಹ ಈ ಸಮಸ್ಯೆಯಿಂದ ಕಂಗೆಟ್ಟು ಹೋಗಿದ್ದಾರೆ. ಕೇರಳದಲ್ಲಿ ಆನೆಯನ್ನು ಮನೆಯಲ್ಲಿ ಸಾಕುವ ಶ್ರೀಮಂತರ ಸಂಖ್ಯೆ ಸಾಕಷ್ಟು ದೊಡ್ಡದಾಗಿಯೇ ಇದೆ. ಆದರೆ ಅವುಗಳಿಗೆ ಅಗತ್ಯ ಪೌಷ್ಠಿಕಾಂಶವುಳ್ಳ ಆಹಾರವನ್ನು ನಿತ್ಯ ಒದಗಿಸುವುದು ಸಾಧ್ಯವಿಲ್ಲವಾಗಿದೆ. ಈ ಸಮಸ್ಯೆ ನಿವಾರಿಸುವ ಉದ್ದೇಶದಿಂದ ಸರಕಾರಿ ಸ್ವಾಮ್ಯದ ಕೇರಳ ಫೀಡ್ಸ್, ಆನೆಗಳಿಗೆಂದೇ ಪ್ಯಾಕೆಟ್ ಆಹಾರ ತಯಾರಿಸಲು ಮುಂದಾಗಿದೆ.

**ಹೇಗಿರಲಿದೆ ಆಹಾರ ?**

- ತೆಂಗಿನ ಗರಿ, ವಿಟಮಿನ್ , ಖನಿಜ, ಕೊಯ್ಲಿನ ಬಳಿಕ ಉಳಿಯುವ ಹಸಿರು ಕಾಂಡಗಳು, ಕಬ್ಬಿನ ಜಲ್ಲೆಗಳು ಮತ್ತು ಆನೆ ಇಷ್ಟಪಡುವ ಇತರ ಸೊಪ್ಪುಗಳನ್ನು ಸೇರಿಸಿ ಪೌಷ್ಟಿಕ ಆಹಾರ ತಯಾರಿಸಲಾಗುವುದು.
- ಆನೆಗಳ ಗಾತ್ರಕ್ಕೆ ತಕ್ಕಂತೆ ಆಹಾರದ ಪೊಟ್ಟಣವೂ ಸಾಕಷ್ಟು ದೊಡ್ಡದಾಗಿರುತ್ತದೆ.
- ಆನೆಗಳ ಆಹಾರ ತಯಾರಿಸುವ ಯಂತ್ರೋಪಕರಣಗಳನ್ನು ರಾಷ್ಟ್ರೀಯ ಪಶು ಸಂಗೋಪನಾ ಅಭಿವೃದ್ಧಿ ಮಂಡಳಿಯ ಸಹಕಾರದಿಂದ ತಯಾರಿಸಲಾಗಿದ್ದು, ಆಸಾರ ತಯಾರಿಸುವ ಘಟಕವನ್ನು ಪಾಲಕ್ಕಾಡ್ ಜಿಲ್ಲೆಯ ಮುತ್ತಲಮಾಡದಲ್ಲಿ ಸ್ಥಾಪಿಸಲಾಗಿದೆ.

ಆದರೆ ಆನೆಗಳಿಗೆ ಆ ರೆಡಿಮೇಡ್ ಆಹಾರ ಇಷ್ಟವಾಗುತ್ತದೆಯೇ ಎನ್ನುವುದನ್ನು ಇನ್ನೂ ಪರಿಶೀಲಿಸಿ ನೋಡಿಲ್ಲ. ಇಷ್ಟವಾದರೆ ಮಾತ್ರ ಕೇರಳಿಗರು ಇನ್ನು ಆನೆ ಹೊಟ್ಟೆಗೆ ಕಾಸಿನ ಮಜ್ಜಿಗೆ ಎಂದು ಗೊಣಗುವ ಅಗತ್ಯವಿಲ್ಲ.

# ಕ್ರೀಡೆ

## ಅತಿ ಹೆಚ್ಚು ಸಂಭಾವನೆ ಪಡೆಯುವ ಫೋರ್ಬ್ಸ್ ಆಟಗಾರ್ತಿಯರ ಪಟ್ಟಿಯಲ್ಲಿ ಮರೀಯಾ ಶರಪೋವಾ ನಂ.1

ರಷ್ಯಾದ ಖ್ಯಾತ ಟೆನ್ನಿಸ್ ಆಟಗಾರ್ತಿ ಮರೀಯಾ ಶರಪೋವಾ ವಿಶ್ವದಲ್ಲೇ ಅತ್ಯಂತ ಹೆಚ್ಚು ಸಂಭಾವನೆ ಪಡೆಯುವ ಆಟಗಾರ್ತಿ ಎನ್ನುವ ಕೀರ್ತಿಯನ್ನು ಮುಂದುವರೆಸಿದ್ದಾರೆ. ಫೋರ್ಬ್ಸ್ ನಿಯತಕಾಲಿಕೆ ಹೊರತಂದಿರುವ ವಿಶ್ವದಲ್ಲೇ ಹೆಚ್ಚು ಸಂಭಾವನೆ ಪಡೆಯುವ ಆಟಗಾರ್ತಿಯ ಪಟ್ಟಿಯಲ್ಲಿ ಶರಪೋವಾ ಸತತ 9 ನೇ ಬಾರಿ ನಂ.1 ಸ್ಥಾನವನ್ನು ಕಾಯ್ದುಕೊಂಡಿದ್ದಾರೆ.

- ಫೋರ್ಬ್ಸ್ ಹೇಳಿಕೆಯ ಪ್ರಕಾರ ಶರಪೋವಾ ಜೂನ್ 2012 ರಿಂದ ಜೂನ್ 2013 ರ ಅವಧಿಯಲ್ಲಿ 29 ಮಿಲಿಯನ್ ಡಾಲರ್ ಗಳಿಸಿದ್ದಾರೆ. 26 ವರ್ಷದ ಈ ಆಟಗಾರ್ತಿ ಸಂಭಾವನೆ ಮತ್ತು ಪ್ರಚಾರ ರಾಯಭಾರಿಯಾಗಿ ಕಾಣಿಸಿಕೊಳ್ಳುವ ಮೂಲಕ ಅತಿ ಹೆಚ್ಚು ಸಂಭಾವನೆಯನ್ನು ಗಳಿಸಿದ್ದಾರೆ.
- ಅಮೆರಿಕಾದ ಸೆರೆನಾ ವಿಲಿಯಮ್ಸ್ ರವರು 20.5 ಮಿಲಿಯನ್ ಡಾಲರ್ ಸಂಭಾವನೆ ಗಳಿಸುವ ಮೂಲಕ ವಿಶ್ವದ ಎರಡನೇ ಶ್ರೀಮಂತ ಆಟಗಾರ್ತಿ ಎನಿಸಿಕೊಂಡಿದ್ದಾರೆ.
- ಲಿ ನಾ ಮತ್ತು ವಿಕ್ಟೋರಿಯಾ ಅಜೆರೆಂಕಾ ಟಾಪ್ 10 ಒಳಗೆ ಕಾಣಿಸಿಕೊಂಡಿರುವ ಇತರೆ ಪ್ರಮುಖ ಟೆನ್ನಿಸ್ ಪಟುಗಳು.
- ವಿಶೇಷವೆಂದರೆ ಟಾಪ್ 10 ರಲ್ಲಿ ಈ ಬಾರಿ ಏಳು ಟೆನ್ನಿಸ್ ಆಟಗಾರರೇ ಕಾಣಿಸಿಕೊಂಡಿದ್ದಾರೆ.

## ಸೆರೆನಾ ಮತ್ತು ರಫೆಲ್ ಮಡಿಲಿಗೆ ರೋಜರ್ ಟೆನ್ನಿಸ್ ಪ್ರಶಸ್ತಿ

ಸ್ಪೇನ್ ನ ರಫೆಲ್ ನಡಾಲ್ ಅವರು ರೋಜರ್ ಟೆನ್ನಿಸ್ ಪ್ರಶಸ್ತಿಯ ಪುರುಷರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಗೆಲುವು ಸಾಧಿಸುವ ಮೂಲಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

- ಫೈನಲ್ ಪಂದ್ಯದಲ್ಲಿ ಕೆನಡಾದ ಮಿಲೊಸ್ ರಯೊನಿಕ್ ಅವರನ್ನು 6-2, 6-2 ರಲ್ಲಿ ಸೋಲಿಸುವ ಮೂಲಕ ನಡಾಲ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.
- ಇದು ರಫೆಲ್ ಗೆದ್ದ ಮೂರನೇ ರೋಜರ್ ಪ್ರಶಸ್ತಿ. ಈ ಹಿಂದೆ 2005 ಮತ್ತು 2008 ರಲ್ಲಿ ನಡಾಲ್ ಈ ಪ್ರಶಸ್ತಿಯನ್ನು ಗೆದ್ದಿದ್ದರು. ಒಟ್ಟಾರೆಯಾಗಿ ರಫೆಲ್ ಗೆ ಇದು 25 ನೇ ಎಟಿಪಿ ವರ್ಲ್ಡ್ ಟೂರ್ ಪ್ರಶಸ್ತಿ ಹಾಗೂ ಈ ಋತುವಿನಲ್ಲಿ ಅವರಿಗೆ ಸಂದ 8 ನೇ ಪ್ರಶಸ್ತಿ.

## ಮಹಿಳೆಯರ ಸಿಂಗಲ್ಸ್ ಸೆರೆನಾಗೆ ಪ್ರಶಸ್ತಿ:

ಅಮೆರಿಕಾದ ನಂ.1 ಟೆನ್ನಿಸ್ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಮಹಿಳೆಯರ ಸಿಂಗಲ್ಸ್ ನ ಫೈನಲ್ ಪಂದ್ಯದಲ್ಲಿ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಮತ್ತೊಮ್ಮೆ ತಮ್ಮ ಸಾಮರ್ಥ್ಯವನ್ನು ಎತ್ತಿಹಿಡಿದರು.

- ರೋಮಾನಿಯಾದ ಆಟಗಾರ್ತಿ "ಸೊರನಾ ಸಿರ್ಸ್ಟಿಯಾ" ಅವರನ್ನು 6-2, 6-0 ಅಂತರದಲ್ಲಿ ಸದೆಬಡಿಯುವ ಮೂಲಕ ಸೆರೆನಾ ಈ ಪ್ರಶಸ್ತಿಗೆ ಭಾಜನರಾದರು. ಸೆರೆನಾಗೆ ಇದು ಮೂರನೇ ರೋಜರ್ ಟೆನ್ನಿಸ್ ಪ್ರಶಸ್ತಿ ಹಾಗೂ 54ನೇ ವೃತ್ತಿಪರ ಪ್ರಶಸ್ತಿಯಾಗಿದೆ.

**ಥಾಯ್ಲೆಂಡ್ ನ ರಾಚನಾಕ್ ಇಂಟನಾನ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್**

ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಪಿ.ವಿ. ಸಿಂಧು ಎದುರು ಗೆಲುವು ಪಡೆದು ಫೈನಲ್ ಪ್ರವೇಶಿಸಿದ್ದ ಥಾಯ್ಲೆಂಡ್‌ನ ರಾಚನಾಕ್ ಇಂಟನಾನ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್‌ನ ಮಹಿಳಾ ವಿಭಾಗದ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರು. ನಾಲ್ಕನೇ ಶ್ರೇಯಾಂಕ ಹೊಂದಿರುವ ಇಂಟನಾನ್ ಫೈನಲ್ ಪಂದ್ಯದಲ್ಲಿ ಅಗ್ರಸ್ಥಾನದಲ್ಲಿರುವ ಲೀ ಕ್ಸಿರುಯಿ ಅವರನ್ನು ಮಣಿಸಿ ಅಚ್ಚರಿಯ ಫಲಿತಾಂಶಕ್ಕೆ ಕಾರಣರಾದರು ಇಂಟನಾನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಥಾಯ್ಲೆಂಡ್‌ನ ಮೊದಲ ಆಟಗಾರ್ತಿ ಎನ್ನುವ ಗೌರವ ಪಡೆದುಕೊಂಡರು.

**ಸಿಂಧುಗೆ ಪದಕ ಪ್ರದಾನ:**

ಮಹಿಳಾ ವಿಭಾಗದ ಸಿಂಗಲ್ಸ್‌ನಲ್ಲಿ ಭಾರತಕ್ಕೆ ಮೊದಲ ಪದಕ ತಂದುಕೊಟ್ಟ ಹೈದರಾಬಾದ್‌ನ ಸಿಂಧು ಅವರಿಗೆ ಕಂಚಿನ ಪದಕ ಪ್ರದಾನ ಮಾಡಲಾಯಿತು. ಸೆಮಿಫೈನಲ್ ಪಂದ್ಯದಲ್ಲಿ ಸಿಂಧು 10-21, 13-21ರಲ್ಲಿ ಇಂಟನಾನ್ ಎದುರು ಸೋಲು ಕಂಡಿದ್ದರು. ಪಾಲ್ಗೊಂಡ ಮೊದಲ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಸಿಂಧು ಅವರಿಗೆ ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ)15 ಲಕ್ಷ ರೂಪಾಯಿ ಬಹುಮಾನ ಪ್ರಕಟಿಸಿದೆ

**ಡಾನ್ ಮಡಿಲಿಗೆ ಪ್ರಶಸ್ತಿ:**

ಚೀನಾದ ಲಿನ್ ಡಾನ್ ಪುರುಷರ ವಿಭಾಗದ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಈ ಮೂಲಕ ಅವರು ವಿಶ್ವ ಚಾಂಪಿಯನ್‌ಷಿಪ್ ನಲ್ಲಿ ಐದು ಬಾರಿ ಪ್ರಶಸ್ತಿ ಗೆದ್ದ ಚೀನಾದ ಮೊದಲ ಆಟಗಾರ ಎನಿಸಿಕೊಂಡರು. ಫೈನಲ್ ಪಂದ್ಯದಲ್ಲಿ ಡಾನ್ ಮಲೇಷ್ಯಾದ ಲೀ ಚೊಂಗ್ ವೇಯಿ (ಗಾಯಗೊಂಡು ನಿವೃತ್ತಿ) ಎದುರು ಜಯ ಪಡೆದರು. ಮೊದಲ ಎರಡೂ ಗೇಮ್‌ಗಳಲ್ಲಿ ತಲಾ ಒಂದು ಗೆಲುವು ಪಡೆದಿದ್ದ ಉಭಯ ಆಟಗಾರರು ಮೂರನೇ ಗೇಮ್‌ನಲ್ಲಿ ಪೈಪೋಟಿ ನಡೆಸುತ್ತಿದ್ದರು. ಈ ವೇಳೆ ವೇಯಿ ಗಾಯಗೊಂಡು ನಿವೃತ್ತಿ ಪಡೆದ ಕಾರಣ ಪದಕ ಚಿನ್ನದ ಅದೃಷ್ಟ ಡಾನ್ ಪಾಲಾಯಿತು.

**ಜಮೈಕಾದ ಉಸೇನ್ ಬೋಲ್ಟ್ ವಿಶ್ವದ ಅತ್ಯಂತ ವೇಗದ ಓಟಗಾರ**

ವಿಶ್ವದ ಅತ್ಯಂತ ವೇಗದ ಓಟಗಾರ ಜಮೈಕಾದ ಉಸೇನ್ ಬೋಲ್ಟ್ ಬಹು ನಿರೀಕ್ಷಿತ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನ 100 ಮೀ. ಓಟದಲ್ಲೂ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಕಳೆದ ಬಾರಿ ಕೈ ತಪ್ಪಿದ ಚಿನ್ನದ ಪದಕ ಈ ಬಾರಿ ಬೋಲ್ಟ್

ಮುಡಿಗೇರಿದೆ. ಕಳೆದ ಬಾರಿಯ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಫೌಲ್ ಆಗಿ ಪದಕ ವಂಚಿತರಾಗಿದ್ದ ಬೋಲ್ಟ್ ಫೈನಲ್‌ನಲ್ಲಿ 9.77 ಸೆಕೆಂಡ್‌ಗಳಲ್ಲಿ ಮೊದಲಿಗರಾಗಿ ಗುರಿ ಮುಟ್ಟಿದರು.

ಅಸಾಫಾ ಪೊವೆಲ್, ಯೋಹಾನ್ ಬ್ಲ್ಯಾಕ್ ಮತ್ತು ಟೈಸನ್ ಗೇ ಅನುಪಸ್ಥಿತಿ ನಡುವೆಯೂ ತೀವ್ರ ಪೈಪೋಟಿ ಎದುರಿಸಿದ ಬೋಲ್ಟ್ ಚಿನ್ನದ ಪದಕ ಗೆಲ್ಲುವಲ್ಲಿ ಯಶಸ್ವಿಯಾದರು. ಬೋಲ್ಟ್‌ಗೆ ತೀವ್ರ ಪೈಪೋಟಿ ಒಡ್ಡಿದ ಅಮೆರಿಕದ ಜಸ್ಟಿನ್ ಗ್ಯಾಟ್ಲಿನ್ 0.08 ಸೆಕೆಂಡ್ ಗಳಿಂದ ಹಿಂದೆ ಉಳಿದು ಬೆಳ್ಳಿ ಪದಕಕ್ಕೆ ತೃಪ್ತರಾದರು. ಜಮೈಕಾದ ಮತ್ತೊಬ್ಬ ಸ್ಪರ್ಧಿ ನೆಸ್ಟಾ ಕಾರ್ಟರ್ (9.95ಸೆ.) ಕಂಚಿನ ಪದಕ ಗಳಿಸಿದರು.

## ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ ಪಡೆದ ಶೂಟರ್ ರಂಜನ್ ಸೋಧಿ

ವಿಶ್ವಕಪ್ ಶೂಟಿಂಗ್ ನಲ್ಲಿ ಚಿನ್ನದ ಪದಕ ವಿಜೇತ ಶಾರ್ಪ್ ಶೂಟರ್ ರಂಜನ್ ಸೋಧಿ ಅವರು ಖೇಲ್‌ರತ್ನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಭಾರತ ಕ್ರಿಕೆಟ್ ಆಟಗಾರ ವಿರಾಟ್ ಕೊಹ್ಲಿ ಅವರು ಅರ್ಜುನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ,2013ರ ಕ್ರೀಡಾ ಪ್ರಶಸ್ತಿಗೆ ಹಲವು ಕ್ರೀಡಾಪಟುಗಳ ಹೆಸರುಗಳನ್ನು ಶಿಫಾರಸು ಮಾಡಲಾಗಿದ್ದು, ಈ ಪೈಕಿ ಭಾರತೀಯ ಕ್ರೀಡಾರಂಗದ ಒಟ್ಟು 14 ಆಟಗಾರರ ಹೆಸರು ಬಹಿರಂಗಗೊಂಡಿದೆ. ಜಿಂಬಾಬ್ವೆಯಲ್ಲಿ ನಡೆದ ಏಕದಿನ ಸರಣಿಯನ್ನು ಭಾರತ ಕ್ಲೀನ್ ಸ್ವೀಪ್ ಮಾಡುವಲ್ಲಿ ಮಹತ್ತರ ಪಾತ್ರ ನಿರ್ವಹಿಸಿದ ಭಾರತ ಕ್ರಿಕೆಟ್ ತಂಡದ ಆಟಗಾರ ವಿರಾಟ್ ಕೊಹ್ಲಿ ಅವರ ಹೆಸರನ್ನು ಅರ್ಜುನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಅಂತೆಯೇ ವಿಶ್ವ ಶೂಟಿಂಗ್ ಸ್ಪರ್ಧೆಯಲ್ಲಿ ಸತತ ಎರಡು ಬಾರಿ ಚಿನ್ನದ ಪದಕ ಗಳಿಸಿದ ಶಾರ್ಪ್ ಶೂಟರ್ ರೊಂಜನ್ ಸೋಧಿ ಅವರನ್ನು ರಾಜೀವ್ ಗಾಂಧಿ ಖೇಲ್‌ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇತ್ತೀಚೆಗೆ ನಡೆದ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಕಂಚಿನ ಪದಕ ಸಾಧಿಸಿದ ಪಿ.ವಿ. ಸಿಂಧು ಅವರ ಹೆಸರು ಕೂಡ ಅರ್ಜುನ ಪ್ರಶಸ್ತಿ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದು, ಪಟ್ಟಿಯಲ್ಲಿರುವ ಕ್ರೀಡಾ ಪಟುಗಳ ಹೆಸರು ಈ ಕೆಳಗಿನಂತಿದೆ.

**ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ:-** ರಂಜನ್ ಸೋಧಿ (ಶೂಟಿಂಗ್)

**ಅರ್ಜುನ ಪ್ರಶಸ್ತಿ:-**

ವಿರಾಟ್ ಕೊಹ್ಲಿ(ಕ್ರಿಕೆಟ್), ಚೆಕ್ರೊವೊಲು ಸ್ವುರೊ(ಆರ್ಚರಿ), ರಂಜಿತ್ ಮಹೇಶ್ವರಿ(ಅಥ್ಲೆಟಿಕ್ಸ್), ಪಿ.ವಿಯ.ಸಿಂಧು(ಬ್ಯಾಡ್ಮಿಂಟನ್), ಕವಿತಾ ಚಹಲ್(ಬಾಕ್ಸಿಂಗ್), ರೂಪೇಶ್ ಶಾ(ಸ್ನೂಕರ್), ಗಗನ್ ಜೀತ್ ಬುಲ್ಲರ್(ಗಾಲ್ಫ್), ಸಾಬಾ ಅಂಜುಮ್(ಹಾಕಿ), ರಾಜ್ ಕುಮಾರಿ ರಾಥೋಡ್(ಶೂಟಿಂಗ್), ಜೋಶ್ನಾ ಚಿನ್ನಪ್ಪ(ಸ್ಕ್ವ್ಯಾಷ್), ಮೌಮದಾಸ್(ಟೇಬಲ್ ಟೆನ್ನಿಸ್), ನೆಹಾ ರತಿ(ರೆಸ್ಟ್‌ಲಿಂಗ್), ಧರ್ಮೇಂದ್ರ ದಲಾಲ್(ರೆಸ್ಟ್‌ಲಿಂಗ್), ಅಮಿತ್ ಕುಮಾರ್ ಸರೋಹ(ಅಥ್ಲೆಟಿಕ್ಸ್),

## ಕ್ರೀಡಾ ರಂಗದಲ್ಲೀಗ “ಬ್ರಾಕೆಟ್ ಫಿಕ್ಸಿಂಗ್” ತಂತ್ರ ಎಂಬ ಮೋಸದಾಟ

ಸ್ಪಾಟ್ ಮತ್ತು ಮ್ಯಾಚ್ ಫಿಕ್ಸಿಂಗ್‌ಗಳಿಗಿಂತಲೂ ಅಪಾಯಕಾರಿಯಾದ 'ಬ್ರಾಕೆಟ್' ಫಿಕ್ಸಿಂಗ್ ಎಂಬ ಹೊಸ ತಂತ್ರ ಕ್ರೀಡಾ ಕ್ಷೇತ್ರಕ್ಕೆ ಕಾಲಿಟ್ಟಿದೆ ಎಂದು ಆಸ್ಟ್ರೇಲಿಯಾದ ಮಾಜಿ ನಾಯಕರೊಬ್ಬರು ಆತಂಕ ವ್ಯಕ್ತಪಡಿಸಿದ್ದಾರೆ. ಹೆರಾಲ್ಡ್ ಸನ್ ಪತ್ರಿಕೆ ಪ್ರಕಟಿಸಿರುವ 'ದಿ

ಮೀನಿಂಗ್ ಆಫ್ ಲಕ್' ಕೃತಿಯಲ್ಲಿ ಇವರು ಈಗಾಗಲೇ 'ಬ್ರಾಕೆಂಟ್ ಫಿಕ್ಸಿಂಗ್' ಅಪಾಯದ ಕುರಿತು ಎಚ್ಚರಿಕೆ ನೀಡಿದ್ದಾರೆ. ಭವಿಷ್ಯದಲ್ಲಿ ಇದು ಸ್ಪಾಟ್ ಫಿಕ್ಸಿಂಗ್‌ಗಿಂತ ಹೆಚ್ಚು ಅಪಾಯಕಾರಿಯಾಗಲಿದ್ದು, ಆಟಗಾರರ ಸಾಚಾತನ ಪತ್ತೆಗೆ ಸುಳ್ಳು ಪತ್ತೆ ಯಂತ್ರ ಬಳಕೆಗೆ ಸಲಹೆ ನೀಡಿದ್ದಾರೆ.

**ಬ್ರಾಕೆಟ್ ಫಿಕ್ಸಿಂಗ್ ಹೇಗೆ?**

ಕೆಲವು ಮೋಸದಾಟ ಆಡುವ ಆಟಗಾರರೇ ಪಂದ್ಯವನ್ನು ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾರೆ. ಇವರು ಯಾವುದೇ ವಿಚಾರಣೆಗೆ ಸಿಕ್ಕುವುದಿಲ್ಲ. ಆದ್ದರಿಂದ ಸುಳ್ಳು ಪತ್ತೆ ಯಂತ್ರದ ಮೂಲಕ ಇಂತಹ ಆಟಗಾರರನ್ನು ಪತ್ತೆ ಹಚ್ಚಬಹುದಾಗಿದೆ. ಅಲ್ಲದೇ ತಪ್ಪು ಮಾಡದ ಆಟಗಾರ ಕೂಡ ಕಳಂಕದಿಂದ ಮುಕ್ತವಾಗಬಹುದು ಎಂದು ಅಭಿಪ್ರಾಯಪಟ್ಟರು. ಒಂದು ವೇಳೆ ನಾಯಕ ಬ್ರಾಕೆಟ್ ಫಿಕ್ಸಿಂಗ್‌ನಲ್ಲಿ ಭಾಗಿಯಾದರೆ ಫಿಕ್ಸಿಂಗ್ ಅತ್ಯಂತ ಪರಿಣಾಮಕಾರಿ ಹಾಗೂ ನಿಯಮಿತವಾಗಿ ನಡೆಯುತ್ತಾ ಸಾಗುತ್ತದೆ ಖಾಸಗಿ ಒಡೆತನದಲ್ಲಿ ಜಗತ್ತಿನಾದ್ಯಂತ ಟಿ-20 ಲೀಗ್‌ಗಳು ನಡೆಯುತ್ತಿರುವುದು ಫಿಕ್ಸಿಂಗ್ ಹೆಚ್ಚಲು ಪ್ರಮುಖ ಕಾರಣವಾಗಿದೆ. ಫ್ರಾಂಚೈಸಿಯ ಯಾವುದೋ ಒಬ್ಬ ವ್ಯಕ್ತಿ ತಂಡದ ಆಯ್ಕೆ ಹಾಗೂ ತಂತ್ರಗಾರಿಕೆಯ ಮಾಹಿತಿ ಪಡೆಯುತ್ತಾನೆ. ಇದು ಫಿಕ್ಸಿಂಗ್ ಹಾದಿ ಸರಳಗೊಳಿಸುತ್ತದೆ ಹೇಳಲಾಗಿದೆ.

**ಬ್ರಾಕೆಟ್ ಫಿಕ್ಸಿಂಗ್ ಅಂದರೇನು?**

ಸೀಮಿತ ಓವರ್‌ಗಳ ಪಂದ್ಯದಲ್ಲಿ ನಿದಿಷ್ಟ ಓವರ್‌ನಲ್ಲಿ ನಿರ್ದಿಷ್ಟ ರನ್ ನೀಡುವುದು ಅಥವಾ ವಿಕೆಟ್ ಪಡೆಯುವುದು.

## ಸೆರೆನಾ ಮತ್ತು ರಫೆಲ್ ನಡಾಲ್ ಮಡಿಲಿಗೆ ರೋಜರ್ ಟೆನ್ನಿಸ್ ಪ್ರಶಸ್ತಿ

ಸ್ಪೇನ್ ನ ರಫೆಲ್ ನಡೆಲ್ ಅವರು ರೋಜರ್ ಟೆನ್ನಿಸ್ ಪ್ರಶಸ್ತಿಯ ಪುರುಷರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಗೆಲುವು ಸಾಧಿಸುವ ಮೂಲಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

- ಫೈನಲ್ ಪಂದ್ಯದಲ್ಲಿ ಕೆನಡಾದ ಮಿಲೊಸ್ ರಯೊನಿಕ್ ಅವರನ್ನು 6-2, 6-2 ರಲ್ಲಿ ಸೋಲಿಸುವ ಮೂಲಕ ನಡಾಲ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.
- ಇದು ರಫೆಲ್ ಗೆದ್ದ ಮೂರನೇ ರೋಜರ್ ಪ್ರಶಸ್ತಿ. ಈ ಹಿಂದೆ 2005 ಮತ್ತು 2008 ರಲ್ಲಿ ನಡಾಲ್ ಈ ಪ್ರಶಸ್ತಿಯನ್ನು ಗೆದ್ದಿದ್ದರು. ಒಟ್ಟಾರೆಯಾಗಿ ರಫೆಲ್ ಗೆ ಇದು 25 ನೇ ಎಟಿಪಿ ವರ್ಲ್ಡ್ ಟೂರ್ ಪ್ರಶಸ್ತಿ ಹಾಗೂ ಈ ಋತುವಿನಲ್ಲಿ ಅವರಿಗೆ ಸಂದ 8 ನೇ ಪ್ರಶಸ್ತಿ.
- ಅಮೆರಿಕಾದ ನಂ.1 ಟೆನ್ನಿಸ್ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರು ರೋಜರ್ ಟೆನ್ನಿಸ್ ಕಪ್-2013 ರ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಮತ್ತೊಮ್ಮೆ ತಮ್ಮ ಸಾಮರ್ಥ್ಯವನ್ನು ಮೆರೆದಿದ್ದಾರೆ.
- ಫೈನಲ್ ಪಂದ್ಯದಲ್ಲಿ ಸೆರೆನಾ ಅವರು

**ಹೆಚ್ಚು ಸಂಭಾವನೆ ಪಡೆಯುವ ಕ್ರೀಡಾಪಟುಗಳಲ್ಲಿ 16 ನೇ ಸ್ಥಾನ ಪಡೆದ ಧೋನಿ**

ಭಾರತ ಕ್ರಿಕೆಟ್ ತಂಡದ ಯಶಸ್ವಿ ನಾಯಕ ಎನಿಸಿರುವ ಮಹೇಂದ್ರ ಸಿಂಗ್ ಧೋನಿ ವಿಶ್ವದಲ್ಲಿ ಅತಿ ಹೆಚ್ಚು ಸಂಭಾವನೆ ಪಡೆಯುವ ಕ್ರೀಡಾಪಟುಗಳ ಪಟ್ಟಿಯಲ್ಲಿ 16 ನೇ ಸ್ಥಾನ ಪಡೆದಿದ್ದಾರೆ. ಫೋರ್ಬ್ಸ್ ನಿಯತಕಾಲಿಕೆ ಹೊರತಂದಿರುವ ಈ ಪಟ್ಟಿಯಲ್ಲಿ ಧೋನಿ ಅವರು ರಫೆಲ್ ನಡಾಲ್ ಮತ್ತು ಉಸೇನ್ ಬೋಲ್ಟ್ ಅವರನ್ನು ಹಿಂದಿಕ್ಕಿ ಈ ಸಾಧನೆಗೈದಿದ್ದಾರೆ.

- ನಿಯತಕಾಲಿಕೆ ಪ್ರಕಾರ ಜೂನ್ 2012 ಮತ್ತು ಜೂನ್ 2013 ರ ಅವಧಿಯಲ್ಲಿ ಧೋನಿ ಒಟ್ಟು 180 ಕೋಟಿಯನ್ನು ಗಳಿಸಿದ್ದಾರೆ.
- ವಿಶ್ವದ ಶ್ರೇಷ್ಠ ಟೆನ್ನಿಸ್ ಪಟು ರಫೆಲ್ ನಡಾಲ್ ಹಾಗೂ ವೇಗದ ರನ್ನರ್ ಜಮೈಕಾದ ಉಸೇನ್ ಬೋಲ್ಟ್ ಅವರಿಗಿಂತಲೂ ಧೋನಿ ಪಟ್ಟಿಯಲ್ಲಿ ಮುಂದಿದ್ದಾರೆ.
- F1 ಫಾರ್ಮುಲಾ ರೇಸ್ ನ ಲೇವಿಸ್ ಹ್ಯಾಮಿಲ್ಟನ್ 19 ನೇ ಸ್ಥಾನ, ನೊವಿಕ್ ಜೊಕೊವಿಕ್ 28 ನೇ ಸ್ಥಾನ, ರಫೆಲ್ ನಡಾಲ್ 30 ನೇ ಸ್ಥಾನ ಮತ್ತು ಬೋಲ್ಟ್ 40 ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.
- ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತದ ಮತ್ತೊಬ್ಬ ಕ್ರೀಡಾಪಟು ಎಂದರೆ ಸಚಿನ್ ತೆಂಡೂಲ್ಕರ್. ಸಚಿನ್ 125 ಕೋಟಿ ಸಂಪಾದಿಸುವ ಮೂಲಕ ಪಟ್ಟಿಯಲ್ಲಿ 31 ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.
- ಅಮೆರಿಕಾದ ಪ್ರಖ್ಯಾತ ಗಾಲ್ಫ್ ಆಟಗಾರ ಟೈಗರ್ ವುಡ್ ಪಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ವುಡ್ ಅವರು ವಾರ್ಷಿಕ ಸಂಪಾದನೆ 78.1 ಮಿಲಿಯನ್ ಡಾಲರ್. ನಂತರದ ಸ್ಥಾನದಲ್ಲಿ ರೋಜರ್ ಫೆಡರರ್ ಮತ್ತು ಬಾಸ್ಕೆಟ್ ಬಾಲ್ ಆಟಗಾರ ಕೊಬೆ ಬ್ರ್ಯಾಂಟ್ ಮೂರನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ.
- ಇನ್ನು ಮಹಿಳಾ ಕ್ರೀಡಾಪಟುಗಳ ಪೈಕಿ ರಷ್ಯಾದ ಪ್ರಸಿದ್ಧ ಟೆನ್ನಿಸ್ ಆಟಗಾರ್ತಿ ಮರಿಯಾ ಶರಪೋವಾ ನಂ.1 ಸ್ಥಾನದಲ್ಲಿದ್ದಾರೆ. ಶರಪೋವಾ ಅವರು ಸತತವಾಗಿ 9ನೇ ವರ್ಷ ಈ ಖ್ಯಾತಿಗೆ ಒಳಗಾಗಿದ್ದಾರೆ.

**ಭ್ರಷ್ಟಾಚಾರಿ ವ್ಯಕ್ತಿಗಳು ಭಾರತೀಯ ಒಲಿಂಪಿಕ್ ಸಂಸ್ಥೆಯ (ಐಒಎ) ಚುನಾವಣೆಗಳಲ್ಲಿ ಸ್ಪರ್ಧಿಸುವಂತಿಲ್ಲ**

ಭ್ರಷ್ಟಾಚಾರದ ಆರೋಪ ಹೊತ್ತ ವ್ಯಕ್ತಿಗಳು ಭಾರತೀಯ ಒಲಿಂಪಿಕ್ ಸಂಸ್ಥೆಯ (ಐಒಎ) ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಿ ಅಂತಾರಾಷ್ಟ್ರೀಯ ಒಲಿಂಪಿಕ್ ಸಂಸ್ಥೆ ಪರಿಷ್ಕೃತ ಕರಡು ಪ್ರತಿ ಸಿದ್ಧಪಡಿಸಿದೆ. ಅಂತಾರಾಷ್ಟ್ರೀಯ ಒಲಿಂಪಿಕ್ ಸಂಸ್ಥೆ 43 ಪುಟಗಳ ಪರಿಷ್ಕೃತ ಸಂವಿಧಾನವನ್ನು ಕಳುಹಿಸಿಕೊಟ್ಟಿದೆ. ಐಒಎ ರೂಪಿಸಿದ ನೂತನ ಸಂವಿಧಾನದಲ್ಲಿ ಪ್ರಮುಖ ಮೂರು ವಿಭಾಗಗಳ ನಿಯಮಗಳಲ್ಲಿ ಬದಲಾವಣೆ ಮಾಡಲಾಗಿದೆ.

**ಬದಲಾವಣೆ ಏನು?**

- ಇದರಲ್ಲಿ ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳ ಮತದಾನದ ಹಕ್ಕು, ಮತ್ತು ರಾಜ್ಯ ಒಲಿಂಪಿಕ್ ಸಂಸ್ಥೆಗಳು ಮತ್ತು ಅದರ ಸಂವಿಧಾನ, ವಯೋಮಿತಿ ಹಾಗೂ ನಿಯಮಗಳಲ್ಲಿ ಬದಲಾವಣೆ ಸೇರಿವೆ.

- ಚುನಾವಣೆಗೆ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿ ಭಾರತೀಯ ನಾಗರೀಕನಾಗಿರಬೇಕು. ಕ್ರಿಮಿನಲ್ ಹಾಗೂ ಭ್ರಷ್ಟಾಚಾರ ಆರೋಪದಲ್ಲಿ ಶಿಕ್ಷೆಗೆ ಗುರಿಯಾಗಿರುವ ಅಥವಾ ದೋಷಾರೋಪಣಾ ಪಟ್ಟಿಯಲ್ಲಿ ದಾಖಲಾಗಿರುವ ವ್ಯಕ್ತಿ ಚುನಾವಣೆಗೆ ಸ್ಪರ್ಧಿಸುವಂತಿಲ್ಲ.
- ಐಒಎ ಪ್ರಧಾನ ಕಾರ್ಯದರ್ಶಿ, ಕಾರ್ಯಕಾರಿ ಸಮಿತಿ, ವಿವಿಧ ಸಮಿತಿ ಹಾಗೂ ಆಯೋಗಗಳಲ್ಲಿ ಸದಸ್ಯರಾಗಿರುವ ವ್ಯಕ್ತಿಗಳು ಅಥವಾ ಈ ಹಿಂದೆ ನಾನಾ ಕಾರಣಗಳಿಗಾಗಿ ಅಮಾನತುಗೊಂಡಿರುವವರು ಮತ್ತೆ ಅಧಿಕಾರಕ್ಕೆ ಬರುವಂತಿಲ್ಲ ಎಂದು ತಿಳಿಸಿದೆ.
- ಐಒಎ ಪ್ರಧಾನ ಕಾರ್ಯದರ್ಶಿ ಸೇರಿದಂತೆ ವಿವಿಧ ಪ್ರಮುಖ ಹುದ್ದೆಗಳಲ್ಲಿ ಇರುವ ಸದಸ್ಯರ ವಿರುದ್ಧ ಭಾರತದ ಯಾವುದೇ ನ್ಯಾಯಾಲಯದಲ್ಲಿ ದೂರು ದಾಖಲಾಗಿದ್ದರೆ ಅಥವಾ ಕ್ರಿಮಿನಲ್ ಅಥವಾ ಭ್ರಷ್ಟಾಚಾರದ ಆರೋಪ ಅಥವಾ ಶಿಕ್ಷೆಗೆ ಗುರಿಯಾಗಿದ್ದರೆ ಸಹಜವಾಗಿ ಸ್ಥಾನ ಕಳೆದುಕೊಳ್ಳಲಿದ್ದಾರೆ ಎಂದು ನೂತನ ನಿಯಮದಲ್ಲಿ ಹೇಳಲಾಗಿದೆ.

**ಡೋಪಿಂಗ್ ಕಳಂಕದಿಂದ ಕಪ್ಪುಪಟ್ಟಿಗೆ ಸೇರಿರುವ ಅಥ್ಲೀಟ್‌ಗಳಲ್ಲಿ ಭಾರತಕ್ಕೆ 2ನೇ ಸ್ಥಾನ**

ಇತ್ತೀಚೆಗಷ್ಟೇ ಅಥ್ಲೆಟಿಕ್ಸ್ ಫೆಡರೇಷನ್‌ನ ಅಂತಾರಾಷ್ಟ್ರೀಯ ಸಂಸ್ಥೆ (ಐಎಎಎಫ್) ಬಿಡುಗಡೆ ಮಾಡಿರುವ ವರದಿಯ ಪ್ರಕಾರ ಡೋಪಿಂಗ್ ಕಳಂಕದಿಂದ ಕಪ್ಪುಪಟ್ಟಿಗೆ ಸೇರಿರುವ ಅಥ್ಲೀಟ್‌ಗಳಲ್ಲಿ ಭಾರತ 2ನೇ ಸ್ಥಾನ ಪಡೆದಿದೆ. ಆದರೆ, ರಷ್ಯಾ ಮೊದಲ ಸ್ಥಾನದಲ್ಲಿದೆ.

**ಅಂಕಿ-ಅಂಶಗಳು:**

- ಡೋಪಿಂಗ್‌ನಲ್ಲಿ ಸಿಲುಕಿಕೊಂಡಿರುವ ಹಿನ್ನೆಲೆಯಲ್ಲಿ 43 ಭಾರತೀಯ ಅಥ್ಲೀಟ್‌ಗಳು ಸದ್ಯಕ್ಕೆ ಐಎಎಎಫ್‌ನಿಂದ ಅಮಾನತುಗೊಂಡಿದ್ದಾರೆ.
- ಇನ್ನು ರಷ್ಯಾದ 44 ಅಥ್ಲೀಟ್‌ಗಳು ಅಮಾನತುಗೊಂಡಿದ್ದಾರೆ.
- ಭಾರತ ಕಳಂಕಿತರ ಪಟ್ಟಿಯಲ್ಲಿ ಕಳೆದ ತಿಂಗಳವರೆಗೂ ಅಗ್ರಸ್ಥಾನದಲ್ಲಿತ್ತು. ಆದರೆ, ಇತ್ತೀಚೆಗಷ್ಟೇ ಭಾರತದ 9 ಅಥ್ಲೀಟ್ ಗಳು ನಿಷೇಧ ಮುಕ್ತಾಯಗೊಳಿಸುವುದರೊಂದಿಗೆ 52 ಇದ್ದ ಸಂಖ್ಯೆ 43ಕ್ಕೆ ಕುಸಿದಿದೆ.
- ಶಾಟ್ ಪುಟ್ ಥ್ರೋವರ್ ಸೌರಭ್ ವಿಜಿ ಮತ್ತು ಡಿಸ್ಕಸ್ ಥ್ರೋವರ್ ಆಕಾಶ್ ಅಂಟಿಲ್ ಸೇರಿದಂತೆ ಭಾರತದಲ್ಲಿ ಹೆಚ್ಚಿನವರು ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್‌ಗಳಾಗಿದ್ದಾರೆ.

**ವಿಶ್ವದ ಅತಿ ವೇಗದ ಓಟಗಾರ ಉಸೇನ್ ಬೋಲ್ಟ್ ಮತ್ತು ಶೆಲ್ಲಿ ಆಯನ್ ಫ್ರೇಸರ್ ವಿಶಿಷ್ಟ ಸಾಧನೆ**

ವೇಗದ ಓಟಗಾರರಾದ ಜಮೈಕಾದ ಉಸೇನ್ ಬೋಲ್ಟ್ ಹಾಗೂ ಶೆಲ್ಲಿ ಆಯನ್ ಫ್ರೇಸರ್-ಪ್ರೈಸ್ 14ನೇ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ತಲಾ ಮೂರು ಚಿನ್ನದ ಪದಕ ಗೆದ್ದು ಅಮೋಘ ಸಾಧನೆಗೆ ಕಾರಣರಾಗಿದ್ದಾರೆ.

**ವಿಶಿಷ್ಟ ಸಾಧನೆ:**

- ಬೋಲ್ಟ್ ಹಾಗೂ ಫ್ರೈಸ್ ಈ ಚಾಂಪಿಯನ್‌ಷಿಪ್‌ನ 100 ಮೀ. ಹಾಗೂ 200 ಮೀ. ಓಟದಲ್ಲೂ ಚಿನ್ನದ ಪದಕ ಗೆದ್ದಿದ್ದರು.
- ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಬೋಲ್ಟ್ ಅತೀ ಯಶಸ್ವಿ ಅಥ್ಲೀಟ್ ಎನಿಸಿದರು. ಏಕೆಂದರೆ ಹಿಂದಿನ ಚಾಂಪಿಯನ್‌ಷಿಪ್‌ಗಳು ಸೇರಿದಂತೆ ಅವರು ಗೆದ್ದ ಒಟ್ಟು ಚಿನ್ನದ ಪದಕ ಎಂಟು.
- ಈ ಮೂಲಕ ಅಮೆರಿಕದ ಕಾರ್ಲ್ ಲೂಯಿಸ್ (8 ಚಿನ್ನ, 1 ಬೆಳ್ಳಿ, 1 ಕಂಚು), ಮೈಕಲ್ ಜಾನ್ಸನ್ (8 ಚಿನ್ನ) ಹಾಗೂ ಆಯಲಿಸನ್ ಫೆಲಿಕ್ಸ್ (8 ಚಿನ್ನ, 1 ಬೆಳ್ಳಿ, 1 ಕಂಚು) ಅವರಂಥ ಅಥ್ಲೀಟ್‌ಗಳನ್ನು ಹಿಂದಿಕ್ಕಿದ ಶ್ರೇಯ ಪಡೆದರು.
- ಬೋಲ್ಟ್ 2007ರ ಕೂಟದಲ್ಲಿ ಎರಡು ಬೆಳ್ಳಿ ಪದಕ ಕೂಡ ಜಯಿಸಿದ್ದರು. ಹಾಗಾಗಿ ವಿಶ್ವದಾಖಲೆಗೆ ಕಾರಣರಾದರು.

**ಪ್ರಪ್ರಥಮ ಐಬಿಎಲ್ (ಇಂಡಿಯನ್ ಬ್ಯಾಡ್ಮಿಂಟನ್ ಲೀಗ್) ಆವೃತ್ತಿಯ ಪ್ರಶಸ್ತಿ ಎತ್ತಿಹಿಡಿದ ಹೈದರಾಬಾದ್ ಹಾಟ್ ಶಾಟ್ಸ್**

ಭಾರತದ ಅಗ್ರಮಾನ್ಯ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಇಂಡಿಯನ್ ಬ್ಯಾಡ್ಮಿಂಟನ್ ಲೀಗ್‌ನ ಚೊಚ್ಚಲ ಆವೃತ್ತಿಯ ಫೈನಲ್ ಪಂದ್ಯದಲ್ಲಿ ಪಿ.ವಿ ಸಿಂಧೂ ಎದುರು ಪ್ರಾಬಲ್ಯ ಮೆರೆದು, ಅವಧ್ ವಾರಿಯರ್ಸ್ ವಿರುದ್ಧ 3-1 ಅಂತರದಲ್ಲಿ ಹೈದರಾಬಾದ್ ಹಾಟ್‌ಶಾಟ್ಸ್ ಐಪಿಎಲ್ ಪ್ರಶಸ್ತಿ ಎತ್ತಿ ಹಿಡಿಯುವಂತೆ ಮಾಡಿದರು. ಪಂದ್ಯದಲ್ಲಿ ಆರಂಭಿಕ ಹಿನ್ನಡೆ ಅನುಭವಿಸಿದ್ದ ಹೈದರಾಬಾದ್ ಹಾಟ್‌ಶಾಟ್ಸ್ ತಂಡಕ್ಕೆ 2012 ರ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತೀಯ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ, ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಕಂಚಿನ ಸಾಧನೆ ಮಾಡಿದ ಉದಯೋನ್ಮುಖ ಪ್ರತಿಭೆ ಪಿ.ವಿ ಸಿಂಧೂ ಅವರಿಗೆ ಟೂರ್ನಿಯಲ್ಲಿ ಎರಡನೇ ಬಾರಿ ಸೋಲುಣಿಸಿ ಸಮಬಲ ತಂದುಕೊಟ್ಟರು. ಚೊಚ್ಚಲ ಆವೃತ್ತಿಯಲ್ಲಿ ಪ್ರಶಸ್ತಿ ಬಾಚಿಕೊಂಡ ಹೈದರಾಬಾದ್ ಹಾಟ್‌ಶಾಟ್ಸ್ 3.5 ನಗದು ಬಹುಮಾನ ತನ್ನ ತೆಕ್ಕೆಗೆ ಹಾಕಿಕೊಂಡರೆ, ರನ್ನರ್ ಅಪ್ ಪ್ರಶಸ್ತಿ ಪಡೆದ ಅವಧ್ ವಾರಿಯರ್ಸ್ 1.5 ಕೋಟಿ ಪಡೆಯಿತು.

**ಸೈನಾ ಟೂರ್ನಿಯ ಅತ್ಯುತ್ತಮ ಆಟಗಾರ್ತಿ:**

ಇಂಡಿಯನ್ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯ ಮೊದಲ ಆವೃತ್ತಿಯಲ್ಲಿ ಹೈದರಾಬಾದ್ ಹಾಟ್‌ಶಾಟ್ಸ್ ತಂಡದ ಆಧಾರ ಸ್ತಂಭವಾಗಿದ್ದ ಸೈನಾ ನೆಹ್ವಾಲ್ ಟೂರ್ನಿಯಲ್ಲಿ ಆಡಿದ ಒಟ್ಟು ಏಳೂ ಪಂದ್ಯದಲ್ಲಿ ಗೆಲುವಿನ ನಗೆ ಬೀರಿದ್ದಾರೆ. ಈ ಮೂಲಕ ಟೂರ್ನಿಯಲ್ಲಿ ಹೈದರಾಬಾದ್ ಹಾಟ್‌ಶಾಟ್ಸ್ ಪ್ರಶಸ್ತಿ ಎತ್ತಿಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದ ಸೈನಾ ಟೂರ್ನಿಯ ಅತ್ಯುತ್ತಮ ಆಟಗಾರ್ತಿ ಪ್ರಶಸ್ತಿ ಕೂಡ ಬಾಚಿಕೊಂಡಿದ್ದಾರೆ.

## ಸುದ್ಧಿಯಲ್ಲಿರುವ ವ್ಯಕ್ತಿಗಳು

### ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ನಿರ್ದೇಶಕರಾಗಿ "ವಮನ್ ಕೇಂದ್ರೆ (Waman Kendre)"

ಸುಮಾರು ಒಂದು ವರ್ಷದಿಂದ ನೇಮಕಾತಿಯಾಗದೇ ಖಾಲಿ ಇದ್ದ "ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ"ದ ನಿರ್ದೇಶಕ ಸ್ಥಾನಕ್ಕೆ ಸರ್ಕಾರ ಕೊನೆಗೂ ನೇಮಕಾರಿ ಮಾಡಿ ಆದೇಶ ಹೊರಡಿಸಿದೆ. ಖ್ಯಾತ ಹಿರಿಯ ರಂಗಕರ್ಮಿ "ವಮನ್ ಕೇಂದ್ರೆ" ಅವರು ಸಂಸ್ಥೆಯ ನೂತನ ನಿರ್ದೇಶಕರನ್ನಾಗಿ ನೇಮಕಮಾಡಲಾಗಿದೆ.

- ಕೇಂದ್ರೆ ಅವರು ಅಧಿಕಾರವಹಿಸಿಕೊಂಡ ದಿನದಿಂದ ಮುಂದಿನ ಐದು ವರ್ಷಗಳ ಕಾಲ ಅಥವಾ 62 ವರ್ಷ ತುಂಬುವ ವರೆಗೆ (ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ) ಈ ಸ್ಥಾನದಲ್ಲಿ ಇರಲಿದ್ದಾರೆ.
- ಅನುರಾಧ ಕಪೂರ್ ಅವರ ನಿವೃತ್ತಿಯಿಂದ ಈ ಹುದ್ದೆ ತೆರವಾಗಿತ್ತು. ಜುಲೈ 2012 ರಂದು ಅನುರಾಧ ಕಪೂರ್ ಅವರು ನಿರ್ದೇಶಕ ಸ್ಥಾನದಿಂದ ನಿವೃತ್ತಿ ಹೊಂದಿದ್ದರು. ಆದರೆ ಹೊಸಬರ ನೇಮಕಾತಿಯಾಗುವವರೆಗೆ ಅವರನ್ನು ಈ ಹುದ್ದೆಯಲ್ಲಿ ಮುಂದುವರೆಸಲಾಗಿತ್ತು.
- ಮೂಲತಃ ಮಹಾರಾಷ್ಟ್ರದವರಾದ ಕೇಂದ್ರೆ ಕೇರಳ ಜಾನಪದ ಕಲೆಯಲ್ಲಿ ಸಂಶೋಧನೆಯನ್ನು ಮಾಡಿದ್ದಾರೆ. ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಹಳೆಯ ವಿದ್ಯಾರ್ಥಿಯಾಗಿರುವ ಕೇಂದ್ರೆ ದಲಿತ ಪರ ನಾಟಕಗಳಲ್ಲಿ ಅಪಾರ ಹೆಸರುಗಳಿಸಿದ್ದಾರೆ.
- ಶ್ಯಾಮ್ ಬೆನೆಗಲ್, ಗಿರೀಶ್ ಕಾರ್ನಾಡ್ ಮತ್ತು ಸತೀಶ್ ಅಲೇಕರ್ ಅವರುಗಳು ಈ ಹುದ್ದೆಗಾಗಿ ಸ್ಪರ್ಧೆಯಲ್ಲಿದ್ದ ಇತರೆ ಆಕಾಂಕ್ಷಿಗಳು. ಇವರಲ್ಲದೇ ಬೆಂಗಳೂರಿನ ಅರುಂಧತಿ ನಾಗ್ ಅವರ ಹೆಸರನ್ನು ಸಹ ನಿರ್ದೇಶಕ ಹುದ್ದೆಗೆ ಪರಿಗಣಿಸಲಾಗಿತ್ತು.

### ಸಾರ್ಕ್ ಹೆಚ್‌ಐವಿ/ಏಡ್ಸ್ ಕುರಿತಾದ ಸದ್ಭಾವನಾ ರಾಯಭಾರಿ "ರುನ ಲೈಲಾ" ಭಾರತ ಭೇಟಿ

ಸಾರ್ಕ್ ಒಕ್ಕೂಟದ ಹೆಚ್‌ಐವಿ/ಏಡ್ಸ್ ಕುರಿತಾದ ಸದ್ಭಾವನಾ ರಾಯಭಾರಿಯಾದ "ರುನ ಲೈಲಾ" ಅವರು ಜುಲೈ 31 ರಿಂದ ಆಗಸ್ಟ್ 2 ರವರೆಗೆ ಭಾರತಕ್ಕೆ ಅಧಿಕೃತ ಪ್ರವಾಸ ಕೈಗೊಂಡಿದ್ದರು. ಹೆಚ್‌ಐವಿ/ಏಡ್ಸ್ ಬಾಧಿತ ರೋಗಿಗಳ ವಿರುದ್ಧ ಕಂಡುಬರುವ ತಾರತಮ್ಯವನ್ನು ನಿವಾರಣೆ ಬಗ್ಗೆ ಚರ್ಚಿಸುವ ಸಲುವಾಗಿ ರುನ ಅವರು ಈ ಪ್ರವಾಸವನ್ನು ಕೈಗೊಂಡಿದ್ದರು.

- ಬಾಂಗ್ಲದೇಶದವರಾದ "ರುನ ಲೈಲ" ಅವರನ್ನು ಸಾರ್ಕ್ ಹೆಚ್‌ಐವಿ/ಏಡ್ಸ್ ಕುರಿತಾದ ಸದ್ಭಾವನಾ ರಾಯಭಾರಿಯಾಗಿ ಕೆಲವು ತಿಂಗಳ ಹಿಂದೆ ನೇಮಕ ಮಾಡಲಾಗಿದ್ದು, 2015 ರ ತನಕ ಅವರು ಮುಂದುವರೆಯಲಿದ್ದಾರೆ.
- ಭಾರತದ ಖ್ಯಾತ ನಟ ಅಜಯ್ ದೇವಗನ್ ಅವರನ್ನು ಸಹ ಇದರ ರಾಯಭಾರಿಯಾಗಿ ನೇಮಕಮಾಡಲಾಗಿದೆ. ಪಾಕಿಸ್ತಾನದ ಶರ್ಮಿನ್ ಒಬೈದ್ ಚಿನಾಯ್ ಅವರು ಸಹ ಈ ಕಾರ್ಯಕ್ರಮದ ರಾಯಭಾರಿಯಾಗಿದ್ದಾರೆ.

<u>ಚರ್ಚಿಸಲಾದ ವಿಷಯಗಳು</u>:

- ರುನ ಲೈಲ ಭೇಟಿಯ ವೇಳೆ ಸಾರ್ಕ್ ವಲಯ ದೇಶಗಳಲ್ಲಿ ಹೆಚ್‌ಐವಿ/ಏಡ್ಸ್ ಬಾಧಿತರ ಸಂಬಂಧಿತ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಯಿತು.
- ಹೆಚ್‌ಐವಿ/ಏಡ್ಸ್ ರೋಗಿಗಳ ಆರೈಕೆ, ಸೂಕ್ತ ಚಿಕಿತ್ಸೆ ಮತ್ತು ಸುಧಾರಣೆ ಬಗ್ಗೆ ಅಗತ್ಯ ಕ್ರಮಕೈಗೊಳ್ಳಲು ಚರ್ಚಿಸಲಾಯಿತು. ಇದೇ ವೇಳೆ ರುನಾ ಅವರು ಏಡ್ಸ್ ನಿಯಂತ್ರಣ ಇಲಾಖೆಗಳಿಗೂ ಭೇಟಿ ನೀಡಿದ್ದರು.

<u>ಭಾರತೀಯ ರಿಜರ್ವ್ ಬ್ಯಾಂಕ್ ಗವರ್ನರ್ ಆಗಿ ರಘುರಾಮ್ ರಾಜನ್ ನೇಮಕ</u>

ಭಾರತೀಯ ರಿಜರ್ವ್ ಬ್ಯಾಂಕಿನ ಗವರ್ನರ್ ಆಗಿ ರಘುರಾಮ್ ರಾಜನ್ ಅವರು ನೇಮಕವಾಗಿದ್ದಾರೆ. ಈ ನೇಮಕಾತಿ ಆದೇಶ ಹೊರಬೀಳುತ್ತಿದ್ದಂತೆ ಡಾಲರ್ ಎದುರು ಸಾರ್ವಕಾಲಿಕ ಕುಸಿತ ಕಂಡಿದ್ದ ರುಪಾಯಿ ಮೌಲ್ಯ ಚೇತರಿಕೆ ಕಂಡಿದೆ. ಮುಂಬರುವ ಸೆಪ್ಟೆಂಬರ್ ತಿಂಗಳಿನಲ್ಲಿ ಆರ್‌ಬಿಐ ಹಾಲಿ ಗವರ್ನರ್ ಡಿ.ಸುಬ್ಬಾರಾವ್ ಅವರ ಅಧಿಕಾರಾವಧಿ ಪೂರ್ಣಗೊಳ್ಳಲ್ಲಿದ್ದು, ಅವರ ಸ್ಥಾನಕ್ಕೆ ಕೇಂದ್ರ ಸರ್ಕಾರ ಹಿರಿಯ ಅರ್ಥಿಕ ಸಲಹೆಗಾರ ರಘುರಾಮ್ ರಾಜನ್ ಅವರನ್ನು ನೇಮಿಸಿದೆ. ಪ್ರಧಾನಿ ಮನಮೋಹನ್ ಸಿಂಗ್ ಅವರು ರಘುರಾಮ್ ರಾಜನ್ ಅವರನ್ನು ನೇಮಕ ಮಾಡಿದ್ದು, ಸೆಪ್ಟೆಂಬರ್ 4ರಂದು ಅವರು ಅಧಿಕಾರ ವಹಿಸಿಕೊಳ್ಳಲ್ಲಿದ್ದಾರೆ.

<u>ಕೈಗಾ ಅಣುಶಕ್ತಿ ವಿದ್ಯುತ್ ಉತ್ಪಾದನಾ ಘಟಕ ದೇಶದಲ್ಲೇ ನಂ.1</u>

ಕೈಗಾ ಅಣು ವಿದ್ಯುತ್ ಘಟಕಗಳು ಇದುವರೆಗೆ ಒಟ್ಟು ಎಂಟು ಬಾರಿ ನಿರಂತರವಾಗಿ 300ಕ್ಕೂ ಹೆಚ್ಚು ದಿನಗಳ ಕಾಲ ವಿದ್ಯುತ್ ಉತ್ಪಾದಿಸಿ, ದೇಶದಲ್ಲಿಯೇ ದಾಖಲೆ ಸೃಷ್ಟಿಸಿವೆ. 1969 ರಲ್ಲಿಯೇ ತಾರಾಪುರದ ಮೂಲಕ ದೇಶದಲ್ಲಿ ಅಣು ವಿದ್ಯುತ್ ಯೋಜನೆ ಆರಂಭವಾಗಿತ್ತು. ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ, ಕರ್ನಾಟಕ, ಗುಜರಾತ್ ಸೇರಿದಂತೆ ದೇಶದಲ್ಲಿ ಒಟ್ಟು 20ಕ್ಕೂ ಹೆಚ್ಚು ಅಣು ವಿದ್ಯುತ್ ಘಟಕಗಳಿವೆ. ಬೇರೆಡೆ ಇದುವರೆಗೆ ಒಟ್ಟು 25 ಸಲ ಮಾತ್ರ ಅಣು ವಿದ್ಯುತ್ ಘಟಕಗಳು ನಿರಂತರವಾಗಿ 300ಕ್ಕೂ ಹೆಚ್ಚು ದಿನ ವಿದ್ಯುತ್ ಉತ್ಪಾದಿಸಿವೆ. ಇವುಗಳಲ್ಲಿ ಕೈಗಾದ ಘಟಕಗಳು 8 ಬಾರಿ 300ಕ್ಕೂ ಹೆಚ್ಚು ದಿನಗಳ ಕಾಲ ವಿದ್ಯುತ್ ಉತ್ಪಾದಿಸಿವೆ. ಅದರಲ್ಲೂ ಕೈಗಾದ ಎರಡು ಘಟಕಗಳು 2000ರಲ್ಲಿ ಹಾಗೂ ಮತ್ತೆರಡು ಘಟಕಗಳು 2007 ಹಾಗೂ 2010ರಲ್ಲಿ ನಿರ್ಮಾಣಗೊಂಡಿದ್ದರೂ ಇಂಥ ದಾಖಲೆಗಳು ನಿರ್ಮಾಣವಾಗಿವೆ.

**ಕೈಗಾ ಸಾಧನೆ ಬಗ್ಗೆ:**

- ಕೈಗಾದ ಅಣು ವಿದ್ಯುತ್ ಘಟಕಗಳು ಸುರಕ್ಷತೆ ಹಾಗೂ ವಿದ್ಯುತ್ ಉತ್ಪಾದನೆಯಲ್ಲಿ ದೇಶದ ಇತರೆ ಘಟಕಗಳಿಗಿಂತ ಹೆಚ್ಚು ಸಾಧನೆ ಮಾಡಿವೆ.
- ಕೈಗಾದ 1ನೇ ಘಟಕ 4 ಬಾರಿ ಈ ಸಾಧನೆ ಮಾಡಿದೆ. ಅಂದರೆ 315 ದಿನಗಳ ಕಾಲ ವಿದ್ಯುತ್ ಉತ್ಪಾದಿಸುತ್ತಿದ್ದು, ಈಗಲೂ ಸತತವಾಗಿ ವಿದ್ಯುತ್ ಉತ್ಪಾದಿಸುತ್ತಿವೆ.

- ವಿದ್ಯುತ್ ಉತ್ಪಾದನೆ ಹಾಗೂ ಸುರಕ್ಷತೆಗಾಗಿ ನೀಡಲಾಗುವ ವಿವಿಧ ಪ್ರಶಸ್ತಿ, ಪುರಸ್ಕಾರಗಳನ್ನು ಈ ಕೈಗಾ ಘಟಕಗಳು ಪಡೆದಿವೆ.
- ಕೈಗಾದ 1 ಹಾಗೂ 2ನೇ ಘಟಕಗಳಿಗೆ 2011ರಲ್ಲಿ ಸುರಕ್ಷಾ ಪುರಸ್ಕಾರ ದೊರೆತಿದೆ
- ಈ ಎರಡು ಘಟಕಗಳಿಗೆ 2012ರಲ್ಲಿ ಪವರ್‌ಲೈನ್ ಅವಾರ್ಡ್, ಕೈಗಾ ಘಟಕಗಳಿಗೆ ಎರಡು ಬಾರಿ ರಾಷ್ಟ್ರೀಯ ಸುರಕ್ಷಾ ಮಂಡಳಿಯಿಂದ ಉನ್ನತ ಸುರಕ್ಷಾ ಪುರಸ್ಕಾರ ಕೂಡ ದೊರೆತಿದೆ
- 3 ಹಾಗೂ 4ನೇ ಘಟಕಗಳಿಗೆ 2011ರಲ್ಲಿ ಫೈಯರ್ ಸೇಫ್ಟಿ ಅವಾರ್ಡ್ ಪ್ರಾಪ್ತಿಯಾಗಿತ್ತು

**“ರಾಷ್ಟ್ರೀಯ ನಾಟಕ ಶಾಲೆ (National School of Drama)” ಅಧ್ಯಕ್ಷರಾಗಿ “ರತನ್ ಥಿಯಮ್”**

ಖ್ಯಾತ ರಂಗಕರ್ಮಿ ಮಣಿಪುರದ “ರತನ್ ಥಿಯಮ್” ಅವರನ್ನು ರಾಷ್ಟ್ರೀಯ ನಾಟಕ ಶಾಲೆಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ರತನ್ ಥಿಯಮ್ ಅವರನ್ನು ನೇಮಕಮಾಡಿ ಆದೇಶ ಹೊರಡಿಸಿದ್ದು, ರಾಷ್ಟ್ರೀಯ ನಾಟಕ ಶಾಲೆಯ ನೀತಿ ಮತ್ತು ನಿಯಮದಂತೆ ಥಿಯಮ್ ಅವರು ಅಧಿಕಾರವಹಿಸಿಕೊಂಡ ದಿನದಿಂದ ಮುಂದಿನ ನಾಲ್ಕು ವರ್ಷಗಳ ಕಾಲ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ.

- ಅಮಲ್ ಅಲ್ಲನ ಅವರಿಂದ ತೆರವಾಗಿದ್ದ ಸ್ಥಾನವನ್ನು ಥಿಯಮ್ ಅಲಂಕರಿಸಲಿದ್ದಾರೆ. ಅಲ್ಲನ ಅವರು ಸತತ ಎರಡು ಬಾರಿ ಈ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

**ಥಿಯಮ್ ಬಗ್ಗೆ:**

- ಜನವರಿ 20, 1948 ರಲ್ಲಿ ಜನಿಸಿದ ಥಿಯಮ್ “ರಾಷ್ಟ್ರೀಯ ನಾಟಕ ಶಾಲೆ”ಯ ಹಳೆಯ ವಿದ್ಯಾರ್ಥಿ ಸಹ ಆಗಿದ್ದಾರೆ.
- ಕೇವಲ ನಾಟಕ ರಚನೆ ಅಲ್ಲದೇ, ವರ್ಣಕಲೆ, ನಟನೆ ಮತ್ತು ನಿರ್ದೇಶನದಲ್ಲಿಯೂ ಥಿಯಮ್ ತಮ್ಮ ಛಾಪು ಮೂಡಿಸಿದ್ದಾರೆ.
- ರಂಗಭೂಮಿ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿರುವುದನ್ನು ಗಮನಿಸಿ 1987 ರಲ್ಲಿ ಸಂಗೀತಾ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ಥಿಯಮ್ ಅವರಿಗೆ ನೀಡಲಾಗಿದೆ.
- “ಚಕ್ರವ್ಯೂಹ”, “ಉರುಭಗಂ” ನಂತಹ ಪ್ರಸಿದ್ಧ ನಾಟಕಗಳನ್ನು ರಚಿಸಿರುವ ಇವರು ಇಂಪಾಲ್ ನಲ್ಲಿ ಕೋರಸ್ ರೆಪರ್ಟರಿ ಥಿಯೇಟರ್ ಎಂಬ ಸಂಸ್ಥೆಯ ಸಂಸ್ಥಾಪಕರೂ ಆಗಿದ್ದಾರೆ.

**ವಿಶ್ವಸಂಸ್ಥೆಯ “ವರ್ಲ್ಡ್ ನೀಡ್ಸ್ ಮೋರ್ (World Needs More)” ಅಭಿಯಾನಕ್ಕೆ ಅಮಿತಾಬ್ ಸೇರ್ಪಡೆ**

ಬಾಲಿವುಡ್ ನ ಮೇರು ನಟ ಹಾಗೂ ಯುನಿಸೆಫ್ (UNICEF) ನ ಸದ್ಭಾವನ ರಾಯಭಾರಿಯಾಗಿರುವ ಅಮಿತಾಬ್ ಬಚ್ಚನ್ ಅವರು ವಿಶ್ವಸಂಸ್ಥೆ ಇತ್ತೀಚೆಗೆ ಜಾರಿಗೊಳಿಸಿದ “ವರ್ಲ್ಡ್ ನೀಡ್ಸ್ ಮೋರ್” ಜಾಗತಿಕ ಅಭಿಯಾನಕ್ಕೆ ಸೇರ್ಪಡೆಗೊಂಡರು. ಈ ಮೂಲಕ ಅಭಿಯಾನಕ್ಕೆ ಕೈಜೋಡಿಸಿರುವ ವಿಶ್ವದ ಪ್ರಮುಖ ತಾರೆಗಳ ಪಟ್ಟಿಗೆ ಅಮಿತಾಬ್ ಸೇರ್ಪಡೆಗೊಂಡಂತಾಗಿದೆ.

- "ವರ್ಲ್ಡ್ ನೀಡ್ಸ್ ಮೋರ್" ಜಾಗತಿಕ ಅಭಿಯಾನವನ್ನು ವಿಶ್ವಸಂಸ್ಥೆ ಆಗಸ್ಟ್ 19, 2013 ರಂದು ಚಾಲನೆ ನೀಡಲಾಗಿದೆ. ಮಾನವೀಯ ಬಿಕ್ಕಟ್ಟಿನಿಂದ ಸಂಕಷ್ಟದಲ್ಲಿರುವ ಸಮುದಾಯಕ್ಕೆ ತುರ್ತು ನೆರವಾಗುವುದು ಈ ಅಭಿಯಾನದ ಗುರಿ.
- ಅಮಿತಾಬ್ ಅಲ್ಲದೇ, ವಿಶ್ವದ ಪ್ರಸಿದ್ಧ ತಾರೆಯರಾದ ಜೆನ್ನಿಫರ್ ಲೋಫೆಜ್, ಸುಸಾನ್ ಸರದನ್, ಟ್ರೇ ಸಂಗ್ಜ್ ಈಗಾಗಲೇ ಈ ಅಭಿಯಾನಕ್ಕೆ ಕೈ ಜೋಡಿಸಿದ್ದಾರೆ.
- ಬಚ್ಚನ್ ಅವರು 2005 ರಲ್ಲಿ ಯುನಿಸೆಫ್ ನ ಸದ್ಭಾವನ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ.

**<u>ತೆಲುಗು ಸಾಹಿತಿ ಮತ್ತು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತೆ 'ಮಾಲತಿ ಚಂಡೂರ್' ನಿಧನ</u>**

ಖ್ಯಾತ ತೆಲುಗು ಸಾಹಿತಿ, ಕಾದಂಬರಿಗಾರ್ತಿ ಮತ್ತು ಅಂಕಣಗಾರ್ತಿ ಮಾಲತಿ ಚಂಡೂರ್ ಅವರು ದೀರ್ಘಕಾಲದ ಅನಾರೋಗ್ಯದಿಂದ ನಿಧನರಾದರು. ಅವರಿಗೆ 84 ವರ್ಷ ವಯಸ್ಸಾಗಿತ್ತು.

- ಮಾಲತಿ ಚಂಡೂರ್ 1930 ರಲ್ಲಿ ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ನುಜ್ವಿದುವಲ್ಲಿ ಜನಿಸಿದರು. 1947 ರಲ್ಲಿ ನಾಗೇಶ್ವರ್ ರಾವ್ ಎಂಬುವವರನ್ನು ವರಿಸಿದ ಮೇಲೆ ಚೆನ್ನೈನಲ್ಲಿ ನೆಲೆಗೊಂಡರು.
- ಮಾಲತಿ ಅವರು 30 ಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ. ಇದಲ್ಲದೇ, 300 ಕ್ಕೂ ಹೆಚ್ಚು ಕೃತಿಗಳನ್ನು ತೆಲುಗಿಗೆ ತರ್ಜುಮೆ ಮಾಡಿದ್ದಾರೆ.
- ಚಂಪಕಂ, ಚೇದಪುರುಗುಲು, ಆಲೋಚಿಂಚು ಮತ್ತು ಸದ್ಯೋಗಂ ಅವರ ಪ್ರಮುಖ ಕಾದಂಬರಿಗಳು. ಇದರೊಂದಿಗೆ ಅನೇಕ ಸಣ್ಣ ಕಥೆಗಳನ್ನು ಮಾಲತಿ ಅವರು ರಚಿಸಿ ಸಾಹಿತ್ಯ ಲೋಕಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದರು.
- ಆಂಧ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1992 ರಲ್ಲಿ ಅವರ ಕಾದಂಬರಿ ಹೃದಯ ನೇತ್ರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**<u>ಪಂಡಿತ್ ರಂಗನಾಥ್ ಪಾಣಿಗ್ರಹಿ ನಿಧನ</u>**

ಶಾಸ್ತ್ರೀಯ ಸಂಗೀತ ಗಾಯಕ ಮತ್ತು ಸಂಗೀತಾ ನಿರ್ದೇಶಕ ಪಂಡಿತ್ ರಂಗನಾಥ್ ಪಾಣಿಗ್ರಹಿ ನಿಧನರಾದರು (80). ಜಯದೇವನ "ಗೀತಾ ಗೋವಿಂದ" ಗಾಯನದಿಂದ ಪಾಣಿಗ್ರಹಿ ವಿಶ್ವಮನ್ನಣೆಗಳಿಸಿದರು.

- ಪಾಣಿಗ್ರಹಿ ಆಗಸ್ಟ್ 10, 1934 ರಲ್ಲಿ ಓಡಿಶಾದ ಗುಣಪುರದಲ್ಲಿ ಜನಿಸಿದರು.
- ಜಯದೇವ ರಚಿಸಿರುವ ಗೀತಾ ಗೋವಿಂದ ವನ್ನು ಶಾಸ್ತ್ರೀಯ ಸಂಗೀತಾ ಶೈಲಿಯಲ್ಲಿ ಹಾಡುವ ಮೂಲಕ ಅತ್ಯಂತ ಪ್ರಸಿದ್ಧರಾಗಿದ್ದರು.
- ಗೀತಾ ಗೋವಿಂದಕ್ಕೆ ಅವರ ಸಂಗೀತಾ ಸಂಯೋಜನೆಗಾಗಿ ಫ್ರೆಂಚ್ ಸರ್ಕಾರ ಅವರಿಗೆ ಅತ್ಯುನ್ನತ ಪ್ರಶಸ್ತಿಯೊಂದನ್ನು ನೀಡಿ ಗೌರವಿಸಿತ್ತು. ಈ ಪ್ರಶಸ್ತಿಯನ್ನು ಪಡೆದ ಓಡಿಶಾದ ಮೊದಲ ವ್ಯಕ್ತಿ ಎಂಬ ಗೌರವಕ್ಕೆ ಪಾಣಿಗ್ರಹಿ ಪಾತ್ರರಾಗಿದ್ದರು.

- ಸಂಗೀತಾ ಕ್ಷೇತ್ರಕ್ಕೆ ಪಾಣಿಗ್ರಹಿ ನೀಡಿದ್ದ ಕೊಡುಗೆಯನ್ನು ಗಮನಿಸಿ ಭಾರತ ಸರ್ಕಾರ 2010 ರಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಅಲ್ಲದೇ ಸಂಗೀತಾ ನಾಟಕ ಅಕಾಡೆಮಿ ಪ್ರಶಸ್ತಿ, ಸಂಗೀತಾ ನಾಟಕ ಅಕಾಡೆಮಿ ಫೆಲೊಶಿಪ್ ಮತ್ತು ಜಯದೇವ್ ಸಮ್ಮಾನ್ ಪ್ರಶಸ್ತಿಗೂ ಅವರು ಭಾಜನರಾಗಿದ್ದರು.
- ಒಡಿಶಾ ಗಾಯಕರು ಮತ್ತು ನೃತ್ಯಪಟುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಅವರು 2001 ರಲ್ಲಿ ಸಂಜುಕ್ತಾ ಪಾಣಿಗ್ರಹಿ ಮೆಮೊರಿಯಲ್ ಟ್ರಸ್ಟ್ ಅನ್ನು ಸ್ಥಾಪಿಸಿದ್ದಾರೆ.

**<u>ಬಾಲ ಶಂಕರ್: ಲೋಕಸಭೆಯ ನೂತನ ಮಹಾ ಕಾರ್ಯದರ್ಶಿ</u>**

ಲೋಕ ಸಭಾ ಸ್ಪೀಕರ್ ಮೀರಾ ಕುಮಾರಿ ಅವರು ಎಸ್. ಬಾಲ ಶಂಕರ್ ಅವರನ್ನು ಲೋಕಸಭೆಯ ಮಹಾ ಕಾರ್ಯದರ್ಶಿಯಾಗಿ ನೇಮಕ ಮಾಡಿದ್ದಾರೆ. ಈವರೆಗೂ ಈ ಹುದ್ದೆಯನ್ನು ಅಲಂಕರಿಸಿದ್ದ ಟಿ.ಕೆ. ವಿಶ್ವನಾಥನ್ ಅವರ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಬಾಲ ಶಂಕರ್ ರವರನ್ನು ಈ ಹುದ್ದೆಗೆ ನೇಮಕಮಾಡಲಾಗಿದೆ.

**<u>ಬಾಲ ಶಂಕರ್</u>**:

- ಮೂಲತಃ ತಮಿಳುನಾಡಿನವರಾದ ಬಾಲ ಶಂಕರ್ ಈಗಾಗಲೇ ಲೋಕ ಸಭೆಯ ಸೆಕ್ರಟರಿಯೆಟ್ ನಲ್ಲಿ ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದಾರೆ. ಬಾಲ ಶಂಕರ್ 2ಜಿ ತರಂತರಂಗ ಹಂಚಿಕೆಗೆ ಸಂಬಂಧಿಸಿದಂತೆ ರಚಿಸಲಾಗಿದ್ದ ಜಂಟಿ ಸಂಸತ್ ಸಮಿತಿಯಲ್ಲಿ ಹೆಚ್ಚುವರಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.

**<u>ಕಾರ್ಯದರ್ಶಿ ನೇಮಕಾತಿ:</u>**

- ಲೋಕಸಭಾ ಕಾರ್ಯದರ್ಶಿಯ ನೇಮಕಾತಿಯನ್ನು ಸ್ಪೀಕರ್ ಅವರು ಪ್ರಧಾನ ಮಂತ್ರಿ, ವಿರೋಧ ಪಕ್ಷದ ನಾಯಕರ ಜತೆ ಸಮಾಲೋಚನೆ ನಡೆಸಿ ನೇಮಕ ಮಾಡುತ್ತಾರೆ.
- ಸಾಮಾನ್ಯವಾಗಿ ಲೋಕಸಭಾ ಸೆಕ್ರಟರಿಯೆಟ್ ನಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನೇ ಈ ಹುದ್ದೆಗೆ ಆಯ್ಕೆಮಾಡಲಾಗುತ್ತದೆ. ಇಲ್ಲವಾದಲ್ಲಿ ಭಾರತೀಯ ಆಡಳಿತ ಸೇವೆಯಲ್ಲಿರುವವರನ್ನು ನೇಮಕಮಾಡಲಾಗುತ್ತದೆ.
- ಲೋಕಸಭಾ ಕಾರ್ಯದರ್ಶಿಯು ಕ್ಯಾಬಿನೆಟ್ ಸೆಕ್ರೆಟರಿ ಹುದ್ದೆಗೆ ಸಮನಾಗಿರುತ್ತದೆ.

**<u>ಕಾರ್ಯದರ್ಶಿ ಕರ್ತವ್ಯಗಳು:</u>**

- ಲೋಕಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯಗಳ ಬಗ್ಗೆ ಸಂಪೂರ್ಣ ವರದಿಯನ್ನು ಸಿದ್ಧಪಡಿಸುವುದು.
- ಜಂಟಿ ಅಧಿವೇಶನದ ವೇಳೆ ಪ್ರತಿಯೊಬ್ಬ ಸದಸ್ಯರಿಗೂ ನಿಗದಿತ ಸಮಯಕ್ಕೆ ಹಾಜರಾಗುವಂತೆ ಸಮನ್ಸ್ ನೀಡುವುದು.

**ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆಗೆ ನಾಸ್ಡಾಕ್ ಷೇರುಪೇಟೆ ಗಂಟೆ ಬಾರಿಸುವ ಗೌರವ**

ಭ್ರಷ್ಟಾಚಾರದ ವಿರುದ್ಧ ಹೋರಾಟ ಸಂಘಟಿಸುವ ಮೂಲಕ ವಿಶ್ವದಾದ್ಯಂತ ಹೆಸರುವಾಸಿಯಾಗಿರುವ ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಆಗಸ್ಟ್16 ರಿಂದ ಎರಡು ವಾರಗಳ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಭೇಟಿಯ ವೇಳೆ ಹಜಾರೆ ಅವರು ನಾಸ್ಡಾಕ್ ಷೇರುಪೇಟೆಯಲ್ಲಿ ಗಂಟೆ ಬಾರಿಸುವ ಮೂಲಕ ಷೇರು ವ್ಯವಹಾರಕ್ಕೆ ಚಾಲನೆ ನೀಡಲಿದ್ದಾರೆ. ನ್ಯೂಯಾರ್ಕ್‌ನಲ್ಲಿ ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಭಾರತದ ಪಥಸಂಚಲನವನ್ನು ಮುನ್ನಡೆಸಲಿದ್ದಾರೆ. ಅಣ್ಣಾ ಹಜಾರೆ ಅವರನ್ನು ಬರಮಾಡಿಕೊಳ್ಳಲು ಅಮೆರಿಕದಲ್ಲಿರುವ ಭಾರತೀಯರು ಸರ್ವರೀತಿಯಲ್ಲೂ ಸಜ್ಜಾಗಿದ್ದು, ಕೆಂಪುಹಾಸಿನ ಸ್ವಾಗತ ಕೋರಲು ಸಿದ್ಧರಾಗಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಯಾವುದೇ ರಾಜಕೀಯೇತರ ವ್ಯಕ್ತಿಗೆ ಸಿಗದಷ್ಟು ಗೌರವಾದರಗಳೊಂದಿಗೆ ಅಣ್ಣಾ ಅವರನ್ನು ಬರಮಾಡಿಕೊಳ್ಳಲು ಉದ್ದೇಶಿಸಿದ್ದಾರೆ. ಅಮೆರಿಕದ ವಿದ್ಯಾರ್ಥಿಗಳು, ರಾಜಕಾರಣಿಗಳನ್ನು ಭೇಟಿ ಮಾಡಲಿರುವ ಅಣ್ಣಾ ಹಜಾರೆ ಭಾಷಣ ಕೇಳಲು ಭಾರತೀಯರಷ್ಟೇ ಅಲ್ಲದೆ, ಅಮೆರಿಕನ್ನರೂ ಕುತೂಹಲದಿಂದ ಕಾಯುತ್ತಿದ್ದಾರೆ. ಅಣ್ಣಾ ಅವರ ಸಂದರ್ಶನ ಪಡೆಯಲು ಅಮೆರಿಕ ಮಾಧ್ಯಮಗಳೂ ತುದಿಗಾಲಲ್ಲಿ ನಿಂತಿವೆ.

**ನೊಬೆಲ್ ಪ್ರಶಸ್ತಿ ವಿಜೇತ ಐರಿಷ್ ಕವಿ ಸೀಮಸ್ ಹೀನಿ ನಿಧನ**

ಐರಿಷ್ ಕವಿ, ನಾಟಕಕಾರ ಸೀಮಸ್ ಹೀನಿ (74) ಅಸ್ವಸ್ಥತೆಯಿಂದ ಡಬ್ಲಿನ್‌ನ ಆಸ್ಪತ್ರೆಯೊಂದರಲ್ಲಿ ಕೊನೆಯುಸಿರೆಳೆದರು. ಹೀನಿ ಜನಿಸಿದ್ದು ಉತ್ತರ ಐರ್ಲೆಂಡ್ ನ  ಮೊಸ್ಬಾನ್‌ನಲ್ಲಿ. ರೈತಾಪಿ ಕುಟುಂಬದಲ್ಲಿ ಬೆಳೆದ ಹೀನಿಯವರ ಬಾಲ್ಯದ ಹೊಳಹುಗಳು ಅವರ ಬರಹದಲ್ಲೂ ಇಣುಕುತ್ತವೆ.

**ಹಿನ್ನೋಟ:**

- 'ಡೆತ್ ಆಫ್ ಎ ನ್ಯಾಚುರಲಿಸ್ಟ್' ಹೀನಿಯವರ ಪ್ರಮುಖ ಕವನ ಸಂಕಲನ. ಈ ಮೂಲಕ ಸಾಹಿತ್ಯ ಜಗತ್ತಿನ ಗಮನವನ್ನು ತಮ್ಮೆಡೆಗೆ ಸೆಳೆದುಕೊಂಡರು.
- ಅವರ ಕೃತಿಗಳು ತಮ್ಮ ಕಾವ್ಯಾತ್ಮಕ ಗುಣ ಮತ್ತು ನೈತಿಕ ಮೌಲ್ಯಗಳ ಪ್ರತಿಪಾದನೆಗೆ ಹೆಸರಾದವು. ಅವರ ಬರಹದಲ್ಲಿ ಆಂಗ್ಲೋ ಸಾಕ್ಸನ್ ಛಾಪು ಕಂಡು ಬರುತ್ತದೆ.
- ಐರ್ಲೆಂಡ್‌ನ ಸಾಮಾಜಿಕ, ಸಾಂಸ್ಕೃತಿಕ, ರಾಜಕಾರಣದ ಒಳಹೊರಗುಗಳು ಅವರ ಕೃತಿಗಳಲ್ಲಿ ಅನಾವರಣಗೊಳ್ಳುತ್ತವೆ.
- ಇಂಗ್ಲಿಷ್ ಸಾಹಿತ್ಯದ ದಿಗ್ಗಜರಾದ ಜೇಮ್ಸ್ ಜಾಯ್ಸ್, ಯೇಟ್ಸ್, ಬರ್ನಾಡ್ ಷಾ ಮತ್ತು ಬೆಕೆಟ್‌ರ ಸಾಲಿನಲ್ಲೇ ಹೀನಿಯವರೂ ಹೆಸರೂ ಬರುತ್ತದೆ.
- ಸಾಹಿತ್ಯದಲ್ಲಿನ ತಮ್ಮ ಸಾಧನೆಗಾಗಿ 1995ರಲ್ಲಿ ನೋಬೆಲ್ ಸಾಹಿತ್ಯ ಪ್ರಶಸ್ತಿಗೂ ಭಾಜನರಾಗಿದ್ದರು.

**ಪ್ರಮುಖ ಕೃತಿಗಳು:**

'ಡೋರ್ ಇನ್ ಟು ದ ಡಾರ್ಕ್' (1969), 'ವಿಂಟರಿಂಗ್ ಔಟ್' (1972), ನಾರ್ತ್ (1975), ಫೀಲ್ಡ್ ವರ್ಕ್ (1979), ಸ್ಟೇಷನ್ ಐಲ್ಯಾಂಡ್ (1984) ದ ಹಾ ಲ್ಯಾಂಟರ್ನ್ (1987), ಸೀಯಿಂಗ್ ಥಿಂಗ್ಸ್ (1991), ದ ಸ್ಪಿರಿಟ್ ಲೆವೆಲ್ (1996), ಎಲೆಕ್ಟ್ರಿಕ್ ಲೈಟ್ (2001) ಮತ್ತು ಡಿಸ್ಟ್ರಿಕ್ಟ್ ಅಂಡ್ ಸರ್ಕಲ್ (2006) ಅವರ ಪ್ರಮುಖ ಕೃತಿಗಳು.

## ಪ್ರಶಸ್ತಿಗಳು

**ಮಲಯಾಳಂ ಕವಯತ್ರಿ "ಸುಗತಕುಮಾರಿ"ಗೆ 2012ನೇ ಸಾಲಿನ ಸರಸ್ವತಿ ಸಮ್ಮಾನ್**

ಮಲಯಾಳಂನ ಪ್ರಸಿದ್ದ ಕವಯತ್ರಿ "ಸುಗತಕುಮಾರಿ" ಅವರಿಗೆ 2012 ನೇ ಸಾಲಿನ ಪ್ರತಿಷ್ಠಿತ ಸರಸ್ವತಿ ಸಮ್ಮಾನ್ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಕೆ.ಕೆ ಬಿರ್ಲಾ ಫೌಂಡೇಶನ್ ವತಿಯಿಂದ ಸಾಹಿತಿಗಳಿಗೆ ನೀಡಲಾಗುವ ಪ್ರಶಸ್ತಿ ಇದಾಗಿದೆ. ಸುಪ್ರೀಂಕೋರ್ಟ್ ನ ನಿವೃತ್ತ ನ್ಯಾಯಮೂರ್ತಿಗಳಾದ ಆರ್.ಸಿ.ಲಹೋಟಿ ನೇತೃತ್ವದ ಆಯ್ಕೆ ಸಮಿತಿ ಸುಗತಕುಮಾರಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆಮಾಡಿದೆ.

- ಸುಗತ ಕುಮಾರಿ ಅವರ ಕವನ ಸಂಕಲನ "ಮಣಲೆಝುತು (Manalezhuthu)(ಮರಳ ಮೇಲೆ ಬರೆಯುವುದು)" ಕವನ ಸಂಕಲನಕ್ಕೆ ಈ ಪ್ರಶಸ್ತಿಯನ್ನು ನೀಡಲಾಗಿದೆ.
- ಮಣಲೆಝುತು 27 ಕವನಗಳ ಒಳಗೊಂಡಿದ್ದು, 2006 ರಲ್ಲಿ ಪ್ರಕಾಶನಗೊಂಡಿದೆ.
- ಪರಿಸರ ಹೋರಾಟಗಾರ್ತಿಯೂ ಆಗಿರುವ ಸುಗತಕುಮಾರಿ ಅವರು ಅನೇಕ ಕವಿತೆಗಳನ್ನು ರಚಿಸಿದ್ದಾರೆ. ಕೇರಳ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆಯಾಗಿಯೂ ಸುಗತಕುಮಾರಿ ಕಾರ್ಯನಿರ್ವಹಿಸಿದ್ದಾರೆ.

**ಸರಸ್ವತಿ ಸಮ್ಮಾನ್ ಪ್ರಶಸ್ತಿ:**

- ಸಾಹಿತ್ಯ ಲೋಕಕ್ಕೆ ಗಣನೀಯ ಕೊಡುಗೆ ನೀಡಿದವರನ್ನು ಪ್ರೋತ್ಸಾಹಿಸುವ ಸಲುವಾಗಿ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು 1991 ರಲ್ಲಿ ಕೆ.ಕೆ. ಬಿರ್ಲಾ ಫೌಂಡೇಶನ್ ಸ್ಥಾಪಿಸಿದೆ.
- ಸಂವಿಧಾನದ 22 ನೇ ಷೆಡ್ಯೂಲ್ ನಲ್ಲಿ ನಮೂದಾಗಿರುವ ಭಾಷೆಗಳಲ್ಲಿ ರಚಿಸಲಾಗುವ ಸಾಹಿತ್ಯಕ್ಕೆ ಪ್ರತಿವರ್ಷ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಪ್ರಶಸ್ತಿಯೂ 10 ಲಕ್ಷ ನಗದು, ಫಲಕ ಮತ್ತು ಉಲ್ಲೇಖವನ್ನು ಒಳಗೊಂಡಿದೆ.
- ಇಸ್ಮಾನ್ ಚೌಗತಿ ಈ ಪ್ರಶಸ್ತಿಯನ್ನು ಪಡೆದ ಮೊದಲಿಗರು. ಚೌಗತಿ ಅವರ ಉರ್ದು ಸಾಹಿತ್ಯಕ್ಕೆ ಈ ಪ್ರಶಸ್ತಿಯನ್ನು ನೀಡಲಾಗಿತ್ತು.
- 2010 ರಲ್ಲಿ ಕನ್ನಡದ ಖ್ಯಾತ ಲೇಖಕ ಎಸ್.ಎಲ್.ಭೈರಪ್ಪ ಅವರ "ಮಂದ್ರಾ" ಕಾದಂಬರಿಗೆ ಈ ಪ್ರಶಸ್ತಿಯನ್ನು ನೀಡಲಾಗಿತ್ತು.

**ಪ್ರಧಾನ ಮಂತ್ರಿ ಶ್ರಮ ಪ್ರಶಸ್ತಿ -2012 ಪ್ರಕಟ**

2012 ನೇ ಸಾಲಿನ ಪ್ರಧಾನ ಮಂತ್ರಿ ಶ್ರಮ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ 500 ಕ್ಕಿಂತಲೂ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಖಾಸಗಿ

ಒಡೆತನದ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 70 ದಕ್ಷ, ಪ್ರಾಮಾಣಿಕ ಕಾರ್ಮಿಕರನ್ನು ಈ ಬಾರಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

- ಪ್ರತಿಷ್ಠಿತ "ಶ್ರಮ ರತ್ನ" ಪ್ರಶಸ್ತಿಗೆ ಈ ಬಾರಿ ಒಂದು, "ಶ್ರಮ ಭೂಷಣ" ಪ್ರಶಸ್ತಿಗೆ ಎಂಟು, ಶ್ರಮ ವೀರ್/ಶ್ರಮ ವೀರಂಗನ ಪ್ರಶಸ್ತಿಗೆ 20 ಮತ್ತು ಶ್ರಮ ಶ್ರೀ/ಶ್ರಮ ದೇವಿ ಪ್ರಶಸ್ತಿಗೆ 41 ಹೆಸರನ್ನು ನಾಮನಿರ್ದೇಶನ ಮಾಡಲಾಗಿತ್ತು.
- ಸರ್ಕಾರಿ ಸ್ವಾಮ್ಯದ ಕಂಪನಿಗಳಿಂದ 48 ಕಾರ್ಮಿಕರನ್ನು ಹಾಗೂ ಉಳಿದ 22 ಕಾರ್ಮಿಕರನ್ನು ಖಾಸಗಿ ಒಡೆತನದ ಸಂಸ್ಥೆಗಳಿಂದ ಆಯ್ಕೆಮಾಡಲಾಗಿದೆ.

**ಶ್ರಮ ರತ್ನ**:

- ಪ್ರಧಾನ ಮಂತ್ರಿ ಶ್ರಮ ಪ್ರಶಸ್ತಿಗಳಲ್ಲಿಯೇ ಶ್ರಮ ರತ್ನ ಅತ್ಯುನ್ನತ ಪ್ರಶಸ್ತಿಯಾಗಿದೆ. ಕೇವಲ ಒಬ್ಬರಿಗೆ ನೀಡಲಾಗುವ ಶ್ರಮ ರತ್ನ ಪ್ರಶಸ್ತಿಯೂ 2 ಲಕ್ಷ ನಗದು ಫಲಕವನ್ನು ಒಳಗೊಂಡಿದೆ. 2012 ನೇ ಸಾಲಿನ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಜೆಮ್ ಶೆಡ್ ಪುರದ ಟಾಟಾ ಸ್ಟೀಲ್ ಲಿಮೆಟೆಡ್ ನ ಸುಬ್ರಾತ ಕುಮಾರ್ ಎಂಬುವವರಿಗೆ ನೀಡಲಾಗಿದೆ.

**ಶ್ರಮ ಭೂಷಣ**:

- ಪ್ರಧಾನ ಮಂತ್ರಿ ಶ್ರಮ ಪ್ರಶಸ್ತಿಗಳಲ್ಲಿ ಎರಡನೇ ಅತ್ಯುನ್ನತ ಪ್ರಶಸ್ತಿಯಾದ ಶ್ರಮ ಭೂಷಣ ಪ್ರಶಸ್ತಿಗೆ ಈ ಬಾರಿ ಎಂಟು ಮಂದಿಯನ್ನು ಆಯ್ಕೆಮಾಡಲಾಗಿದೆ. ಶ್ರಮ ಭೂಷಣ ಪ್ರಶಸ್ತಿಯು 1 ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿದೆ.

**ಶ್ರಮ ವೀರ್/ವಿರಂಗನ**:

- ಶ್ರಮ ವೀರ್/ವಿರಂಗನ ಪ್ರಶಸ್ತಿಗೆ ಈ ಬಾರಿ 20 ದಕ್ಷ ಕಾರ್ಮಿಕರನ್ನು ಆಯ್ಕೆಮಾಡಲಾಗಿದೆ. ಪ್ರಶಸ್ತಿಯು 60000 ನಗದು ಮತ್ತು ಫಲಕವನ್ನು ಒಳಗೊಂಡಿದೆ.

**ಶ್ರಮ ಶ್ರೀ/ಶ್ರಮ ದೇವಿ**:

- ಶ್ರಮ ಶ್ರೀ/ಶ್ರಮ ದೇವಿ ಪ್ರಶಸ್ತಿಗೆ 2012 ನೇ ಸಾಲಿನಲ್ಲಿ ಒಟ್ಟು 41 ಕಾರ್ಮಿಕರನ್ನು ಆಯ್ಕೆಮಾಡಲಾಗಿದೆ. ಶ್ರಮಶ್ರೀ ಪ್ರಶಸ್ತಿಯು 40000 ರೂ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

**ಪರಾದೀಪ್ ಬಂದರಿಗೆ " ಮೇಜರ್ ಪೋರ್ಟ್ ಆಫ್ ದಿ ಇಯರ್-2013" ಪ್ರಶಸ್ತಿಯ ಗರಿ**

ಭಾರತದ ಪರಾದೀಪ್ ಬಂದರು 2012-13 ನೇ ಸಾಲಿನ ತನ್ನ ಅತ್ಯುನ್ನತ ಕಾರ್ಯನಿರ್ವಹಣೆಗಾಗಿ "ಮೇಜರ್ ಪೋರ್ಟ್ ಆಫ್ ದಿ ಇಯರ್-2013" ಪ್ರಶಸ್ತಿ ಗಳಿಸಿದೆ. ಈ ಪ್ರಶಸ್ತಿಯನ್ನು ಚನ್ನೈನಲ್ಲಿ ನಡೆದ ಸಮಾರಾಭದಲ್ಲಿ ಪರಾದೀಪ್ ಬಂದರಿನ ಅಧ್ಯಕ್ಷರಾದ ಎಸ್.ಎಸ್.ಮಿಶ್ರ ರವರಿಗೆ ಪ್ರದಾನ ಮಾಡಲಾಯಿತು.

ಪರಾದೀಪ್ ಪೋರ್ಟ್ ಟ್ರಸ್ಟ್ 2012-13 ನೇ ಸಾಲಿನಲ್ಲಿ 56.55 ಮಿಲಿಯನ್ ಟನ್ ನಷ್ಟು ಸರಕನ್ನು ನಿರ್ವಹಿಸಿದೆ. 2011-12 ನೇ ಸಾಲಿಗಿಂತ 22 ಮಿಲಿಯನ್ ಟನ್ ನಷ್ಟು ಹೆಚ್ಚಿನ ಸರಕನ್ನು ಈ ಬಂದರು ನಿರ್ವಹಣೆ ಮಾಡಿದೆ. ಪರಾದೀಪ್ ಬಂದರು 2009-10 ನೇ ಸಾಲಿನಲ್ಲಿಯೂ ಸಹ ಈ ಪ್ರಶಸ್ತಿ ಪಡೆದಿತ್ತು ಎನ್ನುವುದು ವಿಶೇಷ.

**ಪರಾದೀಪ್ ಬಂದರಿನ ಬಗ್ಗೆ:**

- ಪರಾದೀಪ್ ಬಂದರು ದೇಶದ ಪ್ರಮುಖ ಬಂದರುಗಳಲ್ಲಿ ಒಂದಾಗಿದ್ದು, ದೇಶದ ಪೂರ್ವ ಮತ್ತು ಮಧ್ಯ ಭಾಗದ ಅಗತ್ಯಗಳನ್ನು ಪೂರೈಸುತ್ತಿದೆ
- ಈ ಬಂದರು ಒಡಿಸ್ಸಾ, ಜಾರ್ಖಂಡ್, ಛತ್ತೀಸ್ ಗಡ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ ಮತ್ತು ಬಿಹಾರ್ ರಾಜ್ಯಗಳಲ್ಲಿ ತನ್ನ ವ್ಯಾಪ್ತಿ ಹೊಂದಿದೆ.
- ಕಳೆದ 10 ವರ್ಷಗಳಲ್ಲಿ ತನ್ನ ಸರಕು ನಿರ್ವಹಣೆಯಲ್ಲಿ ಅತ್ಯುತ್ತಮ ನಿರ್ವಹಣೆ ಸಾಧಿಸಿದೆ
- ಈ ಬಂದರು ವರ್ಷದ 365 ದಿನಗಳೂ 24/7 ಕೆಲಸ ನಿರ್ವಹಿಸುತ್ತಿದೆ, ಅಲ್ಲದೆ ಪರಾದೀಪ್ ಬಂದರು ಅತ್ಯಾಧುನಿಕ ತಾಂತ್ರಿಕತೆ ಮತ್ತು ಸಲಕರಣೆಗಳನ್ನು ಹೊಂದಿದೆ.

**ಪ್ರತಿಷ್ಠಿತ 'ಗೂಗಲ್ ಇಂಪ್ಯಾಕ್ಟ್ ಪ್ರಶಸ್ತಿ'ಗೆ ಅರ್ಜಿ ಆಹ್ವಾನ: ಒಂದು ವರದಿ**

ಭಾರತ ಮತ್ತು ವಿಶ್ವದ ಜಟಿಲ ಸಮಸ್ಯೆಗಳನ್ನು ನಿರ್ವಹಿಸಲು ವಿಶಿಷ್ಟ ತಂತ್ರಜ್ಞಾನ ಕಂಡುಕೊಂಡ ಸಾಮಾಜಿಕ ಸಂಸ್ಥೆಗಳಿಂದ ಪ್ರತಿಷ್ಠಿತ 'ಗೂಗಲ್ ಇಂಪ್ಯಾಕ್ಟ್ ಪ್ರಶಸ್ತಿ'ಗೆ ಅರ್ಜಿ ಆಹ್ವಾನಿಸಲಾಗಿದೆ. ಸೃಜನಶೀಲತೆ ಹಾಗೂ ವೈವಿಧ್ಯತೆ ಹೊಂದಿರುವ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿವರ್ಷ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಪ್ರಮುಖ ಸಮಸ್ಯೆಗಳಿಗೆ ತಂತ್ರಜ್ಞಾನದ ಮೂಲಕ ಪರಿಹಾರ ನೀಡುವಂತಹ ಸ್ಥಳೀಯ ಲಾಭರಹಿತ ನಾಲ್ಕು ಅರ್ಹ ಸಂಸ್ಥೆಗಳನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಪ್ರಶಸ್ತಿಯು ತಲಾ ಮೂರು ಕೋಟಿ ರೂ. ಹಾಗೂ ವಿಜೇತ ಸಂಸ್ಥೆಯು ಅನ್ವೇಷಿಸಿದ ತಂತ್ರಜ್ಞಾನವನ್ನು ಕಾರ್ಯರೂಪಕ್ಕೆ ತರಲು ಗೂಗಲ್ ತಾಂತ್ರಿಕ ನೆರವು ನೀಡಲಿದೆ.

**ಆಯ್ಕೆ ಸಮಿತಿ:**

ಗೂಗಲ್ ಪ್ರಶಸ್ತಿ ಆಯ್ಕೆದಾರರ ಸಮಿತಿ ರಾಮ್ ಶ್ರೀರಾಮ್, ನಿಕೇಶ್ ಅರೋರಾ, ಜಾಕ್ವೆಲಿನ್ ಫುಲ್ಲರ್, ಅನು ಅಗಾ, ಥರ್ಮಾಕ್ಸ್, ಜಯಂತ್ ಸಿನ್ಹ, ಓಮಿಡ್ಯಾರ್ ಅವರನ್ನು ಒಳಗೊಂಡಿದೆ. ಮೊದಲ ಮೂರು ವಿಜೇತರನ್ನು ಈ ಸಮಿತಿಯು ಘೋಷಿಸಲಿದ್ದು,

ಕೊನೆಯ ವಿಜೇತರನ್ನು ಸಾರ್ವಜನಿಕರ ಮತ ಚಲಾವಣೆ ಮೂಲಕ ಆಯ್ಕೆ ಮಾಡಲಾಗುವುದು ಎಂದೂ ಅದು ಸ್ಪಷ್ಟಪಡಿಸಿದೆ. ಈಗಾಗಲೇ ಕಾರ್ಪೋರೇಟ್ ಕ್ಷೇತ್ರದಲ್ಲಿ ನಮ್ಮ ಕೊಡುಗೆ ಸಂಪದ್ಭರಿತವಾಗಿದ್ದು, ಈ ಸವಾಲು ಭಾರತದ ಸಾಮಾಜಿಕ ಉದ್ಯಮಶೀಲತೆಯನ್ನು ಉದ್ದೀಪನಗೊಳಿಸುವ ವಿಶ್ವಾಸವಿದೆ' ಎಂದು ಗೂಗಲ್ ಇಂಡಿಯಾ ಉಪಾಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ರಾಜನ್ ಆನಂದನ್ ತಿಳಿಸಿದ್ದಾರೆ.

**ಪ್ರಧಾನ ಮಂತ್ರಿ ಶ್ರಮ ಪ್ರಶಸ್ತಿ -2012 ಪ್ರಕಟ**

2012 ನೇ ಸಾಲಿನ ಪ್ರಧಾನ ಮಂತ್ರಿ ಶ್ರಮ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ 500 ಕ್ಕಿಂತಲೂ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಖಾಸಗಿ ಒಡೆತನದ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 70 ದಕ್ಷ ಮತ್ತು ಪ್ರಾಮಾಣಿಕ ಕಾರ್ಮಿಕರನ್ನು ಈ ಬಾರಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

- ಪ್ರತಿಷ್ಠಿತ “ಶ್ರಮ ರತ್ನ” ಪ್ರಶಸ್ತಿಗೆ ಈ ಬಾರಿ ಒಂದು, “ಶ್ರಮ ಭೂಷಣ” ಪ್ರಶಸ್ತಿಗೆ ಎಂಟು, ಶ್ರಮ ವೀರ್/ಶ್ರಮ ವೀರಾಂಗನ ಪ್ರಶಸ್ತಿಗೆ 20 ಮತ್ತು ಶ್ರಮ ಶ್ರೀ/ಶ್ರಮ ದೇವಿ ಪ್ರಶಸ್ತಿಗೆ 41 ಹೆಸರನ್ನು ನಾಮನಿರ್ದೇಶನ ಮಾಡಲಾಗಿತ್ತು.
- ಸರ್ಕಾರಿ ಸ್ವಾಮ್ಯದ ಕಂಪನಿಗಳಿಂದ 48 ಕಾರ್ಮಿಕರನ್ನು ಹಾಗೂ ಉಳಿದ 22 ಕಾರ್ಮಿಕರನ್ನು ಖಾಸಗಿ ಒಡೆತನದ ಸಂಸ್ಥೆಗಳಿಂದ ಆಯ್ಕೆಮಾಡಲಾಗಿದೆ.

**ಶ್ರಮ ರತ್ನ**:

- ಪ್ರಧಾನ ಮಂತ್ರಿ ಶ್ರಮ ಪ್ರಶಸ್ತಿಗಳಲ್ಲಿಯೇ ಶ್ರಮ ರತ್ನ ಅತ್ಯುನ್ನತ ಪ್ರಶಸ್ತಿಯಾಗಿದೆ. ಕೇವಲ ಒಬ್ಬರಿಗೆ ನೀಡಲಾಗುವ ಶ್ರಮ ರತ್ನ ಪ್ರಶಸ್ತಿಯು 2 ಲಕ್ಷ ನಗದು ಫಲಕವನ್ನು ಒಳಗೊಂಡಿದೆ. 2012 ನೇ ಸಾಲಿನ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಜೆಮ್ ಶೆಡ್ ಪುರದ ಟಾಟಾ ಸ್ಟೀಲ್ ಲಿಮೆಟೆಡ್ ನ ಸುಬ್ರಾತ ಕುಮಾರ್ ಎಂಬುವವರಿಗೆ ನೀಡಲಾಗಿದೆ.

**ಶ್ರಮ ಭೂಷಣ**:

- ಪ್ರಧಾನ ಮಂತ್ರಿ ಶ್ರಮ ಪ್ರಶಸ್ತಿಗಳಲ್ಲಿ ಎರಡನೇ ಅತ್ಯುನ್ನತ ಪ್ರಶಸ್ತಿಯಾದ ಶ್ರಮ ಭೂಷಣ ಪ್ರಶಸ್ತಿಗೆ ಈ ಬಾರಿ ಎಂಟು ಮಂದಿಯನ್ನು ಆಯ್ಕೆಮಾಡಲಾಗಿದೆ. ಶ್ರಮ ಭೂಷಣ ಪ್ರಶಸ್ತಿಯು 1 ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿದೆ.

**ಶ್ರಮ ವೀರ್/ವಿರಂಗನ**:

- ಶ್ರಮ ವೀರ್/ವಿರಾಂಗನ ಪ್ರಶಸ್ತಿಗೆ ಈ ಬಾರಿ 20 ದಕ್ಷ ಕಾರ್ಮಿಕರನ್ನು ಆಯ್ಕೆಮಾಡಲಾಗಿದೆ. ಪ್ರಶಸ್ತಿಯು 60000 ನಗದು ಮತ್ತು ಫಲಕವನ್ನು ಒಳಗೊಂಡಿದೆ.

**ಶ್ರಮ ಶ್ರೀ/ಶ್ರಮ ದೇವಿ:**

- ಶ್ರಮ ಶ್ರೀ/ಶ್ರಮ ದೇವಿ ಪ್ರಶಸ್ತಿಗೆ 2012 ನೇ ಸಾಲಿನಲ್ಲಿ ಒಟ್ಟು 41 ಕಾರ್ಮಿಕರನ್ನು ಆಯ್ಕೆಮಾಡಲಾಗಿದೆ. ಶ್ರಮಶ್ರೀ ಪ್ರಶಸ್ತಿಯು 40000 ರೂ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

**ನೆಲ್ಸನ್ ಮಂಡೇಲಾ ಗೆ "ಮಹತಿರ್ ಜಾಗತಿಕ ಶಾಂತಿ ಪ್ರಶಸ್ತಿ (Mahathir Global Peace Award)"**

ದಕ್ಷಿಣಾ ಆಫ್ರಿಕಾದ ಮಾಜಿ ಅಧ್ಯಕ್ಷ "ನೆಲ್ಸನ್ ಮಂಡೇಲಾ" ಅವರನ್ನು ಮಲೇಷಿಯಾ ಮೂಲದ ಮಹತಿರ್ ಜಾಗತಿಕ ಶಾಂತಿ ಫೌಂಡೇಶನ್ ನೀಡುವ ಮೊದಲ ಮಹತಿರ್ ಜಾಗತಿಕ ಶಾಂತಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಜಾಗತಿಕ ಮಟ್ಟದಲ್ಲಿ ಶಾಂತಿ ಸಮರಸ್ಯ ನೆಲೆಸುವಲ್ಲಿ ಮಂಡೇಲಾ ಅಪಾರ ಕಾಣಿಕೆ ನೀಡಿರುವ ಕಾರಣ ಅವರನ್ನು ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

- ಮಂಡೇಲಾ ಅವರು ಸದ್ಯ ಅನಾರೋಗ್ಯದ ಕಾರಣ ಆಸ್ಪತ್ರೆಯಲ್ಲಿ ಇರುವ ಕಾರಣ ಪ್ರಸ್ತುತ ದಕ್ಷಿಣಾ ಆಫ್ರಿಕಾದ ಅಧ್ಯಕ್ಷರಾದ "ಜಾಕೋಬ್ ಝೂಮ" ಅವರು ಮಂಡೇಲಾ ಪರವಾಗಿ ಪ್ರಶಸ್ತಿಯನ್ನು ಸ್ವೀಕರಿಸಿದರು.

**ಪ್ರಶಸ್ತಿಯ ಬಗ್ಗೆ:**

- ಮಲೇಷಿಯಾದ ಮಹತಿರ್ ಗ್ಲೋಬಲ್ ಫೀಸ್ ಫೌಂಡೇಶನ್ ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದು, ಜಾಗತಿಕ ಮಟ್ಟದಲ್ಲಿ ಶಾಂತಿ ನೆಲೆಸಲು ಅಪಾರ ಶ್ರಮವಹಿಸಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ವಾರ್ಷಿಕವಾಗಿ ಈ ಪ್ರಶಸ್ತಿಯನ್ನು ನೀಡಲು ನಿರ್ಧರಿಸಲಾಗಿದೆ. ಮಂಡೇಲಾ ಈ ಪ್ರಶಸ್ತಿಯನ್ನು ಪಡೆದ ಪ್ರಥಮರು.

**ಪರಿಸರ ಸಚಿವಾಲಯ ನೀಡುವ ವನ್ಯಜೀವಿ ಪ್ರಶಸ್ತಿ ಪ್ರಕಟಣೆ**

ವನ್ಯಜೀವಿ ಸಂರಕ್ಷಣೆಗೆ ಶ್ರಮಿಸಿದವರಿಗೆ ನೀಡಲಾಗುವ "ರಾಜೀವ್ ಗಾಂಧಿ ವನ್ಯಜೀವಿ ಸಂರಕ್ಷಣಾ ಪ್ರಶಸ್ತಿ" ಮತ್ತು "ಅಮೃತಾ ದೇವಿ ಬಿಷ್ಣೋ ವನ್ಯಜೀವಿ ಸಂರಕ್ಷಣಾ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. ಪ್ರಶಸ್ತಿ ಪಡೆದವರ ವಿವರಗಳು ಇಲ್ಲಿವೆ.

- 2009 ನೇ ಸಾಲಿನ ರಾಜೀವ್ ಗಾಂಧಿ ವನ್ಯಜೀವಿ ಸಂರಕ್ಷಣಾ ಪ್ರಶಸ್ತಿಗೆ ಶ್ರೀ ಎಸ್.ಪಿ.ಯಾದವ್ ಅವರಿಗೆ ನೀಡಲಾಗಿದೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದಲ್ಲಿ ಡೆಪ್ಯೂಟಿ ಇನ್ ಸ್ಪೆಕ್ಟರ್ ಜನರಲ್ ಆಗಿರುವ ಯಾದವ್ ಅಕ್ರಮ ವನ್ಯಜೀವಿಗಳ ಮಾರಾಟ ದಂಧೆಯನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದರು. ಅಷ್ಟೇ ಅಲ್ಲದೇ ಅನೇಕ ಅಳಿವಿನಂಚಿನಲ್ಲಿರುವ ವನ್ಯಜೀವಿಗಳ ಸಂರಕ್ಷಣೆಗಾಗಿ ಯಾದವ್ ಅಪಾರ ಕೊಡುಗೆ ನೀಡಿದ್ದಾರೆ.

- ಅಮೃತಾ ದೇವಿ ಬಿಷ್ಣೋ ವನ್ಯಜೀವಿ ಪ್ರಶಸ್ತಿ: 2010 ನೇ ಸಾಲಿನ ವೈಯುಕ್ತಿಕ ಪ್ರಶಸ್ತಿಗೆ ಶ್ರೀ ಸೌರಭ್ ಗುಪ್ತಾ ಅವರನ್ನು ಆಯ್ಕೆಮಾಡಲಾಗಿದೆ. ವನ್ಯಜೀವಿ ಸಂರಕ್ಷಣೆ ಗುಪ್ತಾ ಅವರು ನೀಡಿರುವ ಕೊಡುಗೆಯನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.
- ವನ್ಯಜೀವಿಗಳ ಸಂರಕ್ಷಣೆಗೆ ಸೇವೆ ಸಲ್ಲಿಸಿರುವ ಸಂಸ್ಥೆಗಳಿಗೆ ನೀಡಲಾಗುವ ಅಮೃತಾ ದೇವಿ ಬಿಷ್ಣೋ ವನ್ಯಜೀವಿ ಪ್ರಶಸ್ತಿಯನ್ನು 2010 ನೇ ಸಾಲಿನಲ್ಲಿ ರಾಜಸ್ತಾನದ ಶ್ರೀ ದದು ಪರ್ಯಾವರಣ್ ಸಂಸ್ಥಾನ್ ಗೆ ನೀಡಲಾಗಿದೆ. ದದು ಪರ್ಯಾವರಣ್ ಸಂಸ್ಥಾನ ವನ್ಯಜೀವಿಗಳ ಅಕ್ರಮ ಸಾಗಾಣೆ, ಬೇಟೆ ಸೇರಿದಂತೆ ಅವುಗಳ ರಕ್ಷಣೆಯಲ್ಲಿ ಅತ್ಯಂತ ಕಾಳಜಿವಹಿಸಿದೆ. ಅದರಲ್ಲೂ ಬ್ಲಾಕ್ ಬಕ್ (Black Bucks) ಗಳ ಸಂರಕ್ಷಣೆಯಲ್ಲಿ ಈ ಸಂಸ್ಥಾನದ ಕಾರ್ಯ ಶ್ಲಾಘನೀಯ.

**ಪ್ರಶಸ್ತಿಯ ಬಗ್ಗೆ:**

- ಅಮೃತಾ ದೇವಿ ಬಿಷ್ಣೋ ವನ್ಯಜೀವಿ ಪ್ರಶಸ್ತಿ ಮತ್ತು ರಾಜೀವ್ ಗಾಂಧಿ ವನ್ಯಜೀವಿ ಸಂರಕ್ಷಣಾ ಪ್ರಶಸ್ತಿಯನ್ನು ಪರಿಸರ ಸಚಿವಾಲಯ ನೀಡುತ್ತಿದೆ.
- ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜನ್ಮದಿನದ ಅಂಗವಾಗಿ ಪರಿಸರ ಮತ್ತು ವನ್ಯಜೀವಿಗಳ ಸಂರಕ್ಷಣೆಯಲ್ಲಿ ಶ್ರಮಿಸಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

**ರಾಜ್ಯದ 17 ಕ್ರೀಡಾಪಟುಗಳಿಗೆ 2012 ನೇ ಸಾಲಿನ ಪ್ರತಿಷ್ಠಿತ "ಏಕಲವ್ಯ ಪ್ರಶಸ್ತಿ"**

ದೇಶದ ಅತ್ಯುನ್ನತ ಕ್ರೀಡಾ ಪ್ರಶಸ್ತಿ ಕೈ ತಪ್ಪಿದ ಪ್ಯಾರಾಲಿಂಪಿಕ್ ಬೆಳ್ಳಿ ಪದಕ ವಿಜೇತ ಎಚ್.ಎನ್. ಗಿರೀಶ್, ಅಂತಾರಾಷ್ಟ್ರೀಯ ಹಾಕಿ ಪಟು ಎಸ್.ವಿ. ಸುನೀಲ್, ಅಂತಾರಾಷ್ಟ್ರೀಯ ಹೈಜಂಪ್ ಪಟು ಸಹನಾ ಕುಮಾರಿ ಸೇರಿದಂತೆ 17 ಕ್ರೀಡಾಪಟುಗಳನ್ನು 2012ನೇ ಸಾಲಿನ ರಾಜ್ಯದ ಪ್ರತಿಷ್ಠಿತ ಏಕಲವ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಬಾರಿ ಏಕಲವ್ಯ ಪ್ರಶಸ್ತಿಗೆ 94 ಅರ್ಜಿಗಳು ಬಂದಿದ್ದು, ಜೀವಮಾನ ಸಾಧನೆ ಪ್ರಶಸ್ತಿಗಾಗಿ 20 ಅರ್ಜಿಗಳು ಬಂದಿದ್ದವು. ಇದರಲ್ಲಿ 17 ಕ್ರೀಡಾಪಟುಗಳನ್ನು ಹಾಗೂ ಜೀವಮಾನದ ಸಾಧನೆಗಾಗಿ 4 ಕೋಚ್‌ಗಳನ್ನು ಆಯ್ಕೆ ಮಾಡಲಾಗಿದೆ.

**ಪ್ರಶಸ್ತಿ ಬಗ್ಗೆ:**

- ಏಕಲವ್ಯ ಪ್ರಶಸ್ತಿಯು 2 ಲಕ್ಷ ರೂ. ನಗದು ಬಹುಮಾನ ಒಳಗೊಂಡರೆ, ಜೀವನಮಾನದ ಸಾಧನೆ ಪ್ರಶಸ್ತಿಯು ಕಂಚಿನ ಪ್ರತಿಮೆ, ಶಾಲು, ಸಮವಸ್ತ್ರ ಮತ್ತು 1.50 ಲಕ್ಷ ರೂ. ನಗದು ಬಹುಮಾನ ಒಳಗೊಂಡಿದೆ.
- ಮುಂದಿನ ವರ್ಷದಿಂದ ರಾಜ್ಯದ ಗ್ರಾಮೀಣ ಕ್ರೀಡಾಪಟುಗಳನ್ನು ಏಕಲವ್ಯ ಪ್ರಶಸ್ತಿ ಮಾದರಿಯಲ್ಲಿಯೇ 'ಕರ್ನಾಟಕ ಕ್ರೀಡಾ ರತ್ನ ' ಪ್ರಶಸ್ತಿ ನೀಡಿ ಗೌರವಿಸುವ ನೂತನ ಯೋಜನೆಯನ್ನು ಜಾರಿಗೆ ತರಲಿದೆ

- ಈ ಪ್ರಶಸ್ತಿಯು 1 ಲಕ್ಷ ರೂ. ನಗದು ಬಹುಮಾನ, ಕಂಚಿನ ಪ್ರತಿಮೆ ಒಳಗೊಂಡಿರುದ್ದು, ಮಲ್ಲಕಂಬ, ಕಂಬಳ, ಆಟ್ಯ-ಪಾಟ್ಯ, ಕುಸ್ತಿ, ಥ್ರೋಬಾಲ್, ಗುಂಡು ಎತ್ತುವುದು, ದೋಣಿವರಸೆ, ಖೋ-ಖೋ, ಕಬಡ್ಡಿ, ಬಾಡಿ ಬಿಲ್ಡಿಂಗ್ ಮತ್ತು ಚೆಸ್ ಕ್ರೀಡೆಗಳು ಸೇರಿವೆ.

**ಏಕಲವ್ಯ ಪ್ರಶಸ್ತಿ:**

ಸಹನಾಕುಮಾರ್ (ಅಥ್ಲೆಟಿಕ್ಸ್), ಎಚ್.ಎನ್. ಗಿರೀಶ್ (ಪ್ಯಾರಾಲಿಂಪಿಕ್), ಕರುಣಾ ಜೈನ್ (ಕ್ರಿಕೆಟ್), ಎಸ್.ವಿ. ಸುನೀಲ್ (ಹಾಕಿ), ವರ್ಷ ಎಸ್.ಪುರಾಣಿಕ್ (ರೋಲರ್ ಸ್ಕೇಟಿಂಗ್), ಅರ್ಜುನ್ ಜೆ.ಪಿ. (ಈಜು), ಶ್ವೇತಾ ನಾಯ್ಡು (ಕಬಡ್ಡಿ), ಅಜಯ್ ಪೂವಯ್ಯ (ಈಕ್ವೆಸ್ಟ್ರಿಯನ್), ಆದಿತ್ಯ ಪ್ರಕಾಶ್ (ಶೂಟಿಂಗ್), ರೋಹಿಣಿ ಎಚ್. (ವಾಲಿಬಾಲ್), ಮಹಾದೇವ್ ಕೆ. (ಬಾಲ್ ಬ್ಯಾಡ್ಮಿಂಟನ್), ಬಿನಿತಾ ದೇವಿ (ವೇಟ್ ಲಿಫ್ಟಿಂಗ್), ಶ್ರೀಧರ್ ಎನ್. ಸವಣೂರು (ಸೈಕ್ಲಿಂಗ್), ಸಾಗರೀಕ ಶಾಮ್ (ಬಾಸ್ಕೆಟ್‌ಬಾಲ್), ಪ್ರೀತಮ್ ಚೌಗುಳೆ (ದೇಹದಾಢ್ಯ), ಸಂಜನಾ ಶ್ರೀನಿವಾಸ್ (ರೋಲರ್ ಸ್ಕೇಟಿಂಗ್).

**ಜೀವಮಾನದ ಸಾಧನೆ ಪ್ರಶಸ್ತಿ:**

ಅನಿತಾ ಎಂ. ನಿಂಬರ್ಗಿ (ಸೈಕ್ಲಿಂಗ್), ಮನೋಹರ್ ಎಸ್. ಕಟಕೆ (ಹಾಕಿ), ರಮೇಶ್ ಟಿಕಾರಾಮ್ (ಬ್ಯಾಡ್ಮಿಂಟನ್), ನಿಹಾರ್ ಅಮಿನ್ (ಈಜು).

**ಆಂಧ್ರಪ್ರದೇಶದ ಸಬ್ ಇನ್ಸ್ ಪೆಕ್ಟರ್ ಎಸ್.ಎಚ್.ಎನ್.ವಿ. ಪ್ರಸಾದ್ ಬಾಬು ರವರಿಗೆ ಮರಣೋತ್ತರ ಅಶೋಕ ಚಕ್ರ ಪ್ರಶಸ್ತಿ**

ನಕ್ಸಲ್ ಸಂಘಟನೆಯ ಒಂಬತ್ತು ಪ್ರಮುಖ ನಾಯಕರನ್ನು ಕೊಂದು ಹಾಕಿದ್ದಕ್ಕಾಗಿ ಆಂಧ್ರಪ್ರದೇಶದ ಸಬ್ ಇನ್ಸ್‌ಪೆಕ್ಟರ್ ಎಸ್.ಎಚ್.ಎನ್.ವಿ ಪ್ರಸಾದ್ ಬಾಬು ಅವರಿಗೆ ಮರಣೋತ್ತರವಾಗಿ ಅಶೋಕ ಚಕ್ರ ಪ್ರಶಸ್ತಿ ಘೋಷಿಸಲಾಗಿದೆ. ಇದರ ಜತೆಗೆ ಮೂವರಿಗೆ ಕೀರ್ತಿ ಚಕ್ರ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ನೌಕಾ ಪಡೆಯ ಅಭಿಲಾಷ್ ಟಿಮ್ಮಿ ಅವರಿಗೆ ಕೂಡ ಈ ಪ್ರಶಸ್ತಿ ಪ್ರಕಟಿಸಲಾಗಿದೆ. ಟಿಮ್ಮಿ ಅವರು ವಿಶ್ವ ಪರ್ಯಟನೆ ಮಾಡಿದ ಏಕೈಕ ನಾವಿಕ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆ ವೇಳೆ 43 ವಿವಿಧ ಹಂತದ ಶೌರ್ಯ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ಈ ಪೈಕಿ ಒಂದು ಅಶೋಕ ಚಕ್ರ, ಮೂರು ಕೀರ್ತಿ ಚಕ್ರ ಮತ್ತು 10 ಶೌರ್ಯ ಚಕ್ರ ಪ್ರಶಸ್ತಿಗಳನ್ನು ಘೋಷಿಸಲಾಗಿದೆ. ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಪ್ರಶಸ್ತಿ ಪಟ್ಟಿಗೆ ಅಂಕಿತ ಹಾಕಿದ ಬಳಿಕ ಅದನ್ನು ಬಿಡುಗಡೆ ಮಾಡಲಾಗಿದೆ ಎಂದು ನವದೆಹಲಿಯಲ್ಲಿ ಅಧಿಕೃತ ಮೂಲಗಳು ತಿಳಿಸಿವೆ.

**ಡಾ.ಎಚ್.ಎಸ್. ವೆಂಕಟೇಶಮೂರ್ತಿ ಮತ್ತು ಲಕ್ಕೂರು ಆನಂದ ರವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ**

ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಸಕ್ತ (2013) ಸಾಲಿನ `ಬಾಲ ಸಾಹಿತ್ಯ ಪುರಸ್ಕಾರ' ಪ್ರಶಸ್ತಿಗೆ ಕವಿ ಡಾ.ಎಚ್. ಎಸ್. ವೆಂಕಟೇಶಮೂರ್ತಿ ಮತ್ತು `ಯುವ ಪುರಸ್ಕಾರ' ಪ್ರಶಸ್ತಿಗೆ ಕವಿ ಲಕ್ಕೂರು ಆನಂದ ಆಯ್ಕೆಯಾಗಿದ್ದಾರೆ. ಎರಡೂ ಪ್ರಶಸ್ತಿಗಳು ತಲಾ ರೂ 50 ಸಾವಿರ ನಗದು, ಸ್ಮರಣಿಕೆ ಒಳಗೊಂಡಿವೆ.

**ಡಾ.ಎಚ್.ಎಸ್.ವೆಂಕಟೇಶಮೂರ್ತಿ:**

ವೆಂಕಟೇಶಮೂರ್ತಿ ಮಕ್ಕಳ ಸಾಹಿತ್ಯಕ್ಕೆ ನೀಡಿರುವ ಸಮಗ್ರ ಕೊಡುಗೆ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಎಚ್.ಎಸ್.ವೆಂಕಟೇಶಮೂರ್ತಿ ಅವರು ಮೂಲತಃ ಚನ್ನಗಿರಿ ತಾಲ್ಲೂಕಿನ ಹೋದಿಗೆರೆ ಗ್ರಾಮದವರು. ಬೆಂಗಳೂರಿನ ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ನಾಲ್ಕು ದಶಕಗಳಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ.

**ಲಕ್ಕೂರು ಆನಂದ:**

ಯುವ ಪ್ರಶಸ್ತಿಯು 35 ವರ್ಷದೊಳಗಿನ ಸಾಹಿತಿಗಳಿಗೆ ನೀಡಲಾಗುತ್ತದೆ. ಲಕ್ಕೂರು ಆನಂದ ಅವರ `ಬಟವಾಡೆಯಾಗದ ರಸೀತಿ' ಕವನ ಸಂಕಲನಕ್ಕೆ ಯುವ ಪುರಸ್ಕಾರ ದೊರೆತಿದೆ. ಲಕ್ಕೂರು ಆನಂದ ಅವರು ಕೆಂಗೇರಿಯ ಶೇಷಾದ್ರಿಪುರಂ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಈವರೆಗೆ ನಾಲ್ಕು ಕವನ ಸಂಕಲನಗಳು, ನಾಲ್ಕು ಅನುವಾದಿತ ಕೃತಿಗಳು ಮತ್ತು ಒಂದು ಸಂಶೋಧನಾ ಕೃತಿಯನ್ನು ಪ್ರಕಟಿಸಿದ್ದಾರೆ.

## ಚೂರು-ಪಾರು ಸುದ್ಧಿಗಳು

- **ಜಮಾತ್-ಎ-ಇಸ್ಲಾಮಿ ಮಾನ್ಯತೆ ರದ್ದು**: ಬಾಂಗ್ಲದೇಶದ ಅತಿ ದೊಡ್ಡ ಬಲಪಂಥೀಯ ಮೂಲಭೂತವಾದಿ ಪಕ್ಷ ಜಮಾತ್-ಎ-ಇಸ್ಲಾಮಿ ಮಾನ್ಯತೆಯನ್ನು ರದ್ದು ಮಾಡಿ ಬಾಂಗ್ಲದೇಶದ ಹೈಕೋರ್ಟ್ ಒಂದು ಮಹತ್ವದ ತೀರ್ಪು ನೀಡಿದೆ. ಅಲ್ಲದೇ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸದಂತೆಯೂ ಪಕ್ಷಕ್ಕೆ ನಿಷೇಧ ಹೇರಲಾಗಿದೆ. ಇದರಿಂದ ಬಾಂಗ್ಲದೇಶದ ಅತಿ ದೊಡ್ಡ ಪಕ್ಷವಾದ ಜಮಾತ್-ಎ-ಇಸ್ಲಾಮಿ ಪಕ್ಷದ ಸ್ಥಿತಿ ಅತಂತ್ರವಾಗಿದೆ.

- **ಸ್ನೋಡೆನ್ ಗೆ ರಷ್ಯಾ ಆಶ್ರಯ**: ಅಮೆರಿಕಾದ ಗುಪ್ತಚಾರ ಮಾಹಿತಿಯನ್ನು ಸೋರಿಕೆ ಮಾಡಿದ ಆರೋಪವನ್ನು ಹೊತ್ತಿರುವ ಎಡ್ವರ್ಡ್ ಸ್ನೋಡೆನ್ ಗೆ ಒಂದು ವರ್ಷ ತತ್ಕಾಲಿಕ ಆಶ್ರಯ ನೀಡಲು ರಷ್ಯಾ ಸರ್ಕಾರ ಸಮ್ಮತಿಸಿದೆ.

- **ಖ್ಯಾತ ಸಂಗೀತಾ ನಿರ್ದೇಶಕ ದಕ್ಷಿಣ ಮೂರ್ತಿ ನಿಧನ:** ದಕ್ಷಿಣ ಭಾರತದ ಖ್ಯಾತ ಸಂಗೀತಾ ನಿರ್ದೇಶಕರಲ್ಲೊಬ್ಬರಾದ ದಕ್ಷಿಣ ಮೂರ್ತಿ (94) ನಿಧನರಾದರು. ತಮಿಳು, ತೆಲುಗು ಮತ್ತು ಮಲೆಯಾಳಂ ಸಿನಿಮಾಗಳ ಸುಮಾರು 850 ಕ್ಕೂ ಹೆಚ್ಚು ಹಾಡುಗಳಿಗೆ ಅವರು ಸಂಗೀತಾ ಸಂಯೋಜನೆ ಮಾಡಿದ್ದರು. 1951 ರಲ್ಲಿ ತೆರೆಕಂಡ ಮಲೆಯಾಳಂ ಸಿನಿಮಾ ಜೀವಿಕ ನೌಕ ಚಿತ್ರಕ್ಕೆ ಸಂಗೀತಾ ಸಂಯೋಜನೆ ಮಾಡುವ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದರು.

- **ಯುನಿಸೆಫ್ ನಿಂದ "ಎಂಡ್ ವಾಯಲೆನ್ಸ್ ಎಗನೆಸ್ಟ್ ಚಿಲ್ಡ್ರನ್" ಯೋಜನೆ:** ಜಗತ್ತಿನಾದ್ಯಂತ ಮಕ್ಕಳ ಮೇಲೆ ಹಲ್ಲೆ ಮತ್ತು ದೌರ್ಜನ್ಯ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ವಿಶ್ವದ ಗಮನ ಸೆಳೆಯುವ ಸಲುವಾಗಿ "End Violence Against Children" ಎಂಬ ನೂತನ ಯೋಜನೆಯನ್ನು UNICEF ಜಾರಿಗೆ ತಂದಿದೆ.

- **ತಿಹಾರ್ ಜೈಲಿನಿಂದ FM ಚಾನೆಲ್:** ದೇಶದ ಅತಿ ದೊಡ್ಡ ಜೈಲು ಎನಿಸಿರುವ ತಿಹಾರ್ ಜೈಲು ಈಗ FM ಚಾನೆಲ್ ಮತ್ತು ಚರಕ ಘಟಕವನ್ನು ಸ್ಥಾಪಿಸುವ ಮೂಲಕ ಗಮನ ಸೆಳೆದಿದೆ. ಎಫ್ ಎಂ ಚಾನೆಲ್ ಗೆ TJ ಎಫ್ ಎಂ ಚಾನೆಲ್ ಎಂದು ಹೆಸರಿಡಲಾಗಿದ್ದು, ಖೈದಿಗಳ ಮನರಂಜನೆಗಾಗಿ ಚಾಲನೆ ಮಾಡಲಾಗಿದೆ. ಇನ್ನು ಚರಕ ಘಟಕವೂ ಗಾಂಧೀಜಿ ಅವರ ಶಾಂತಿ ಮತ್ತು ಅಹಿಂಸೆ ಮಂತ್ರವನ್ನು ಭಿತ್ತರಿಸಲು ಪೂರಕವಾಗಲಿದೆ ಎಂದು ಜೈಲಿನ ಅಧಿಕಾರಿಗಳು ತಿಳಿಸಿದ್ದಾರೆ.

- **ಗುರಂಗಾವ್ ನಲ್ಲಿ ದೇಶದ ಮೊದಲ ಖಾಸಗಿ ಡಿಎನ್ಎ ವಿಧಿವಿಜ್ಞಾನ ಕೇಂದ್ರ:** ದೇಶದ ಮೊದಲ ಖಾಸಗಿ ಡಿಎನ್ಎ ವಿಧಿವಿಜ್ಞಾನ (DNA Forensic) ಕೇಂದ್ರವನ್ನು ಹರಿಯಾಣದ ಗುರಂಗಾವ್ ನಲ್ಲಿ ಸ್ಥಾಪಿಸಲಾಗಿದೆ. ಗ್ಲೋಬಲ್ ಬಯೋಟೆಕ್ನಾಲಜಿ ಕಂಪನಿ ಲೈಫ್ ಟೆಕ್ನಾಲಜೀಸ್ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ದೇಶದಲ್ಲಿ 28 ಸರ್ಕಾರಿ ವಿಧಿ ವಿಜ್ಞಾನ ಪರೀಕ್ಷಾ ಕೇಂದ್ರಗಳಿದ್ದರೂ, ಸಾಕಷ್ಟು ಪರೀಕ್ಷೆ ಪ್ರಕರಣಗಳು ಇಂದಿಗೂ ಬಾಕಿ ಉಳಿದಿವೆ. ಈ ನಿಟ್ಟಿನಲ್ಲಿ ಖಾಸಗಿ ಕೇಂದ್ರಗಳು ಒತ್ತಡವನ್ನು ಕಡಿಮೆಗೊಳಿಸಲು ಶ್ರಮಿಸಲಿವೆ ಎಂದು ನಂಬಲಾಗಿದೆ.

- **<u>SBI ನೂತನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಅರುಂಧತಿ ಭಟ್ಟಾಚಾರ್ಯ</u>**: ಭಾರತೀಯ ಸ್ಟೇಟ್ ಬ್ಯಾಂಕ್ ನ ನೂತನ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಮುಖ್ಯ ಹಣಕಾಸು ಅಧಿಕಾರಿಯಾಗಿ ಅರುಂಧತಿ ಭಟ್ಟಾಚಾರ್ಯ ಅವರು ನೇಮಕಗೊಂಡಿದ್ದಾರೆ. ಇತ್ತೀಚೆಗೆ ನಿವೃತ್ತಿ ಹೊಂದಿದ ದಿವಾಕರ್ ಗುಪ್ತಾ ಅವರ ಸ್ಥಾನವನ್ನು ಅರುಂಧತಿ ತುಂಬಲಿದ್ದಾರೆ.

- **<u>"ರಾಜೀವ್ ರಿಷಿ" ಸೆಂಟ್ರಲ್ ಬ್ಯಾಂಕ್ ಇಂಡಿಯಾದ ನೂತನ ಮ್ಯಾನೇಜಿಂಗ್ ಡೈರೆಕ್ಟರ್:</u>** ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ರಾಜೀವ್ ರಿಷಿ ನೇಮಕಗೊಂಡಿದ್ದಾರೆ. ಮುಂದಿನ ಐದು ವರ್ಷಗಳ ತನಕ ರಿಷಿ ಈ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ. ಈ ಹಿಂದೆ ಇಂಡಿಯನ್ ಬ್ಯಾಂಕ್ ನ ಕಾರ್ಯಕಾರಿ ನಿರ್ದೇಶಕರಾಗಿ ರಿಷಿ ಕಾರ್ಯನಿರ್ವಹಿಸಿದ್ದರು.

- **<u>2 ಮಿಲಿಯನ್ ಟನ್ ಗೋಧಿ ರಫ್ತಿಗೆ ಒಪ್ಪಿಗೆ</u>**: 2 ಮಿಲಿಯನ್ ಟನ್ ಗೋಧಿಯನ್ನು ರಫ್ತು ಮಾಡಲು ಕೇಂದ್ರ ಆರ್ಥಿಕ ವ್ಯವಹಾರಗಳ ಮೇಲಿನ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ದಾಸ್ತಾನಿನಲ್ಲಿ ಗೋಧಿ ಪ್ರಮಾಣ ಅಧಿಕವಾಗಿರುವ ಕಾರಣ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ.

- **<u>ಹಾಲು, ಹಣ್ಣು ಮತ್ತು ತರಕಾರಿ ತಲಾ ಲಭ್ಯತೆ ಪ್ರಮಾಣ:</u>** ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ ಹಾಲು, ಹಣ್ಣು ಮತ್ತು ತರಕಾರಿ ತಲಾ ಲಭ್ಯತೆ ಪ್ರಮಾಣ ಕ್ರಮವಾಗಿ 290 ಗ್ರಾಂ, 200 ಗ್ರಾಂ ಮತ್ತು 401 ಗ್ರಾಂ ಇದೆ. 2011-12 ನೇ ಸಾಲಿನಲ್ಲಿ ಭಾರತದ ಹಣ್ಣು ಮತ್ತು ತರಕಾರಿ ಉತ್ಪಾದನೆ 76.42 ಮತ್ತು 156.33 ಮಿಲಿಯನ್ ಟನ್ ರಷ್ಟಿದೆ. ಇನ್ನು ಹಾಲು ಉತ್ಪಾದನೆ 121 ಮಿಲಿಯನ್ ಟನ್ ಗಳಷ್ಟಿದ್ದು, ಭಾರತ ವಿಶ್ವದಲ್ಲೇ ಅತ್ಯಂತ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರವಾಗಿ ಮುಂದುವರೆದಿದೆ.

- **<u>ಗುರಂಗಾವ್ ನಲ್ಲಿ ಯು.ಕೆ-ಇಂಡಿಯಾ ವ್ಯವಹಾರ ಕೇಂದ್ರ</u>**: ಭಾರತದಲ್ಲಿ ಬ್ರಿಟಿಷ್ ವ್ಯವಹಾರ ಕಾರ್ಯಾರಂಭ ಮತ್ತು ವಿಸ್ತರಿಸುವ ಸಲುವಾಗಿ ಮೊದಲ ಯು.ಕೆ-ಇಂಡಿಯಾ ವ್ಯವಹಾರ ಕೇಂದ್ರವನ್ನು ಹರಿಯಾಣದ ಗುರಂಗಾವ್ ನಲ್ಲಿ ಸ್ಥಾಪನೆಗೊಳಿಸಲಾಗುವುದು. ಮುಂದಿನ ತಿಂಗಳಲ್ಲಿ ಈ ಕೇಂದ್ರಕ್ಕೆ ಚಾಲನೆಗೆ ದೊರೆಯಲಿದ್ದು, ಬ್ರಿಟಿಷ್ ವ್ಯವಹಾರ ಜಾಲವನ್ನು ಭಾರತದಲ್ಲಿ ವಿಸ್ತರಿಸಲು ಈ ಕೇಂದ್ರ ಸಹಕಾರಿಯಾಗಲಿದೆ ಎಂದು ಭಾವಿಸಲಾಗಿದೆ. ಇದರ ನಿರ್ಮಾಣಕ್ಕೆ ಬ್ರಿಟನ್ 1 ಮಿಲಿಯನ್ ಪೌಂಡ್ ಗಳನ್ನು ವ್ಯಯಿಸಲಿದೆ.

- **<u>ಇಂಡಿಯನ್ ಬ್ಯಾಡ್ಮಿಂಟನ್ ಲೀಗ್ ರಾಯಭಾರಿಗಳು</u>**: ಬಾಲಿವುಡ್ ಖ್ಯಾತ ನಟಿ ದೀಪಿಕಾ ಪಡುಕೋಣೆ ಮತ್ತು ಪ್ರಖ್ಯಾತ ನಟ ಅಮೀರ್ ಖಾನ್ ಅವರನ್ನು ಇಂಡಿಯನ್ ಬ್ಯಾಡ್ಮಿಂಟನ್ ಲೀಗ್ ಪಂದ್ಯಾವಳಿಯ ಪ್ರಚಾರ ರಾಯಭಾರಿಗಳನ್ನಾಗಿ ಆಯ್ಕೆಮಾಡಲಾಗಿದೆ.

- **ಮಾಜಿ ಕ್ರಿಕೆಟ್ ಆಟಗಾರ ಕಲ್ಯಾಣ್ ಮಿತ್ತರ್ ನಿಧನ**: ಪಶ್ಚಿಮ ಬಂಗಾಳದ ಮಾಜಿ ಕ್ರಿಕೆಟ್ ಆಟಗಾರ ಹಾಗೂ ಕೋಚ್ ಕಲ್ಯಾಣ್ ಮಿತ್ತರ್ ನಿಧನರಾದರು. ಅವರಿಗೆ 79 ವರ್ಷ ವಯಸ್ಸಾಗಿತ್ತು. 1953 ರಿಂದ 1969 ರ ವರೆಗೆ ಅವರು ಪ್ರಥಮ ದರ್ಜೆ ಕ್ರಿಕೆಟ್ ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಈ ಅವಧಿಯಲ್ಲಿ 51 ಪಂದ್ಯಗಳಿಂದ 1968 ರನ್ ಗಳನ್ನು ಗಳಿಸುವುದರ ಜತೆಗೆ 50 ವಿಕೆಟ್ ಗಳನ್ನು ಪಡೆದಿದ್ದರು. ಪಶ್ಚಿಮ ಬಂಗಾಳದಲ್ಲಿ ಮಹಿಳಾ ಕ್ರಿಕೆಟ್ ಅನ್ನು ಅಭಿವೃದ್ಧಿಪಡಿಸುವಲ್ಲೂ ಅವರು ಪ್ರಮುಖ ಪಾತ್ರವಹಿಸಿದ್ದರು.

- **ಡಾ.ಬಾಲ ವೆಂಕಟೇಶ್ ವರ್ಮಾ:** ವಿಶ್ವಸಂಸ್ಥೆಯ ನಿಶಸ್ತ್ರೀಕರಣ (Disarmament) ವೇದಿಕೆಯ ನೂತನ ರಾಯಭಾರಿ ಹಾಗೂ ಭಾರತದ ಖಾಯಂ ಪ್ರತಿನಿಧಿಯನ್ನಾಗಿ ಡಾ.ಬಾಲ ವೆಂಕಟೇಶ್ ವರ್ಮಾ ಅವರನ್ನು ನೇಮಕಮಾಡಲಾಗಿದೆ. ವರ್ಮಾ 1988 ರ ಭಾರತೀಯ ವಿದೇಶಾಂಗ ಸೇವೆಯ ಅಧಿಕಾರಿ. ಭಾರತೀಯ ವಿದೇಶಾಂಗ ಸೇವೆಯಲ್ಲಿ ಅದ್ಭುತ ಸೇವೆ ಸಲ್ಲಿಸಿದಕ್ಕಾಗಿ ವರ್ಮಾ ರವರಿಗೆ 2012 ರಲ್ಲಿ ಎಸ್.ಕೆ.ಸಿಂಗ್ ಪ್ರಶಸ್ತಿಯನ್ನು ನೀಡಲಾಗಿತ್ತು.

- **ದೇಶ್ ಪ್ರೇಮ್ ಚಂದ್ರ ದಾಸ್ ನಿಧನ:** ಭಾರತ ಕ್ರಿಕೆಟ್ ತಂಡದ ಯಶಸ್ವಿ ನಾಯಕರಲ್ಲಿ ಚಿರಾಯು ಎನಿಸಿರುವ ಮಾಜಿ ಕ್ರಿಕೆಟಿಗ ಕಪಿಲ್ ದೇವ್ ಅವರ ತರಬೇತುದಾರ ದೇಶ್ ಪ್ರೇಮ್ ಚಂದ್ರ ದಾಸ್ ನಿಧನರಾದರು. ಹೃದಯ ಸಂಬಂಧಿ ಕಾಯಿಲೆಯಿಂದ ಅವರು ಕೊನೆಯುಸಿರೆಳೆದರು. ಕಪಿಲ್ ದೇವ್, ಚೇತನ್ ಶರ್ಮಾ ಮತ್ತು ಅಶೋಕ್ ಮಲ್ಹೋತ್ರರಂತ ಕ್ರಿಕೆಟ್ ಪ್ರತಿಭೆಗಳಿಗೆ ದಾಸ್ ತರಬೇತುದಾರರಾಗಿದ್ದರು. ಅವರ ಪ್ರತಿಭೆಯನ್ನು ಗುರುತಿಸಿ ಭಾರತ ಸರ್ಕಾರ ದ್ರೋಣಾಚಾರ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.

- **ಲೂದಿಯಾನದಲ್ಲಿ ಎಫ್ಎಂ ಗೋಲ್ಡ್ 5 ಚಾನೆಲ್:** ಪಂಜಾಬ್ ಲೂದಿಯಾನದಲ್ಲಿ ಆಲ್ ಇಂಡಿಯಾ ರೇಡಿಯೊದ ಎಫ್ಎಂ ಗೋಲ್ಡ್ ಚಾನೆಲ್ ಗೆ ಕೇಂದ್ರ ಸಚಿವ ಮನೀಶ್ ತಿವಾರಿ ಅವರು ಇತ್ತೀಚೆಗೆ ಚಾಲನೆ ನೀಡಿದರು. ಎಐಆರ್ ಎಫ್ಎಂ ಗೋಲ್ಡ್ ಚಾನೆಲ್ ಆರಂಭದಿಂದಾಗಿ ಇಂತಹ ಚಾನೆಲ್ ಹೊಂದಿರುವ ದೇಶದ ಐದನೇ ನಗರ ಎಂಬ ಖ್ಯಾತಿಗೆ ಲೂದಿಯಾನ ಸೇರ್ಪಡೆಗೊಂಡಿತು. ಈ ಹಿಂದೆ ಮುಂಬೈ, ದೆಹಲಿ, ಕೋಲ್ಕತ್ತಾ ಮತ್ತು ಪುಣೆ ಈ ಚಾನೆಲ್ ವ್ಯವಸ್ಥೆ ಹೊಂದಿರುವ ಇತರೆ ನಗರಗಳು.

- **ಗುರಂಗಾವ್ ನಲ್ಲಿ ಯು.ಕೆ-ಇಂಡಿಯಾ ವ್ಯವಹಾರ ಕೇಂದ್ರ**: ಭಾರತದಲ್ಲಿ ಬ್ರಿಟಿಷ್ ವ್ಯವಹಾರ ಕಾರ್ಯಾರಂಭ ಮತ್ತು ವಿಸ್ತರಿಸುವ ಸಲುವಾಗಿ ಮೊದಲ ಯು.ಕೆ-ಇಂಡಿಯಾ ವ್ಯವಹಾರ ಕೇಂದ್ರವನ್ನು ಹರಿಯಾಣದ ಗುರಂಗಾವ್ ನಲ್ಲಿ ಸ್ಥಾಪನೆಗೊಳಿಸಲಾಗುವುದು. ಮುಂದಿನ ತಿಂಗಳಲ್ಲಿ ಈ ಕೇಂದ್ರಕ್ಕೆ ಚಾಲನೆಗೆ ದೊರೆಯಲಿದ್ದು, ಬ್ರಿಟಿಷ್ ವ್ಯವಹಾರ ಜಾಲವನ್ನು ಭಾರತದಲ್ಲಿ ವಿಸ್ತರಿಸಲು ಈ ಕೇಂದ್ರ ಸಹಕಾರಿಯಾಗಲಿದೆ ಎಂದು ಭಾವಿಸಲಾಗಿದೆ. ಇದರ ನಿರ್ಮಾಣಕ್ಕೆ ಬ್ರಿಟನ್ 1 ಮಿಲಿಯನ್ ಪೌಂಡ್ ಗಳನ್ನು ವ್ಯಯಿಸಲಿದೆ.

- **ಇಂಡಿಯನ್ ಬ್ಯಾಡ್ಮಿಂಟನ್ ಲೀಗ್ ರಾಯಭಾರಿಗಳು**: ಬಾಲಿವುಡ್ ಖ್ಯಾತ ನಟಿ ದೀಪಿಕಾ ಪಡುಕೋಣೆ ಮತ್ತು ಪ್ರಖ್ಯಾತ ನಟ ಅಮೀರ್ ಖಾನ್ ಅವರನ್ನು ಇಂಡಿಯನ್ ಬ್ಯಾಡ್ಮಿಂಟನ್ ಲೀಗ್ ಪಂದ್ಯಾವಳಿಯ ಪ್ರಚಾರ ರಾಯಭಾರಿಗಳನ್ನಾಗಿ ಆಯ್ಕೆಮಾಡಲಾಗಿದೆ.

- **ಮಾಜಿ ಕ್ರಿಕೆಟ್ ಆಟಗಾರ ಕಲ್ಯಾಣ್ ಮಿತ್ತರ್ ನಿಧನ**: ಪಶ್ಚಿಮ ಬಂಗಾಳದ ಮಾಜಿ ಕ್ರಿಕೆಟ್ ಆಟಗಾರ ಹಾಗೂ ಕೋಚ್ ಕಲ್ಯಾಣ್ ಮಿತ್ತರ್ ನಿಧನರಾದರು. ಅವರಿಗೆ 79 ವರ್ಷ ವಯಸ್ಸಾಗಿತ್ತು. 1953 ರಿಂದ 1969 ರ ವರೆಗೆ ಅವರು ಪ್ರಥಮ ದರ್ಜೆ ಕ್ರಿಕೆಟ್ ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಈ ಅವಧಿಯಲ್ಲಿ 51 ಪಂದ್ಯಗಳಿಂದ 1968 ರನ್ ಗಳನ್ನು ಗಳಿಸುವುದರ ಜತೆಗೆ 50 ವಿಕೆಟ್ ಗಳನ್ನು ಪಡೆದಿದ್ದರು. ಪಶ್ಚಿಮ ಬಂಗಾಳದಲ್ಲಿ ಮಹಿಳಾ ಕ್ರಿಕೆಟ್ ಅನ್ನು ಅಭಿವೃದ್ದಿಪಡಿಸುವಲ್ಲೂ ಅವರು ಪ್ರಮುಖ ಪಾತ್ರವಹಿಸಿದ್ದರು.

- **"ಸಕುರ್ಜಿಮೊ" ಜ್ವಾಲಾಮುಖಿ ಸ್ಫೋಟ**: ಜಪಾನ್ ವಾಯ್ವುವ ಭಾಗದ ಕಗೊಶಿಮಾದಲ್ಲಿರುವ "ಸಕುರ್ಜಿಮಾ" ಜ್ವಾಲಾಮುಖಿ ಪರ್ವತ ದಾಖಲೆ ಪ್ರಮಾಣದ ಹೊಗೆ ಉಗುಳುವ ಮೂಲಕ ಜನ ಸಮೂದಯದಲ್ಲಿ ಭೀತಿ ಮೂಢಿಸಿದೆ. 2006 ರಲ್ಲಿ ಸ್ಫೋಟಗೊಂಡಾಗ ಇದ್ದ ಪ್ರಮಾಣಗಿಂತಲೂ ಈ ಬಾರಿ ಅತ್ಯಂತ ಹೆಚ್ಚು ಎಂದು ಹೇಳಲಾಗಿದೆ. ಪ್ರಸ್ತುತ ವರ್ಷದಲ್ಲಿ ಸಕುರ್ಜಿಮೊ 500 ನೇ ಬಾರಿ ಹೊಗೆ ಉಗುಳುತ್ತಿದ್ದು, ಈ ಬಾರಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

- **ಸುಗಮ ಸಂಗೀತಾ ಪರಿಷತ್ ಗೆ ಮುದ್ದುಕೃಷ್ಣ ಅಧ್ಯಕ್ಷ:** ಕರ್ನಾಟಕ ಸುಗಮ ಸಂಗೀತಾ ಪರಿಷತ್ತಿನ ಅಧ್ಯಕ್ಷರಾಗಿ ಗಾಯಕ ವೈ.ಕೆ ಮುದ್ದುಕೃಷ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

- **ನಿಸಾರ್ ಅಹಮ್ಮದ್ ಗೆ ವಿ.ಕೃ ಗೋಕಾಕ್ ಪ್ರಶಸ್ತಿ:** ವಿನಾಯಕ ಗೋಕಾಕ್ ವಾಜ್ಞಯ ಟ್ರಸ್ಟ್ ನಿಂದ ಸ್ಥಾಪಿಸಲಾಗಿರುವ ವಿ.ಕೆ.ಗೋಕಾಕ್ ಪ್ರಶಸ್ತಿಗೆ ಹಿರಿಯ ಸಾಹಿತಿ, ನಿತ್ಯೋತ್ಸವ ಕವಿ ನಿಸಾರ್ ಅಹಮ್ಮದ್ ಅವರನ್ನು ಆಯ್ಕೆಮಾಡಲಾಗಿದೆ. ಪ್ರಶಸ್ತಿಯು 10,000 ನಗದು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ.

- **ಟೈಫೂನ್ ಟ್ರಾಮಿಗೆ ಚೀನಾ ತತ್ತರ**: ಟೈಫೂನ್ ಟ್ರಾಮಿ ಚೀನಾಕ್ಕೆ ಅಪ್ಪಳಿಸಿದ್ದು, ಚೀನಾದ 3.61 ಲಕ್ಷ ಜನರು ಜೀವನ ಅಸ್ತವ್ಯಸ್ತವಾಗಿದೆ. ಚೀನಾದ ಫ್ಯೂಜಿನ್ ಪ್ರಾಂತ್ಯದಲ್ಲಿ ಭೂಕುಸಿತ ಉಂಟಾಗಿದ್ದು, ಇದರಿಂದ ಅನೇಕ ಆಸ್ತಿಪಾಸ್ತಿಗಳು ಹಾನಿಗೀಡಾಗಿವೆ.

- **ಭಾರತ ವಿಶ್ವದ ಮೂರನೇ ಇಂಟರ್ ನೆಟ್ ಬಳಕೆ ದೇಶ**: ವಿಶ್ವದ ಇಂಟರ್ ನೆಟ್ ಬಳಕೆ ಮಾಡುವ ದೇಶಗಳಲ್ಲಿ ಭಾರತ ಮೂರನೇ ಸ್ಥಾನದಲ್ಲಿರುವುದಾಗಿ ಇತ್ತೀಚೆಗೆ ಬಿಡುಗಡೆಗೊಳಿಸಿದ ಅಂಕಿ ಅಂಶದಿಂದ ತಿಳಿದು ಬಂದಿದೆ. ಇಂಟರ್ ನೆಟ್ ಬಳಕೆಯಲ್ಲಿ ಅಮೆರಿಕಾ ಮೊದಲ ಸ್ಥಾನದಲ್ಲಿ ಮತ್ತು ಚೀನಾ ಎರಡನೇ ಸ್ಥಾನದಲ್ಲಿವೆ. ಭಾರತದಲ್ಲಿ 74 ಮಿಲಿಯನ್ ಜನರು ಇಂಟರ್ ನೆಟ್ ಬಳಸುತ್ತಿದ್ದಾರೆ ಎನ್ನಲಾಗಿದೆ.

- **ಭೂತಾನ್-ಚೀನಾ ನಡುವೆ ಗಡಿ ಮಾತುಕತೆ:** ಭೂತಾನ್-ಚೀನಾ ನಡುವಿನ ಗಡಿ ಸಮಸ್ಯೆ ಕುರಿತಾದ 21 ನೇ ಸುತ್ತಿನ ಮಾತುಕತೆಯನ್ನು ಇತ್ತೀಚೆಗೆ ಭೂತಾನ್ ನ ಥಿಂಪುವಿನಲ್ಲಿ ಏರ್ಪಡಿಸಲಾಗಿತ್ತು. ಪರಸ್ಪರ ಸಹಾಯ ಮತ್ತು ಸಹಕಾರದೊಂದಿಗೆ ಗಡಿ ಸಮಸ್ಯೆಯನ್ನು ಶೀಘ್ರವೇ ಬಗೆಹರಿಸಿಕೊಳ್ಳುವತ್ತ ಉಭಯ ದೇಶಗಳು ಒಪ್ಪಿಗೆ ಸೂಚಿಸಿದವು.

- **ವಿಶೇಷ ಪ್ರತಿನಿಧಿಯಾಗಿ ಅಶ್ವಿನ್ ಕುಮಾರ್:** ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರ ಪರವಾಗಿ ಜಪಾನ್ ಗೆ ಭೇಟಿ ನೀಡಲು ವಿಶೇಷ ಪ್ರತಿನಿಧಿಯಾಗಿ ಮಾಜಿ ಕಾನೂನು ಸಚಿವ ಅಶ್ವಿನ್ ಕುಮಾರ್ ಅವರನ್ನು ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ನೇಮಕಮಾಡಿದ್ದಾರೆ. ಅಶ್ವಿನ್ ಕುಮಾರ್ ಅವರು ಏಳು ದಿನಗಳ ಕಾಲ ಜಪಾನ್ ಭೇಟಿ ನೀಡಲಿದ್ದು, ಜಪಾನ್ ಸರ್ಕಾರದೊಂದಿಗೆ ಅಧಿಕೃತ ಚರ್ಚೆ ನಡೆಸಲಿದ್ದಾರೆ.

- **ಉತ್ತರ ಪ್ರದೇಶ ಸರ್ಕಾರದ ಎಲ್ಲಾ ಯೋಜನೆಗಳಲ್ಲಿ ಅಲ್ಪಸಂಖ್ಯಾತರಿಗೆ ಶೇ.20 ಮೀಸಲು:** ಉತ್ತರಪ್ರದೇಶದಲ್ಲಿ ಮುಸ್ಲಿಂ ತುಷ್ಟೀಕರಣ ನೀತಿಯನ್ನು ಮುಂದುವರಿಸಿರುವ ಅಖೀಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷದ ಸರ್ಕಾರ, ಸರ್ಕಾರದ ಎಲ್ಲ ಯೋಜನೆಗಳ ಶೇ.20ರಷ್ಟು ಹಣವನ್ನು ಅಲ್ಪಸಂಖ್ಯಾತರ ಏಳ್ಗೆಗಾಗಿ ವೆಚ್ಚ ಮಾಡಲು ನಿರ್ಧರಿಸಿದೆ. ಅಲ್ಪಸಂಖ್ಯಾತರಲ್ಲಿ ಮುಸ್ಲಿಮರೇ ಹೆಚ್ಚಿದ್ದು, ಇದಲ್ಲದೆ ಇದೇ ವರ್ಗದಲ್ಲಿ ಬರುವ ಜೈನ, ಪಾರ್ಸಿ, ಸಿಖ್, ಬೌದ್ಧರಿಗೂ ಇದರ ಪ್ರಯೋಜನ ಲಭಿಸಲಿದೆ. 30 ವಿವಿಧ ಇಲಾಖೆಗಳು 85 ಯೋಜನೆಗಳನ್ನು ಕಾರ್ಯಗತಗೊಳಿಸಿದ್ದು, ಈ ಎಲ್ಲ ಯೋಜನೆಗಳ ಶೇ.20 ನಿಧಿ ಅಲ್ಪಸಂಖ್ಯಾತರಿಗೆ ಲಭಿಸಲಿದೆ. ಇದು ಸಾಚಾರ್ ಸಮಿತಿ ಮಾಡಿದ ಶಿಫಾರಸಿಗೆ ಅನುಗುಣವಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ.

- **ವಿವೇಕಾನಂದರ 150 ನೇ ಜನ್ಮದಿನದ ಸ್ಮರಣಾರ್ಥ 5 ರೂ ನಾಣ್ಯ:** ಸ್ವಾಮಿ ವಿವೇಕಾನಂದರ 150 ನೇ ಜನ್ಮದಿನದ ಪ್ರಯುಕ್ತ 5 ರೂ ಮುಖಬೆಲೆಯ ನಾಣ್ಯವನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಶೀಘ್ರದಲ್ಲೇ ಹೊರತರಲಿದೆ. ಇದೇ ವೇಳೆ ಬೆಳ್ಳಿ ಹಬ್ಬ ಆಚರಿಸಿಕೊಳ್ಳುತ್ತಿರುವ ಶ್ರೀ ಮಾತ ವೈಷ್ಣೋದೇವಿ ಮಂಡಳಿ ಸಲುವಾಗಿ 10 ರೂ ಮುಖ ಬೆಲೆಯ ನೋಟನ್ನು ಹೊರತರಲು ನಿರ್ಧರಿಸಿದೆ.

- **ಉಚಿತ ಔಷಧಿ ವಿತರಣಗೆ ಕೇಂದ್ರ ಒಪ್ಪಿಗೆ:** ರೋಗಿಗಳಿಗೆ ಅಗತ್ಯವಿರುವ ಔಷಧಿಯನ್ನು ಉಚಿತವಾಗಿ ಆಸ್ಪತ್ರೆಗಳಲ್ಲಿ ವಿತರಿಸುವ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. ಇದರಿಂದ ಬಡವರಿಗೆ ಅತ್ಯಂತ ಅನುಕೂಲವಾಗಲಿದೆ. ಈ ಕಾರ್ಯಕ್ರಮದಡಿ ಅಗ್ಯವಿರುವ ಔಷಧಿಗಳನ್ನು ಮಾತ್ರ ಉಚಿತವಾಗಿ ನೀಡಲಾಗುವುದು. ಇದರಿಂದ ಅನಗತ್ಯ ಔಷಧಿಗಳನ್ನು ಸೇವಿಸುವುನ್ನು ನಿಯಂತ್ರಿಸಲು ಸಾಧ್ಯವಾಗಲಿದೆ. ಈ ಯೋಜನೆಗಾಗಿ 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ 16,000 ಕೋಟಿಯನ್ನು ಭರಿಸಲಾಗುವುದು. ತಮಿಳುನಾಡು ಸರ್ಕಾರ ಇಂತಹದೇ ಯೋಜನೆಯನ್ನು ರೂಪಿಸಲಾಗಿದ್ದು, ಇದರಿಂದ ಪ್ರೇರೆಪಿತಗೊಂಡ ಕೇಂದ್ರ ಸರ್ಕಾರ ಈ ಯೋಜನೆಗೆ ಚಾಲನೆ ನೀಡಿದೆ.

- **"ಸಿಮಸ್ ಹೆನೆ (Seamus Heaney)" ನಿಧನ:** ಐರ್ಲೆಂಡ್ ನ ಪ್ರಖ್ಯಾತ ಕವಿ "ಸಿಮಸ್ ಹೆನೆ" ಅವರು ತಮ್ಮ 74 ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು. ಐರ್ಲೆಂಡ್ ಸಾಹಿತ್ಯ ಕ್ಷೇತ್ರಕ್ಕೆ ಪ್ರಶಂಸನೀಯ ಕೊಡುಗೆ ನೀಡಿದ್ದ ಹೆನೆ ಅವರಿಗೆ 1995 ರಲ್ಲಿ ನೊಬೆಲ್ ಸಾಹಿತ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು. ವಿಲಿಯಂ ಈಟ್ಸ್ ನಂತರ ಐರ್ಲೆಂಡ್ ಕಂಡ ಮತ್ತೊಬ್ಬ ಕವಿ ಹೆನೆ ಎನಿಸಿದ್ದರು. ಹೆನೆ ಅವರು 13ಕ್ಕೂ ಹೆಚ್ಚು ಕವನ ಸಂಕಲನ, ಎರಡು ನಾಟಕ ರಚಿಸಿದ್ದರು.

- **ಟಿ-20 ಕ್ರಿಕೆಟ್ ದಾಖಲೆ ಬರೆದ ಫಿಂಚ್**: ಆಸ್ಟ್ರೇಲಿಯಾದ ಆರೊನ್ ಫಿಂಚ್ ಅವರು ಇಂಗ್ಲೆಂಡ್ ವಿರುದ್ಧ ನಡೆದ ಟಿ-20 ಕ್ರಿಕೆಟ್ ಪಂದ್ಯದಲ್ಲಿ ವೈಯುಕ್ತಿಕ 156 ರನ್ ಗಳಿಸುವ ಮೂಲಕ ವಿಶ್ವದಾಖಲೆ ಬರೆದರು. ಅದ್ಭುತ ಪ್ರದರ್ಶನ ತೋರಿದ ಫಿಂಚ್ ಈ ಹಿಂದೆ ದಾಖಲಾಗಿದ್ದ ಬ್ರೆಂಡನ್ ಮ್ಯಾಕಲಂ ಅವರ ದಾಖಲೆಯನ್ನು ಅಳಿಸಿ ಹಾಕಿದರು. ನ್ಯೂಜಿಲ್ಯಾಂಡ್ ನ ಮ್ಯಾಕಲಂ ಬಾಂಗ್ಲದೇಶ ವಿರುದ್ಧ ನಡೆದ ಪಂದ್ಯದಲ್ಲಿ ಗಳಿಸಿದ್ದ 150 ರನ್ ಇದುವರೆಗೂ ಟಿ-20 ಕ್ರಿಕೆಟ್ ನಲ್ಲಿ ಗರಿಷ್ಠ ವೈಯುಕ್ತಿಕ ರನ್ ಆಗಿತ್ತು.

- **ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ರಮಣ**: ಆಂಧ್ರಪ್ರದೇಶ ಹೈಕೋರ್ಟ್ ನ ನ್ಯಾಯಮೂರ್ತಿಯಾಗಿದ್ದ ಎನ್.ವಿ.ರಮಣ ಅವರನ್ನು ದೆಹಲಿ ಹೈಕೋರ್ಟ್ ನ ಮುಖ್ಯನ್ಯಾಯಮೂರ್ತಿಯಾಗಿ ರಾಷ್ಟ್ರಪತಿಗಳು ನೇಮಕ ಮಾಡಿದ್ದಾರೆ. ನ್ಯಾಯಮೂರ್ತಿ ರಮಣ ಅವರು 1983 ರಲ್ಲಿ ಅಡ್ವೋಕೇಟ್ ಆಗಿ ವೃತ್ತಿಯನ್ನು ಪ್ರಾರಂಭಿಸಿದರು. ಬಳಿಕ ಕೇಂದ್ರ ಮತ್ತು ರಾಜ್ಯ ಅಡ್ಮಿನೇಸ್ಟ್ರೇಟಿವ್ ಟ್ರಿಬ್ಯುನಲ್ ಗಳಲ್ಲಿ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ.

- **ಕೆನಡಾದ ರಸ್ತೆಯೊಂದಕ್ಕೆ ಗಾಂಧೀಜಿ ಹೆಸರು:** ಭಾರತದ 67ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಕೆನಡಾದ ವಿನ್ನಿಪೆಗ್ ನಲ್ಲಿರುವ ಬೀದಿಯೊಂದಕ್ಕೆ ಮಹಾತ್ಮ ಗಾಂಧೀಜಿಯವರ ಹೆಸರಿಡಲಾಗಿದೆ. ಮನಿಟೊಬಾ ಪ್ರಾಂತದಲ್ಲಿರುವ ಕೆನಡಿಯನ್ ಮಾನವ ಹಕ್ಕುಗಳ ಮ್ಯೂಸಿಯಂಗೆ ಹೋಗುವ ಬೀದಿಗೆ ಗಾಂಧೀಜಿ ಹೆಸರನ್ನು ನಾಮಕರಣ ಮಾಡಲಾಗಿದೆ. ವಿನ್ನಿಪೆಗ್

ಮೇಯರ್ ಸ್ಯಾಮ್ ಕಟ್ಜ್, ಕೌನ್ಸಿಲರ್ ದೇವಿ ಶರ್ಮಾ, ಕೆನಡಾ ಮಹಾತ್ಮಾ ಗಾಂಧಿ ಕೇಂದ್ರದ ಅಧ್ಯಕ್ಷ ಕೆ. ದಕ್ಷಿಣಾಮೂರ್ತಿ ಮತ್ತು ಕೆನಡಾದಲ್ಲಿರುವ ಭಾರತೀಯರು ಈ ಸಂದರ್ಭದಲ್ಲಿದ್ದರು.

- **ಹನ್ನೊಂದು ದೇಶದ ಅತಿಥಿಗಳಿಗೆ ಬಿಐಎಎಲ್ ನಲ್ಲಿ ವೀಸಾ:** ಹನ್ನೊಂದು ದೇಶಗಳ ಅತಿಥಿಗಳು ಇನ್ನುಮುಂದೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ನಂತರ ವೀಸಾ ಪಡೆಯಬಹುದು ಎಂದು ಗೃಹ ಇಲಾಖೆ ವಲಸೆ ವಿಭಾಗ ಪ್ರಕಟಣೆಯಲ್ಲಿ ತಿಳಿಸಿದೆ. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಈ ತೀರ್ಮಾನ ಕೈಗೊಳ್ಳಲಾಗಿದೆ. ಜಪಾನ್, ಸಿಂಗಾಪುರ, ನ್ಯೂಜಿಲ್ಯಾಂಡ್, ಫಿಲಿಫೈನ್ಸ್, ಇಂಡೋನೇಷಿಯಾ, ಲಕ್ಸಂಬರ್ಗ್, ಫಿನ್ಲ್ಯಾಂಡ್, ಲಾವೋಸ್, ವೀಯೆಟ್ನಾಂ, ಮ್ಯಾನ್ಮಾರ್ ಹಾಗೂ ಕಂಬೋಡಿಯಾ ದೇಶಗಳ ಅತಿಥಿಗಳು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಮೇಲೆ ವೀಸಾ ಪಡೆಯಲು ಅರ್ಹರಾಗಿರುತ್ತಾರೆ. ಸೀಮಿತ ಅವಧಿಯ ವೈದ್ಯಕೀಯ ಚಿಕಿತ್ಸೆ, ಪ್ರವಾಸ, ಔದ್ಯೋಗಿಕ ಉದ್ದೇಶಕ್ಕಾಗಿ ಬರುವ ಅತಿಥಿಗಳಿಗೆ ಈ ವೀಸಾ ನೀಡಲಾಗುತ್ತದೆ. ವೀಸಾ ಅವಧಿ 30 ದಿನಗಳ ಕಾಲ ಇರಲಿದೆ ಎಂದು ವಲಸೆ ವಿಭಾಗ ತಿಳಿಸಿದೆ.

- **ವಿದೇಶದಿಂದ ತರುವ ಎಲ್.ಸಿ.ಡಿ/ಎಲ್.ಇ.ಡಿ./ಪ್ಲಾಸ್ಮಾ ಟಿವಿಗಳಿಗೆ ಸುಂಕ:** ಸಾಕಷ್ಟು ವಿತ್ತೀಯ ಕ್ರಮಗಳ ಹೊರತಾಗಿಯೂ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಲೇ ಸಾಗಿರುವ ಹಿನ್ನೆಲೆಯಲ್ಲಿ ವಿದೇಶದಿಂದ ಸುಂಕ ರಹಿತವಾಗಿ ಎಲ್ ಸಿಡಿ/ಎಲ್ಇಡಿ/ಪ್ಲಾಸ್ಮಾ ಟೀವಿಗಳನ್ನು ತರುವುದಕ್ಕೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ. ಆ.26ರಿಂದ ಈ ಹೊಸ ನಿಯಮ ಜಾರಿಗೆ ಬರಲಿದೆ. ಇದುವರೆಗೆ ವಿದೇಶಕ್ಕೆ ತೆರಳಿದ್ದ ಭಾರತೀಯರು ಅಥವಾ ಅನಿವಾಸಿ ಭಾರತೀಯರು ಒಂದು ಎಲ್ಸಿಡಿ, ಎಲ್ಇಡಿ ಅಥವಾ ಪ್ಲಾಸ್ಮಾ ಟೀವಿಗಳನ್ನು ಯಾವುದೇ ಸುಂಕ ಪಾವತಿಸದೇ ವಿಮಾನದ ಮೂಲಕ ಭಾರತಕ್ಕೆ ತರಬಹುದಿತ್ತು. ಆದರೆ ಹೊಸ ನಿಯಮ ಜಾರಿಯಾದರೆ ಸುಂಕ ಪಾವತಿ ಅನಿವಾರ್ಯ. ಹೀಗಾದಲ್ಲಿ ಟೀವಿ ಬಲು ದುಬಾರಿ ಎನ್ನಿಸಿಕೊಳ್ಳಲಿವೆ.

- **ವಿಶ್ವದ ಅತಿ ಗಿಡ್ಡ ಮಹಿಳೆಯಿಂದ ಅತಿ ದೊಡ್ಡ ಪುಸ್ತಕ ಬಿಡುಗಡೆ:** ವಿಶ್ವದ ಅತಿ ಗಿಡ್ಡ ಮಹಿಳೆಯು ಜಗತ್ತಿನ ಅತಿ ದೊಡ್ಡ ಪುಸ್ತಕ ಬಿಡುಗಡೆ ಮಾಡಿದ್ದಾರೆ. ಜೈನ ಮುನಿ ತರುಣ್ ಸಾಗರ್ ಅವರು ಬರೆದಿರುವ ವಿಶ್ವದ ಅತಿ ದೊಡ್ಡ ಪುಸ್ತಕವನ್ನು ಜೈಪುರದಲ್ಲಿ ಅತಿ ಕುಳ್ಳಿ ಜ್ಯೋತಿ ಆಮ್ಗೆ(ಇವರ ಎತ್ತರ 25 ಇಂಚು) ಬಿಡುಗಡೆ ಮಾಡಿದರು. ಈ ಪುಸ್ತಕದ ಗಾತ್ರ 30 ಅಡಿ ಎತ್ತರ ಹಾಗೂ 24 ಅಡಿ ಅಗಲ. ಇದು 2 ಸಾವಿರ ಕೆಜಿ ತೂಕ ಹೊಂದಿದೆ. ಇದೇ ಸಂದರ್ಭದಲ್ಲಿ ಜೈನ ಮುನಿ ಹಾಗೂ ಜ್ಯೋತಿ ಆಮ್ಗೆ ಅವರಿಗೆ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಪ್ರತಿನಿಧಿಯು ಹೊಸ ದಾಖಲೆಯ ಸರ್ಟಿಫಿಕೇಟ್ ನೀಡಿದರು. ಕಳೆದ ವರ್ಷ 25 ಅಡಿ ಎತ್ತರ ಹಾಗೂ 17 ಅಡಿ ಅಗಲದ ಪುಸ್ತಕವು ನಿರ್ಮಿಸಿದ್ದ ದಾಖಲೆಯನ್ನು ತರುಣ್ ಸಾಗರ್ ಅವರ ಕೃತಿಯು ಮುರಿಯಿತು

- **"ಒಲಿಂಗುಟೋ" ಹೆಸರಿನ ಹೊಸ ಸಸ್ತನಿ ಪ್ರಭೇದ ಪತ್ತೆಹಚ್ಚಿದ ಅಮೆರಿಕಾದ ವಿಜ್ಞಾನಿಗಳು :**'ಸ್ಮಿತ್ ಸೊನಿಯನ್ ಇನ್ಸ್ಟಿಟ್ಯೂಟ್ ಆಫ್ ಅಮೆರಿಕ' ಸಂಸ್ಥೆಯ ವಿಜ್ಞಾನಿಗಳು "ಒಲಿಂಗುಟೋ" ಎಂಬ ಹೊಸ ಸಸ್ತನಿ ಪ್ರಭೇದವನ್ನು ಅನ್ವೇಷಿಸಿರುವುದಾಗಿ ಘೋಷಿಸಿದ್ದಾರೆ. ಒಲಿಂಗುಟೋ ಪ್ರಾಣಿಯು ಕಂದು ಬಣ್ಣದ್ದಾಗಿದ್ದು, ಸುಮಾರು 14 ಇಂಚು ಉದ್ದವಿದ್ದು ಅಷ್ಟೇ ಅಳತೆಯ ಬಾಲಹೊಂದಿದ್ದು, ಸರಿಸುಮಾರು ಒಂದು ಕಿಲೋ ಗ್ರಾಂ. ತೂಕ ಹೊಂದಿರುವುದಾಗಿ ತಿಳಿಸಿದ್ದಾರೆ. ಈ ಪ್ರಾಣಿಯು ಕೊಲಂಬಿಯಾ ಮತ್ತು ಈಕ್ವೆಡಾರ್ ನ ದಟ್ಟ ಕಾಡುಗಳಲ್ಲಿ ಕಂಡುಬಂದಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದೆ.

- **ಧ್ಯಾನ್ ಚಂದ್ ರ ಜನ್ಮದಿನ ಆಗಸ್ಟ್ 29 ನ್ನು ರಾಷ್ಟ್ರೀಯ ಕ್ರೀಡಾ ದಿನವಾಗಿ ಆಚರಿಸಲು ನಿರ್ಧಾರ:** ಭಾರತೀಯ ಹಾಕಿ ದಂತಕತೆ ಧ್ಯಾನ್‌ಚಂದ್ ಅವರ ಜನ್ಮದಿನವಾದ ಆಗಸ್ಟ್ 29ನ್ನು ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸಲು ನಿರ್ಧರಿಸಲಾಗಿದ್ದು, ಇದೇ ಮೊದಲ ಬಾರಿಗೆ ದೇಶದಾದ್ಯಂತ ವಾಕಥಾನ್, ಫುಟ್ಬಾಲ್ ಹಾಗೂ ಮತ್ತಿತರ ಕ್ರೀಡಾ ಪಂದ್ಯಾವಳಿಯನ್ನು ಆಯೋಜಿಸಲಾಗುವುದು ಎಂದು ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಎಫ್‌ಐಸಿಸಿಐ) ತಿಳಿಸಿದೆ. ಕಳೆದ ವರ್ಷ ಈ ರಾಷ್ಟ್ರೀಯ ಕ್ರೀಡಾದಿನವನ್ನು ಆಚರಿಸಲು ನಿರ್ಧರಿಸಲಾಯಿತು.

- **ಕೇಂದ್ರ ಸರ್ಕಾರದಿಂದ ಹೊಸದಾಗಿ 50 ದೂರ ಶಿಕ್ಷಣ ಚಾನಲ್ ಗಳ ಆರಂಭ:** ಕೇಂದ್ರ ಸರ್ಕಾರ ಹೊಸದಾಗಿ 50 ದೂರ ಶಿಕ್ಷಣ ಚಾನಲ್‌ಗಳನ್ನು ಆರಂಭಿಸಲು ಚಿಂತನೆ ನಡೆಸಿದೆ. ಈ ಚಾನಲ್‌ಗಳು ನೇರಪ್ರಸಾರದಲ್ಲಿ ವಿದ್ಯಾರ್ಥಿಗಳಿಗೆ ಉಪನ್ಯಾಸ ಒದಗಿಸಲಿವೆ. ಮುಂದಿನ ಗಣರಾಜ್ಯೋತ್ಸವದಂದು ಚಾನಲ್ ಕಾರ್ಯಾರಂಭ ಮಾಡುವ ನಿರೀಕ್ಷೆ ಇದ್ದು, ಐಐಟಿ, ಕೇಂದ್ರೀಯ ವಿಶ್ವವಿದ್ಯಾಲಯಗಳು, ಇಂದಿರಾಗಾಂಧಿ ರಾಷ್ಟ್ರೀಯ ವಿಶ್ವವಿದ್ಯಾಲಯಗಳಿಗೆ ಚಾನಲ್ ಸಂಪರ್ಕ ಕಲ್ಪಿಸಲಿದೆ. ಮಾನವ ಸಂಪನ್ಮೂಲ ಇಲಾಖೆ ಪ್ರಸಾರ ಭಾರತಿಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಿದೆ. ಪ್ರಸಾರ ಭಾರತಿ ಚಾನಲ್‌ಗಳನ್ನು ಬಿತ್ತರಿಸಲಿದೆ. ಇದಕ್ಕಾಗಿ ಎರಡು ಟ್ರಾನ್ಸ್‌ಪಾಂಡರ್‌ಗಳನ್ನು ಒದಗಿಸುವುದಾಗಿ ಹೇಳಿದೆ.

- **ಹಾಕಿ ದಂತ ಕತೆ ಧ್ಯಾನ್ ಚಂದ್ ಅವರ ಆತ್ಮಚರಿತ್ರೆ ಬಿಡುಗಡೆ:** ವಿಶ್ವ ಹಾಕಿಯನ್ನು ಆಳಿದ ಭಾರತ ಹಾಕಿ ತಂಡದ ವೈಭವದ ಕಾಲವನ್ನು ಓದುಗರಿಗೆ ತಿಳಿಸುವ ಸಲುವಾಗಿ ಹಾಕಿ ದಂತ ಕತೆ ಧ್ಯಾನ್ ಚಂದ್ ಅವರ ಆತ್ಮಚರಿತ್ರೆಯನ್ನು ಬಿಡುಗಡೆ ಮಾಡಿದೆ. ಕ್ರೀಪಟುಗಳ ಕುರಿತಂತೆ ಇದೇ ಮೊದಲ ಬಾರಿಗೆ ಈ ರೀತಿಯಾದ ಪುಸ್ತಕ ಹೊರ ಬಂದಿದೆ. "ಧ್ಯಾನ್ ಚಂದ್-ಹಾಕಿ ಮಾಂತ್ರಿಕ" ಎಂಬ ಹೆಸರಿನ ಈ ಪುಸ್ತಕವನ್ನು ಧ್ಯಾನ್ ಚಂದ್ ಅವರ 108ನೇ ಹುಟ್ಟುಹಬ್ಬದ ಪ್ರಯುಕ್ತ ರಾಷ್ಟ್ರೀಯ ಕ್ರೀಡಾ ದಿನಾಚರಣೆ ವೇಳೆ ಬಿಡುಗಡೆ ಮಾಡಲಾಯಿತು. ಈ ಪುಸ್ತಕವನ್ನು ಕಾಮಿಕ್ ಸರಣಿಗಳ ಪ್ರಕಾಶನವಾಗಿರುವ ಅಮರ್ ಚಿತ್ರ ಕಥಾ ಹೊರಗೆ ತಂದಿದೆ. ಈ ಪುಸ್ತಕ ಧ್ಯಾನ್ ಚಂದ್ ಅವರು 1928, 1932 ಹಾಗೂ 1936ರ ಒಲಿಂಪಿಕ್ಸ್ ವೇಳೆ ಗೋಲು ದಾಖಲಿಸಿದ ಮಹತ್ವದ ಹೆಜ್ಜೆಗಳ ಮೇಲೆ ಕೇಂದ್ರೀಕರಿಸಲಾಗಿದೆ.

- **<u>ಕನ್ನಡ ಸಾಹಿತ್ಯ ಪರಿಷತ್ ನಿಂದ "ಡಾ.ರಾಜಕುಮಾರ್ ಸಂಸ್ಕೃತಿ ಪ್ರಶಸ್ತಿ" ಆರಂಭ:</u>** ಕನ್ನಡ ಸಾಹಿತ್ಯ ಪರಿಷತ್ತಿನಿಂದ `ಡಾ.ರಾಜಕುಮಾರ್ ಸಂಸ್ಕೃತಿ ಪ್ರಶಸ್ತಿ' ಆರಂಭಿಸಲಾಗಿದ್ದು, ಈ ಪ್ರಶಸ್ತಿಯನ್ನು ಸಿನಿಮಾ ಕ್ಷೇತ್ರದ ಸಾಧಕರಿಗೆ ಮುಂದಿನ ಸಾಲಿನಿಂದ ಪ್ರತಿವರ್ಷ ನೀಡಲಾಗುತ್ತದೆ. ಕಸಾಪ ಅಧ್ಯಕ್ಷ ಪುಂಡಲೀಕ ಹಾಲಂಬಿ ಪತ್ರಿಕಾ ಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದರು. `ಡಾ. ರಾಜಕುಮಾರ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಬಂದಾಗ, ಪ್ರಶಸ್ತಿ ಮೊತ್ತವಾದ ರೂ. 1 ಲಕ್ಷವನ್ನು ಪರಿಷತ್ತಿನ ದತ್ತಿನಿಧಿಗೆ ದೇಣಿಗೆ ನೀಡಿದ್ದರು. ಅವರ ಪತ್ನಿ ಪಾರ್ವತಮ್ಮನವರು ಈಗ ಹೆಚ್ಚುವರಿಯಾಗಿ ರೂ.4 ಲಕ್ಷ ನೀಡಿದ್ದಾರೆ. ಇದರಿಂದ ಬರುವ ಬಡ್ಡಿ ಹಣದಿಂದ ಪ್ರಶಸ್ತಿ ನೀಡಲಾಗುತ್ತದೆ' ಎಂದು ಹೇಳಿದರು. `ಪ್ರಶಸ್ತಿಯು ರೂ.30,000 ನಗದು ಮತ್ತು ಸ್ಮರಣಿಕೆ ಒಳಗೊಂಡಿರುತ್ತದೆ. ಕಸಾಪ ಅಧ್ಯಕ್ಷರ ನೇತೃತ್ವದ ಆಯ್ಕೆ ಸಮಿತಿಯು ಪ್ರಶಸ್ತಿಗೆ ಭಾಜನರಾಗುವ ಸಾಧಕರನ್ನು ಆಯ್ಕೆ ಮಾಡಲಿದೆ. ಡಾ. ರಾಜಕುಮಾರ್ ಅವರ ಜನ್ಮ ದಿನವಾದ ಏಪ್ರಿಲ್ 24ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದು ತಿಳಿಸಿದರು.

- **<u>ಭಾರತಕ್ಕೆ ಪರಮಾಪ್ತ ದೇಶ ಸ್ಥಾನಮಾನ ಇನ್ನೂ ದೂರ; ಪಾಕಿಸ್ಥಾನ:</u>** ಭಾರತಕ್ಕೆ ಪರಮಾಪ್ತ ದೇಶದ ಸ್ಥಾನ ಮಾನ ನೀಡುವುದು ಇನ್ನೂ ನಮ್ಮ ಪರಿಗಣನೆಗೆ ಬಂದಿಲ್ಲ. ಏಕೆಂದರೆ ನಮ್ಮ ಸ್ವಂತ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವುದು ನಮಗೆ ಮುಖ್ಯ ಎಂದು ಹಣಕಾಸು ಸಚಿವ ಇಶಾಖ್ ಧರ್ ಹೇಳಿದ್ದಾರೆ. ಭಾರತಕ್ಕೆ ಪರಮಾಪ್ತ ದೇಶ ಸ್ಥಾನಮಾನ ನೀಡುವುದರ ಮೂಲಕ ಅದರ ಅನುಕೂಲಗಳನ್ನು ಪಡೆದುಕೊಳ್ಳಬೇಕು ಎಂದು ವಿಶ್ವ ಬ್ಯಾಂಕ್ ತನ್ನ ವರದಿಯಲ್ಲಿ ಹೇಳಿದ ಬೆನ್ನ ಹಿಂದೆಯೇ ಧರ್ ಹೇಳಿಕೆ ಹೊರಬಿದ್ದಿರುವುದು ಗಮನಾರ್ಹ. ಧರ್ ಅವರು ಪ್ರಧಾನಿ ನವಾಜ್ ಷರೀಫ್ ಅವರ ನಿಕಟವರ್ತಿಯಾಗಿದ್ದಾರೆ. ಭಾರತವೂ ಸೇರಿದಂತೆ ತನ್ನ ನೆರೆಹೊರೆ ದೇಶಗಳ ನಡುವೆ ಸೌಹಾರ್ದಯುತ ಸಂಬಂಧವನ್ನು ಹೆಚ್ಚಿಸಿಕೊಳ್ಳಲು ಪಾಕಿಸ್ತಾನ ಬದ್ಧವಾಗಿದೆ. ಇದರಲ್ಲಿ ಆರ್ಥಿಕ ಸಹಕಾರ ವೃದ್ಧಿ ಕೂಡ ಸೇರಿದೆ ಎಂದು ಅವರು ಹೇಳಿದ್ದಾರೆ. ಭಾರತಕ್ಕೆ ಪರಮಾಪ್ತ ದೇಶ ಸ್ಥಾನಮಾನ ನೀಡುವ ಪ್ರಸ್ತಾಪವನ್ನು ಪಾಕಿಸ್ತಾನ ಪೀಪಲ್ಸ್ ಪಾರ್ಟಿ ತಡೆ ಹಿಡಿಯಿತು. ಇದಕ್ಕೆ ಉದ್ಯಮಿಗಳ ಲಾಬಿ, ತೀವ್ರವಾದಿಗಳ ವಿರೋಧ ಕಾರಣವಾಗಿತ್ತು - ಎಂದು ಅವರು ತಿಳಿಸಿದ್ದಾರೆ.

- **<u>ಇನ್ನು ಮುಂದೆ ವಿಮಾನದಲ್ಲಿ ಪಲಟ್ ಗಳು ನಿದ್ದೆ ಮಾಡಬಹುದು:</u>** ವಿಮಾನದಲ್ಲಿ ಪೈಲಟ್‌ಗಳು ನಿದ್ದೆ ಮಾಡ್ತಾರೆ ಅನ್ನೋ ದೂರು ಬಹಳ ಹಿಂದಿನಿಂದಲೂ ಇತ್ತು. ಕೆಲ ಪ್ರಕರಣಗಳಲ್ಲಿ ತನಿಖೆ ನಡೆದು ಪೈಲಟ್‌ಗಳಿಗೆ ನಿದ್ದೆ ಮಾಡಿದ್ದಕ್ಕಂದೇ ಶಿಕ್ಷೆಯನ್ನೂ ನೀಡಲಾಗಿತ್ತು. ಆದರೆ ಇದೀಗ ಸರ್ಕಾರವೇ ಪೈಲಟ್‌ಗಳಿಗೆ ವಿಮಾನದಲ್ಲಿ ನಿದ್ರೆ ಮಾಡಲು ಅಧಿಕೃತವಾಗಿ ಅನುಮತಿ ನೀಡಿದೆ. ಹಾಗೆಂದು ವಿಮಾನದಲ್ಲಿನ ಎಲ್ಲಾ ಪೈಲಟ್‌ಗಳು ನಿದ್ದೆ ಮಾಡಿಕೊಂಡು ವಿಮಾನ ಓಡಿಸುವಂತಿಲ್ಲ. ಬದಲಾಗಿ ದೂರ ಪ್ರಯಾಣದ ವಿಮಾನಗಳಲ್ಲಿ ಸಹ ಪೈಲಟ್‌ಗಳು ಗರಿಷ್ಠ 40 ನಿಮಿಷಗಳವರೆಗೆ ನಿದ್ರೆ ಮಾಡಲು ನಾಗರಿಕ ವಿಮಾನಯಾನ ಪ್ರಾಧಿಕಾರ ಅನುಮತಿ ನೀಡಿದೆ. ಮೂರು ಗಂಟೆಗಳ ಮತ್ತು ಅದಕ್ಕೂ ಅಧಿಕ ಅವಧಿಯಲ್ಲಿ ಹಾರಾಟದ ಅವಧಿಯ ಪ್ರಯಾಣದಲ್ಲಿ ಮಾತ್ರ ಈ ಸೌಲಭ್ಯ ಸಿಗಲಿದೆ. ಪೈಲಟ್‌ಗಳು 25 ನಿಮಿಷಗಳ ಕಿರುನಿದ್ರೆ

ಮಾಡುವುದರಿಂದ ಅವರ ಕಾರ್ಯಚಟುವಟಿಕೆ ಉತ್ತಮಗೊಳ್ಳಲಿದೆ. ಓರ್ವ ಪೈಲಟ್ ವಿಶ್ರಾಂತಿ ಪಡೆಯುತ್ತಿರುವ ವೇಳೆ ಮತ್ತೋರ್ವ ಪೈಲಟ್ ಯಾವುದೇ ಕಾರಣಕ್ಕೂ ಸೀಟಿನಿಂದ ಎದ್ದು ಹೋಗುವಂತಿಲ್ಲ ಎಂದೂ ಡಿಜಿಸಿಎ ಆದೇಶಿಸಿದೆ.

- **<u>ದೇಶದ ಪ್ರಥಮ ಗಾಲ್ಫ್ ಶಾಲೆ ಬೆಂಗಳೂರಿನಲ್ಲಿ :</u>** ಬೆಂಗಳೂರಿನ ಯಲಹಂಕ ಬಳಿಯ ಕೋಗಿಲು ಎಂಬಲ್ಲಿ ದೇಶದ ಮೊದಲ ಸಂಪೂರ್ಣ ಗಾಲ್ಫ್ ಶಾಲೆಯೊಂದು ಹುಟ್ಟಿಕೊಂಡಿದೆ. ಉಡುಪಿ ಜಿಲ್ಲೆಯ ಬ್ರಹ್ಮಾವರದ ಡಾ. ರೋಹಿತ್ ಶೆಟ್ಟಿ, ಹರೀಶ್ ಕುಮಾರ್ ಶೆಟ್ಟಿ ಹಾಗೂ ಬೆಂಗಳೂರಿನ ರತನ್ ಕುಮಾರ್ ಈ ಮೂವರ ಪ್ರಯತ್ನದ ಫಲವಾಗಿ ಯಲಹಂಕ ಸಮೀಪದ ಕೋಗಿಲು ಎಂಬಲ್ಲಿ 26 ಎಕರೆ ವಿಸ್ತೀರ್ಣದಲ್ಲಿ ತಲೆಎತ್ತಿ ನಿಂತಿದೆ ದೇಶದ ಮೊದಲ ಶೈಕ್ಷಣಿಕ ಗಾಲ್ಫ್ ಕೇಂದ್ರ. ಇದುವ ಸದಸ್ಯರಿಗಾಗಿ ಇರುವ ಗಾಲ್ಫ್ ಕ್ಲಬ್ ಅಲ್ಲ, ಬದಲಾಗಿ ಗಾಲ್ಫ್ ಅನ್ನು ಕ್ರೀಡೆಯಾಗಿ ಮೈಗೂಡಿಸಿಕೊಂಡು ಅದರಲ್ಲಿ ಯಶಸ್ಸು ಕಾಣುವ ವಿದ್ಯಾರ್ಥಿಗಳಿಗಾಗಿಯೇ ಇರುವ ಶಾಲೆಯಾಗಿದೆ. ದೇಶದ ನಂಬರ್ ಒನ್ ಆಟಗಾರ ಅನಿರ್ಬಾನ್ ಲಹರಿ ಮತ್ತು ಚಿಕ್ಕ ರಂಗಪ್ಪನಂಥ ನಂಬರ್ ಒನ್ ಎಮೆಚೂರ್ ಗಾಲ್ಫರ್‌ಗಳು ಬೆಳೆದ ಶಾಲೆ ಇದಾಗಿದೆ.

- **<u>ದೇಶದ ಪ್ರಥಮ ಗಾಲ್ಫ್ ಶಾಲೆ ಬೆಂಗಳೂರಿನಲ್ಲಿ :</u>** ಬೆಂಗಳೂರಿನ ಯಲಹಂಕ ಬಳಿಯ ಕೋಗಿಲು ಎಂಬಲ್ಲಿ ದೇಶದ ಮೊದಲ ಸಂಪೂರ್ಣ ಗಾಲ್ಫ್ ಶಾಲೆಯೊಂದು ಹುಟ್ಟಿಕೊಂಡಿದೆ. ಉಡುಪಿ ಜಿಲ್ಲೆಯ ಬ್ರಹ್ಮಾವರದ ಡಾ. ರೋಹಿತ್ ಶೆಟ್ಟಿ, ಹರೀಶ್ ಕುಮಾರ್ ಶೆಟ್ಟಿ ಹಾಗೂ ಬೆಂಗಳೂರಿನ ರತನ್ ಕುಮಾರ್ ಈ ಮೂವರ ಪ್ರಯತ್ನದ ಫಲವಾಗಿ ಯಲಹಂಕ ಸಮೀಪದ ಕೋಗಿಲು ಎಂಬಲ್ಲಿ 26 ಎಕರೆ ವಿಸ್ತೀರ್ಣದಲ್ಲಿ ತಲೆಎತ್ತಿ ನಿಂತಿದೆ ದೇಶದ ಮೊದಲ ಶೈಕ್ಷಣಿಕ ಗಾಲ್ಫ್ ಕೇಂದ್ರ. ಇದುವ ಸದಸ್ಯರಿಗಾಗಿ ಇರುವ ಗಾಲ್ಫ್ ಕ್ಲಬ್ ಅಲ್ಲ, ಬದಲಾಗಿ ಗಾಲ್ಫ್ ಅನ್ನು ಕ್ರೀಡೆಯಾಗಿ ಮೈಗೂಡಿಸಿಕೊಂಡು ಅದರಲ್ಲಿ ಯಶಸ್ಸು ಕಾಣುವ ವಿದ್ಯಾರ್ಥಿಗಳಿಗಾಗಿಯೇ ಇರುವ ಶಾಲೆಯಾಗಿದೆ. ದೇಶದ ನಂಬರ್ ಒನ್ ಆಟಗಾರ ಅನಿರ್ಬಾನ್ ಲಹರಿ ಮತ್ತು ಚಿಕ್ಕ ರಂಗಪ್ಪನಂಥ ನಂಬರ್ ಒನ್ ಎಮೆಚೂರ್ ಗಾಲ್ಫರ್‌ಗಳು ಬೆಳೆದ ಶಾಲೆ ಇದಾಗಿದೆ.